ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರು ಆದೇಶ ಮಾಡಿರುವಂತೆ ಮೊದಲು ಗುಟ್ಕಾ ವಿಚಾರ ತೆಗೆದುಕೊಳ್ಳಿ. ಮೊದಲು ಇದರ ಬಗ್ಗೆ ಚರ್ಚೆಯಾಗಲಿ, ಈಗ ಅವರು ತಂದಿರುವ ವಿಚಾರಕ್ಕೆ ನಾವು ಉತ್ತರ ಕೊಡುವಾಗ ಹೇಳುತ್ತೇವೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದು ಸುದೀರ್ಘವಾಗಿ ಚರ್ಚೆಯಾಗಬೇಕೆನ್ನುವುದು ಸಭಾನಾಯಕರ, ಕಾನೂನು ಸಚಿವರ ಆಸೆ ಇದ್ದರೆ, ನಾವು ಅದಕ್ಕೆ ತಯಾರಾಗಿದ್ದೇವೆ. ರಾಜ್ಯಪಾಲರ ವಂದನಾನಿರ್ಣಯದ ಮೇಲೆ ಚರ್ಚೆ ಮಾಡುವಾಗ ಸದನದಲ್ಲಿ ಇದೆಲ್ಲದರ ಬಗ್ಗೆ ಗಮನ ಸೆಳೆಯುತ್ತೇನೆ. ಇದಾದ ನಂತರವೂ ಅವರೇನು ತೀರ್ಮಾನ ಕೊಡುತ್ತಾರೆಂದು ನೋಡೋಣ. ಅವರಿಗೆ ಚರ್ಚೆಯಾಗಲೇಬೇಕೆನ್ನುವ ಆಸೆ ಇದ್ದಾಗ ನಾನು ಏತಕ್ಕೆ ಬೇಡ, ಇದನ್ನು ತೆಗೆದು ಹಾಕಿ ಎಂದು ಹೇಳಬೇಕು? ಅದೂ ಆಗಲಿ. ಇವತ್ತು ಸಭೆಯ ಕಲಾಪಗಳು ನಡೆಯುವುದಕ್ಕೆ ಅನಾನುಕೂಲಗಳಾಗುವುದು ಬೇಡ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ವಿರೋಧ ಪಕ್ಷದ ನಾಯಕರ ಅಭಿಪ್ರಾಯವನ್ನು ನಾನು ಸ್ವಾಗತಿಸುತ್ತೇನೆ.

ಅಧ್ಯಕ್ಷರು : ಓ.ಕೆ. ಈಗ ಜಗದೀಶ್ ಶೆಟ್ಟರ್‌ರವರೆ, ತಾವು ಪ್ರಸ್ತಾಪಿಸಿ.

ಶ್ರೀ ಜಗದೀಶ್ ಶೆಟ್ಟರ್ : ಮೊದಲಿಗೆ ವಿಶ್ವೇಶ್ವರ ಹೆಗಡೆಯವರು ಪ್ರಸ್ತಾಪಿಸುತ್ತಾರೆ.

ಅಧ್ಯಕ್ಷರು : ಆಯಿತು, ಹೆಗಡೆಯವರು ತಾವು ಪ್ರಾರಂಭಿಸಿ.

7. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ : ರಾಜ್ಯ ಸರ್ಕಾರ ಗುಟ್ಕಾ ನಿಷೇಧ ಮಾಡಿರುವ ಬಗ್ಗೆ.

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ (ಶಿರಸಿ) :– ಮಾನ್ಯ ಅಧ್ಯಕ್ಷರೆ, ನಾವು ನಿಯಮ 60ರಡಿಯಲ್ಲಿ ಮಂಡಿಸಿರುವ ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ ಪರಿವರ್ತಿಸಿ ಈ ಒಂದು ಅಡಿಕೆ ಬೆಳೆಗಾರರಿಗೆ ಆಗುವಂಥ ಕಷ್ಟವನ್ನು ಈ ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಇದಕ್ಕಾಗಿ ನಾನು ನಿಮಗೆ

ಮೊದಲನೆಯದಾಗಿ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ಈಗಾಗಲೇ ನಮ್ಮ ನಾಯಕರಾದಂಥ ಶ್ರೀ ಜಗದೀಶ್ ಶೆಟ್ಟರ್‌ರವರು ಸಂಕ್ಷಿಪ್ತವಾಗಿ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಸರ್ಕಾರ ಈಗ ತಾನೆ ಅಧಿಕಾರಕ್ಕೆ ಬಂದಿದೆ. ರಾಜ್ಯದ ಜನ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತದ ಅಧಿಕಾರವನ್ನು ಕೊಟ್ಟಿದ್ದಾರೆ. ಇನ್ನೈದು ವರ್ಷಗಳ ಕಾಲ ಕಾಂಗ್ರೆಸ್ ಈ ರಾಜ್ಯದಲ್ಲಿ ಆಡಳಿತ ಮಾಡಬೇಕೆಂದು ಜನಾದೇಶ ಬಂದಿರುವುದನ್ನು ನಾವು ಕಾಣುತ್ತಿದ್ದೇವೆ. ಆದರೆ, ಐದು ವರ್ಷಗಳ ಕಾಲದಲ್ಲಿ ಮಾಡಬೇಕಾದಂತಹ ಕೆಲಸ ಕಾರ್ಯಗಳ ಬಗ್ಗೆ ತಮ್ಮದೇ ಆದಂಥ ಚುನಾವಣೆ ಪ್ರಣಾಳಿಕೆ ಇದೆ, ತಮ್ಮದೇ ಆದಂಥ ರೀತಿ ನೀತಿಗಳಿವೆ. ತಾವು ಆದರಂತೆ ಆಡಳಿತ ನಡೆಸಬೇಕು ಎನ್ನುವಂಥದ್ದು ಎಲ್ಲರ ಅಪೇಕ್ಷೆ ಸಹಜವಾಗಿ ಇದ್ದೇ ಇದೆ. ಆದರೆ, ಸರ್ಕಾರ ಏಕೋ ಆತುರಾತುರವಾಗಿ ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾರೆ, ನನಗೆ ಬಹಳ ಸಂತೋಷ. ಈ ಸಮಯದಲ್ಲಿ ಅಪಾರವಾದಂತಹ ಅನುಭವವನ್ನು ಹೊಂದಿರುವಂಥವರು. ಈ ಸದನದ ಎಲ್ಲಾ ಕಾರ್ಯಚಟುವಟಿಕೆಗಳು ಗೊತ್ತಿದೆ, ನಮ್ಮ ರಾಜ್ಯದ ಜನತೆಯ ಕಷ್ಟ ಸುಖಗಳು ಅವರಿಗೆ ಗೊತ್ತಿದೆ, ಆದರೆ, ಅವರು ತೆಗೆದುಕೊಳ್ಳುವಂಥ ತರಾತುರಿಯ ನಿರ್ಣಯಗಳು ಎಲ್ಲೋ ಒಂದು ಕಡೆಗೆ ರಾಜ್ಯದ ಜನತೆಯಲ್ಲಿ ಒಂದು ಆತಂಕವನ್ನು ಸೃಷ್ಟಿ ಮಾಡುತ್ತಿದೆ. ಅನೇಕ ವಿಚಾರಗಳಿವೆ ನಾನು ಬೇರೆ ಬೇರೆ ವಿಚಾರಗಳನ್ನು ಇಲ್ಲಿ ಈಗ ಹೇಳುವುದಕ್ಕೆ ಬಯಸುವುದಿಲ್ಲ. ಏಕೆಂದರೆ, ಜೂನ್ ಒಂದರಿಂದ ಒಂದು ರೂಪಾಯಿಗೆ 1 ಕೆ.ಜಿ/ ಅಕ್ಕಿ ಕೊಡುತ್ತೇವೆಂದು ಹೇಳಿದರು, ಅದು ಈಗ ಜುಲೈ ನಿಂದ ಕೋಡುತ್ತೇವೆಂದು ಹೇಳಿದ್ದಾರೆ. ನಾನು ಆ ವಿಷಯಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ಬೇಡ, ಬೇಡ. ಈಗ ಗುಟ್ಕಾ ನಿಷೇಧ ಮಾಡಿದ್ದರಿಂದ ಏನು ದುಷ್ಪರಿಣಾಮಗಳು ಆಗಿವೆ ಎನ್ನುವುದನ್ನು ವಿವರಿಸಿ.

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ (ಶಿರಸಿ) :- ಆಯಿತು. ಮಾನ್ಯ ಅಧ್ಯಕ್ಷರೆ, ಈಗ ಅಡಿಕೆ ಬಗ್ಗೆಯೇ ಮಾತನಾಡುತ್ತೇನೆ. ಆದರೆ, ಆತುರಾತುರವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎನ್ನುವುದಕ್ಕೆ ನಾನು ಕೆಲವು ಉದಾಹರಣೆಗಳನ್ನು ಕೊಡುತ್ತಿದ್ದೇನೆಯೇ ಹೊರತು ನಾನು ಬೇರೆ ವಿಷಯಗಳಿಗೆ ಹೋಗುತ್ತಿಲ್ಲ. ಅಗ್ಗದ ಮದ್ಯದ ಬಗ್ಗೆ ಚರ್ಚೆಯಾಯಿತು. ಉಡುಪಿ, ಗೋಕರ್ಣದ ದೇವಸ್ಥಾನಗಳ ಬಗ್ಗೆ ಚರ್ಚೆಯಾಯಿತು. ಗೋಹತ್ಯೆಯ ಬಗ್ಗೆ ಚರ್ಚೆಯಾಯಿತು. ಹೀಗೆ ಅನೇಕ ವಿಷಯಗಳಲ್ಲಿ ಆತುರಾತುರವಾಗಿ ನಿರ್ಣಯ ತೆಗೆದುಕೊಂಡು ಅದಕ್ಕೆ ಆಮೇಲೆ ಸಮಜಾಯಿಷಿ ಕೊಡುತ್ತಿರುವುದನ್ನು ನಾವು

ಕಾಣುತ್ತಿದ್ದೇವೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಆಡಳಿತ ಪಕ್ಷದ ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ರಾಜ್ಯದ ಜನ ತಮಗೆ ಐದು ವರ್ಷ ಅಧಿಕಾರ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಆ ಪ್ರಕಾರ ರಾಜ್ಯದ ಜನರ ಆ ಭಾವನೆಗಳನ್ನು ಅರ್ಥೈಸಿಕೊಂಡು ಜನರ ಹಿತವನ್ನು ಕಾಪಾಡುವ ನಿಟ್ಟಿನಲ್ಲಿ ತಾವು ಆಡಳಿತ ನಡೆಸುವುದಕ್ಕೆ ಮುಂದಾಗಬೇಕು ಎನ್ನುವಂಥದ್ದು ನಮ್ಮ ಅಪೇಕ್ಷೆ ಇದೆ. ಈಗ ಆತುರಾತುರವಾಗಿ ನಿರ್ಣಯ ತೆಗೆದುಕೊಂಡರೆ ಏನಾಗುತ್ತದೆ ಎನ್ನುವುದು ಗುಟ್ಕಾ ನಿಷೇಧ ಮಾಡಿರುವುದೇ ನಮ್ಮ ಕಣ್ಣೆದುರಿಗಿರುವ ಮುಖ್ಯವಾಗಿರುವ ವಿಷಯ. ಇವತ್ತು ಅನೇಕ ಪತ್ರಿಕೆಗಳು ಸರ್ಕಾರ ಈ ರೀತಿಯ ಆತುರದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿರುವುದರ ಬಗ್ಗೆ ಸಾಕಷ್ಟು ವಿಶ್ಲೇಷಣಾತ್ಮಕವಾದ ವರದಿಗಳನ್ನು ಪ್ರಕಟಿಸಿವೆ. "ವಿವೇಚನೆಗೆ ಮೊದಲು ವಿವೇಕ ಇರಲಿ, ಸಿದ್ದರಾಮಣ್ಣನವರೆ" ಎನ್ನುವ ಒಂದು ಲೇಖನ ಬಂದಿದೆ. ಏಕೆಂದರೆ ವಿವೇಕದ ಹಿನ್ನೆಲೆಯಲ್ಲಿ ಯೋಚನೆ ಮಾಡದೆ ಆತುರಾತುರವಾಗಿ ನಿರ್ಣಯಗಳನ್ನು ಮಾಡುವುದಕ್ಕೆ ಹೋದರೆ ರಾಜ್ಯದ ಜನ ಕಷ್ಟ ಅನುಭವಿಸಬೇಕಾಗುತ್ತದೆ, ಗುಟ್ಕಾ ನೀಷೇಧ ಮಾಡಿರುವುದು ಇದಕ್ಕೆ ಒಂದು ತಾಜಾ ಉದಾಹರಣೆ ಇದೆ. ಗುಟ್ಕಾ ನಿಷೇಧ ಮಾಡಿರುವುದು ಎರಡು ಕೋಟಿ ಜನರ ಜೀವನಕ್ಕೆ ನೇರವಾಗಿ ಪರೋಕ್ಷವಾಗಿ ಅನ್ವಯವಾಗುವಂಥ ವಿಷಯ, ರಾಜ್ಯದಲ್ಲಿ ಸುಮಾರು ಐವತ್ತು ಲಕ್ಷ ಜನ ಅಡಿಕೆ ಬೆಳೆಗಾರರು ಇದ್ದಾರೆ. ಅವರ ಕುಟುಂಬಗಳು ಸುಮರು ಹದಿನಾರು ಜಿಲ್ಲೆಗಳಲ್ಲಿ ಅಡಿಕೆ ಬೆಳೆಯನ್ನು ಬೆಳೆಸುತ್ತಿದ್ದಾರೆ. ನಮ್ಮ ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ದಕ್ಷಿಣ ಕನ್ನಡ , ಚಿತ್ರದುರ್ಗ, ದಾವಣಗೆರೆ ಹಾಸನ, ಕೊಡಗು, ತುಮಕೂರು, ಬೆಂಗಳೂರು ಇರಬಹುದು. ಬಹುತೇಕ ಹದಿನಾರು ಜಿಲ್ಲೆಗಳಲ್ಲಿ ಅಡಿಕೆ ಬೆಳೆಯನ್ನು ಬೆಳೆಯುತ್ತಿದ್ದಾರೆ. ರಾಜ್ಯದಲ್ಲಿ ಆರು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರೈತರು ಅಡಿಕೆ ಬೆಳೆದು ಜೀವನ ಮಾಡುತ್ತಿದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ರೈತರು ಅಡಿಕೆ ಬೆಳೆದು ತಮ್ಮ ಜೀವನ ನಿರ್ವಹಣೆ ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ ಅವರು ಅನೇಕ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಈಗಾಗಲೇ ಅನೇಕ ರೀತಿಯ ರೋಗ-ರುಜ್ಜಿನಗಳಿಂದ ಅಡಿಕೆ ಬೆಳೆಗಾರರು ಇನ್ನಿಲ್ಲದ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ, ಚಿಕ್ಕಮಗಳೂರು ಜಿಲ್ಲೆಯ ತೀರ್ಥಹಳ್ಳಿ ಇತ್ಯಾದಿ ಭಾಗದಲ್ಲಿ ಹಳದಿ ರೋಗದ ಕಾರಣದಿಂದಾಗಿ ಅಡಿಕೆ ಹೇಗೆ ಅಲ್ಲಿ ಸಂಪೂರ್ಣವಾಗಿ ನಾಶವಾಗಿ ಹೋಗುತ್ತದೆ ಎನ್ನುವುದನ್ನು ನಾವೆಲ್ಲಾ ಪ್ರತ್ಯಕ್ಷವಾಗಿ ನೋಡಿದಂತಹವರಿದ್ದೇವೆ. ಸರ್ಕಾರಕ್ಕೂ ಈ ಬಗ್ಗೆ ಗೊತ್ತಿದೆ. ಗೋರಖ್ ಸಿಂಗ್ ಸಮಿತಿ ವರದಿ ಕೊಟ್ಟಿದೆ.

ಅಧ್ಯಕ್ಷರು : ಮಾನ್ಯ ಕಾಗೇರಿಯವರೆ, ನಿಮ್ಮ ನಿರ್ಣಯ ಈ ರೀತಿ ಇದೆ. ರಾಜ್ಯದಲ್ಲಿ ಗುಟ್ಕಾ ನಿಷೇಧ ಮಾಡುವ ತೀರ್ಮಾನ ಕೈಗೊಳ್ಳುವ ಮೂಲಕ ಅಡಿಕೆ ಬೆಳೆಗಾರರ ಹಿತಾಸಕ್ತಿಯನ್ನು ಸರ್ಕಾರ ಕಡೆಗಣಿಸಿದೆ. ಇದಕ್ಕೆ confine ಆಗಿ, ಹೇಗೆ ಎನ್ನವುದನ್ನು ಹೇಳಿ.

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ (ಶಿರಸಿ) :- ಮಾನ್ಯ ಅಧ್ಯಕ್ಷರೆ, ನಾನು ಅದನ್ನೇ ಹೇಳುತ್ತಿದ್ದೇನೆ. ಆದರ ನೇರವಾಗಿ ಒಂದು ವಾಕ್ಯದಲ್ಲಿ ಮುಗಿಸಲಿಕ್ಕೆ ಆಗುತ್ತದೆಯೆ? ಸಭಾಧ್ಯಕ್ಷರೆ, ತಮಗೂ ಗೊತ್ತಿದೆ. ರೈತರ ಕಷ್ಟವನ್ನು ಇಂತಹ ಸದನದಲ್ಲಿ ಪ್ರಸ್ತಾಪಿಸಿ ಎಂದೇ ಜನ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ತಾವು ಸಾಗರ ಪ್ರಾಂತ್ಯದಿಂದ ಬಂದವರು. ಸಾಗರದಲ್ಲೂ ಅಡಿಕೆ ಎಷ್ಟು ದೊಡ್ಡ ಪ್ರದೇಶದಲ್ಲಿ ಬೆಳೆಯುತ್ತಾರೆ ಎಂಬುದು ತಮಗೆ ಗೊತ್ತಿದೆ.

ಶ್ರೀ ಸಿ.ಟಿ.ರವಿ : ತಾವೇ ಒಂದು ಸೂಚನೆ ಕೊಟ್ಟು ಗುಟ್ಕಾ ನಿಷೇಧ ಮಾಡಿರುವುದನ್ನು ವಾಪಸ್ ತೆಗೆದುಕೊಂಡಿದ್ದೇವೆಂದು ಒಂದು ಸಾಲಿನಲ್ಲಿ ಹೇಳಿಬಿಟ್ಟರೆ ಚರ್ಚೆಯ ಅವಶ್ಯಕತೆಯಿಲ್ಲ ಮತ್ತು ನಿಯಮ 69ಕ್ಕೆ ಕನವರ್ಟ್ ಮಾಡುವುದೇ ಬೇಡ. ಅಡಿಕೆ ಬೆಳೆಗಾರರ ಹಿತರಕ್ಷಣೆಯ ಸಲುವಾಗಿ ನಿಷೇಧವನ್ನು ರದ್ದುಗೊಳಿಸಿದ್ದೇವೆಂದು ಒಂದು ಸಾಲಿನ ಉತ್ತರ ಕೊಟ್ಟು ಬಿಟ್ಟರೆ ಸಾಕು. ಚರ್ಚೆಯೇ ಬೇಡ. ತಾವೇ ಒಂದು ಸೂಚನೆ ಕೊಟ್ಟು ಬಿಡಿ.

ಅಧ್ಯಕ್ಷರು : ನನ್ನ ಕೆಲಸ ಅಲ್ಲ ಅದು.

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ (ಶಿರಸಿ) :- ಮಾನ್ಯ ಅಧ್ಯಕ್ಷರೆ, ಆತುರಾತುರವಾಗಿ ನಿರ್ಣಯ ತೆಗೆದುಕೊಂಡರೆ ಎಷ್ಟು ದೊಡ್ಡ ರೈತ ಸಮುದಾಯಕ್ಕೆ ತೊಂದರೆಯಾಗುತ್ತದೆ ಎನ್ನುವುದಕ್ಕೆ ಹೆಳಬೇಕಾಗುತ್ತದೆ. ನಾನು ಈಗಾಗಲೇ ಹೇಳಿದ ಹಾಗೆ ಸುಮಾರು ಹದಿನಾರು ಜಿಲ್ಲೆಗಳಲ್ಲಿ ಸುಮಾರು ಆರು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಗಾರರು ಅಡಿಕೆ ಬೆಳೆಯನ್ನು ಬೆಳೆದು ತಮ್ಮ ಜೀವನ ನಡೆಸುತ್ತಿದ್ದಾರೆ. ಅಡಿಕೆ ಬೆಳೆಗಾರರು ಕಷ್ಟಗಟ ಅನುಭವಿಸುವುದಕ್ಕೆ ಕಾರಣ ಈ ಹಳದಿ ಎಲೆ ರೋಗ ಎಂದು ಹೇಳಿದೆ. ಕಾಂಗ್ರೆಸ್‌ನವರಿಗಂತೂ ಬಹಳ ಸ್ಪಷ್ಟವಾಗಿ ಗೊತ್ತಿದೆ. ಗೋರಖ್ ಸಿಂಗ್ ಸಮಿತಿಯ ವರದಿಯನ್ನು ನಾವು ಜಾರಿ ಮಾಡೇ ಮಾಡುತ್ತೇವೆಂದು ಚಿಕ್ಕಮಗಳೂರು ಉಪ ಚುನಾವಣೆಯಲ್ಲಿ ಹೇಳಿದ್ದೇ ಹೇಳಿದ್ದು. ಗೆದ್ದ ನಂತರ ಅದನ್ನು ಮರೆತರು.

ಅದು ಬಿಡಿ, ಅದು ಬೇರೆ ವಿಷಯವಾಗಿರುವುದರಿಂದ ಆ ವಿಷಯವನ್ನು ವಿವರವಾಗಿ ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಇವತ್ತಿನದಿವಸ ಸರಿಯಾಗಿ ಮಳೆ ಇಲ್ಲದ ಇರುವಂಥ ಸಂದರ್ಭದಲ್ಲಿ ಅಡಿಕೆ ಬೆಳೆಗಾರರು ಕಷ್ಟದಲ್ಲಿದ್ದಾರೆ. ಒಂದು ಕಡೆ ಅತಿವೃಷ್ಟಿಯಾಗಿ ಕೊಳೆ ರೋಗ

ಅಥವಾ ಬೇರೆ ಇತರ ರೋಗಗಳಿಂದಾಗಿ ಅಡಿಕೆ ಬೆಳೆಗಾರರು ಕಷ್ಟದಲ್ಲಿದ್ದಾರೆ. ಅಡಿಕೆ ಬೆಲೆಗೆ ಏರಿಳಿತದಿಂದ ನಾವು ಯಾವ ರೀತಿಯಾಗಿ ಕಷ್ಟವನ್ನು ಅನುಭವಿಸುತ್ತಿದ್ದೇವೆಂಬುದು ತಮಗೂ ಸಹ ಗೊತ್ತಿದೆ. ಇದಲ್ಲದೆ ಅಡಿಕೆ ಬೆಳೆಗಾರರು ಅನೇಕ ರೀತಿಯ ಸಾಲದ ಶೂಲಗಳಲ್ಲಿ ಸಿಲುಕಿಕೊಂಡು ಜೀವನ ನಿರ್ವಹಣೆ ಮಾಡುವುದು ಕಷ್ಟವಾಗಿದು ಎಂಬುದು ನಮ್ಮೆಲ್ಲರಿಗೂ ಸಹ ಗೊತ್ತಿದೆ. ಇವತ್ತಿನದಿವಸ ನಮ್ಮ ಉತ್ತರ ಕರ್ನಾಟಕ ಮತ್ತು ಶಿವಮೊಗ್ಗ ಜಿಲ್ಲೆಯ ಕೆಲವು ಭಾಗದಲ್ಲಿ ಆಸಾಮಿ ಖಾತೆ ಸಾಲದ ವಿಷಯ ಇದೆ. ರೈತರು ಅಡಿಕೆ ಬೆಳೆಯನ್ನು ಬೆಳೆಯುವುದಕ್ಕಾಗಿ ಮತ್ತು ಅನೇಕ ರೀತಿಯ ಕೆಲಸ ಮಾಡುವುದಕ್ಕೆ ಸಹಕಾರಿ ಸಂಘಗಳಿಂದ ಆಸಾಮಿ ಖಾತೆ ಸಾಲವನ್ನು ನಮ್ಮ ಜಿಲ್ಲೆಯಲ್ಲಿ ಸುಮಾರು 300 ಕೋಟಿ ರೂಪಾಯಿಗಳಷ್ಟು ತೆಗೆದುಕೊಂಡಿದ್ದಾರೆ. ಈ ಸಾಲವನ್ನು ಮನ್ನಾ ಮಾಡಿಸುತ್ತೇವೆಂದು ಚುನಾವಣೆ ಸಂದರ್ಭದಲ್ಲಿ ಆಡಳಿತ ಪಕ್ಷದವರು ಹೇಳಿದ್ದಾರೆ. ಆದ್ದರಿಂದ, ಅದು ಮನ್ನಾ ಆಗಬೇಕೆಂಬುದು ನಮ್ಮ ಅಪೇಕ್ಷೆ ಇದೆ. ಆದರೆ, ಇವತ್ತಿನದಿವಸ ಈ ರೀತಿಯಾಗಿ ಸಾಲದ ಶೂಲಕ್ಕೆ ಸಿಲುಕಿಕೊಂಡಿರುವವರು ಇದ್ದಾರೆ. ಹಾಗೆಯೇ ರೋಗರುಜ್ಜಿನಗಳಿಂದ ಕಷ್ಟವನ್ನು ಅನುಭವಿಸುತ್ತಿರುವವರೂ ಇದ್ದಾರೆ. ಪ್ರಕೃತಿಯ ಜೊತೆಯಲ್ಲಿ ರೈತರು ಜೀವನವನ್ನು ಯಾವರೀತಿಯಾದ ಒಂದು ಆತಂಕದಲ್ಲಿ ನಡೆಸುತ್ತಿದ್ದಾರೆಂಬುದು ನಮ್ಮೆಲ್ಲರಿಗೂ ಸಹ ಗೊತ್ತಿರುವ ಸಂಗತಿಯಾಗಿದೆ. ಅನೇಕ ರೀತಿಯಲ್ಲಿ ರೈತರನ್ನು ಪ್ರತಿನಿಧಿಸುವಂಥವರು ನಾವಿಲ್ಲಿದ್ದೇವೆ. ರೈತರು ಎಂದರೆ, ಪ್ರಕೃತಿಯ ಜೊತೆಯಲ್ಲಿ ಆಂತಕದ ಜೀವನವನ್ನು ನಡೆಸುತ್ತಿರುವಂಥವರು ಎಂದು ನಮ್ಮೆಲ್ಲರಿಗೂ ಸಹ ಗೊತ್ತಿದೆ. ಕಳೆದ ಸಲ ನಮ್ಮ ರಾಜ್ಯದಲ್ಲಿ 185 ತಾಲ್ಲೂಕುಗಳಲ್ಲಿ ಬರಗಾಲ ಇತ್ತು. ಬರಗಾಲದ ಸಂದರ್ಭವನ್ನು ಎದುರಿಸಿ, ಈಗ ಮಳೆಗಾಗಿ ಆಕಾಶವನ್ನು ನೋಡುತ್ತಿರುವಂಥ ಸಂದರ್ಭದಲ್ಲಿ ಅಡಿಕೆ ಬೆಳೆಗಾರರ ಗಾಯದ ಮೇಲೆ ಮತ್ತೊಂದು ಬರೆ ಎಳೆಯುವಂತೆ ಇವತ್ತು ಸರ್ಕಾರ ಏಕಾಏಕಿ ನಿರ್ಣಯ ತೆಗೆದುಕೊಂಡು ಗುಟ್ಕಾ ನಿಷೇಧ ಮಾಡಿರುವಂಥದರ ಬಗ್ಗೆ ಅಡಿಕೆ ಬೆಳೆಗಾರರ ಪರವಾಗಿ ಈ ಸದನದಲ್ಲಿ ಅದನ್ನು ಉಗ್ರವಾಗಿ ಖಂಡಿಸುತ್ತೇನೆ. ಸರ್ಕಾರ ಈ ಆದೇಶವನ್ನು ಹಿಂತೆಗೆದುಕೊಳ್ಳಬೇಕೆಂಬ ಆಗ್ರಹವನ್ನು ಈ ಸದನದ ಮೂಲಕ ಮಾಡುವುದಕ್ಕೆ ನಾನು ಬಯಸುತ್ತೇನೆ. ಸರ್ಕಾರ ಬಹಳ ಜವಾಬ್ದಾರಿಯಿಂದ ರೈತರ ಪರವಾಗಿ ನಿರ್ಣಯಗಳನ್ನು ತೆಗೆದುಕೊಳ್ಳಬೇಕು. ಆತುರ ಆತುರವಾಗಿ ಈ ರೀತಿಯಾಗಿ ಮಾಡುವುದು ಸರಿಯಲ್ಲ. ಆದ್ದರಿಂದ. ಈ ಬಗ್ಗೆ ಸರ್ಕಾರ ನೋಟಿಫಿಕೇಷನ್ ಹೊರಡಿಸಿ ಸುಪ್ರೀಂ ಕೋರ್ಟ್‌ಗೆ ಕೊಡಬೇಕೆಂದು 30ನೇ ತಾರೀಖಿನ ದಿವಸ ಸರ್ಕಾರ ಹೊರಡಿಸಿರುವ ಆದೇಶವನ್ನು ತಕ್ಷಣ ತಡೆ

ಹಿಡಿಯಬೇಕು, ಹಾಗೆಯೇ ಇದನ್ನು ತಡೆ ಹಿಡಿದಿದ್ದೇವೆಂದು ಸರ್ಕಾರ ತಕ್ಷಣ ಘೋಷಣೆ ಮಾಡಬೇಕು. ಅಂದರೆ, ಇವತ್ತು ಆ ಆದೇಶವನ್ನು ತಡೆಹಿಡಿದಿದ್ದು, ನಾವೂ ಸಹ ಅಡಿಕೆ ಬೆಳೆಗಾರರ ಪರವಾಗಿ ಮತ್ತು ಅವರ ಹಿತರಕ್ಷಣೆ ಮಾಡುವುದಕ್ಕೆ ಸಿದ್ಧರಿದ್ದೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕು.

ಅಧ್ಯಕ್ಷರು : ಮಾನ್ಯ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿಯವರೆ, ಒಂದು ನಿಮಿಷ ಇರಿ. ತಾವು ಪೂರ್ವಭಾವಿಯಾಗಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅಂದರೆ ಬೆಳೆಗಾರರ ಸ್ಥಿತಿಗತಿಗಳು ಏನೆಂಬುದುದರ ಬಗ್ಗೆ ಹೇಳಿದ್ದೀರಿ. ಆದರೆ ಗುಟ್ಕಾ ನಿಷೇಧ ಮಾಡಿರುವುದರಿಂದ ಅಡಿಕೆ ಬೆಳೆಗಾರರ ಮೇಲೆ ಏನು ದುಷ್ಪರಿಣಾಮವಾಗುತ್ತದೆ ಎಂಬುದನ್ನು ಬಿಡಿಸಿ ಹೇಳಿ?

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ :- ಮಾನ್ಯ ಅಧ್ಯಕ್ಷರೆ, ಸರ್ಕಾರ ಏಕಾಏಕಿ ಈ ರೀತಿಯಾದ ನಿರ್ಧಾರ ಮಾಡಿರುವುದರಿಂದ. . . .

ಶ್ರೀ ಬಸವರಾಜ ರಾಯರೆಡ್ಡಿ :- ಮಾನ್ಯ ಕಾಗೇರಿಯವರೆ, ನನ್ನ ಮಾತನ್ನು ತಾವು ದಯವಿಟ್ಟು ಕೇಳಿ. ಸರ್ಕಾರ ಗುಟ್ಕಾ ನಿಷೇಧ ಮಾಡಿದೆಯೇ ಹೊರತು ಅಡಿಕೆ ನಿಷೇಧ ಮಾಡಿಲ್ಲ. ಸುಪ್ರೀಂ ಕೋರ್ಟ್‌ನ ತೀರ್ಪಿನಂತೆ ಗುಟ್ಕಾ ನಿಷೇಧ ಮಾಡಬೇಕಾದದ್ದು ನಿಮಗೆ ಅಥವಾ ಯಾರಿಗಾದರೂ ಅದು ಅನಿವಾರ್ಯವಾಗಿತ್ತು. ಅಡಿಕೆಯನ್ನು ನಿಷೇಧ ಮಾಡಿದ್ದರೆ ಅಡಿಕೆ ಬೆಳೆಗಾರರಿಗೆ ತೊಂದರೆಯಾಗುತ್ತದೆ. ಆದ್ದರಿಂದ, ಅದಕ್ಕೆ ಬೇರೆ ಏನು ವ್ಯವಸ್ಥೆ ಮಾಡಬೇಕೆಂಬುದರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಆದ್ದರಿಂದ, ನಾನು ಹೇಳುವುದೇನೆಂದರೆ, ಜನರ ಆರೋಗ್ಯದ ದೃಷ್ಟಿಯಿಂದ ತಾವು ಗುಟ್ಕಾ ನಿಷೇಧ ಪರವಾಗಿದ್ದೀರೋ ಅಥವಾ ಇಲ್ಲವೋ ಎಂಬ ಬಗ್ಗೆ ಮೊದಲು ಸ್ಪಷ್ಟಪಡಿಸಬೇಕು. ಮೊದಲು ತಾವು ಇದರ ಬಗ್ಗೆ ದಯಮಾಡಿ ಅರ್ಥ ಮಾಡಿಕೊಳ್ಳಿ.

ಶ್ರೀ ಗೋವಿಂದ ಎಂ.ಕಾರಜೋಳ :- ಮಾನ್ಯ ಬಸವರಾಜ ರಾಯರೆಡ್ಡಿಯವರೆ, ತಾವು ಉತ್ತರ ಕೊಡುವುದಕ್ಕೆ ಮಂತ್ರಿ ಆಗುವವರೆಗೂ ಕಾಯಬೇಕಾಗುತ್ತದೆ!

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವರಾಜ ರಾಯರೆಡ್ಡಿಯವರು ಬಹಳ ಅತುರ ಆತುರವಾಗಿದ್ದಾರೆ. ಅದರ ಬಗ್ಗೆ ನನ್ನದೇನೂ ಆಕ್ಷೇಪ ಇಲ್ಲ. ನಮಗೆ ಗೊತ್ತಿರುವಂತೆ ಇವತ್ತಿನದಿವಸ ಅಡಿಕೆಯಿಂದ ಅನೇಕ ರೀತಿಯ ಉತ್ಪನ್ನಗಳನ್ನು ಸಿದ್ಧಪಡಿಸುತ್ತಿದ್ದಾರೆ. ಅಡಿಕೆ ಅತ್ಯಂತ ಒಂದು ಪವಿತ್ರವಾದಂಥ ವಸ್ತು. ಕೃಷಿಯಿಂದ ಅಡಿಕೆ ಬರುತ್ತಿರುವುದೆಂದು ನಮಗೆಲ್ಲ ಗೊತ್ತಿದೆ. ಅಡಿಕೆಗೆ ಸಂಬಂಧಪಟ್ಟಂತೆ ಒಂದು ಗಾದೆ ಮಾತು ಇದೆ. ಅದೇನೆಂದರೆ, ಅಡಿಕೆ ಕದ್ದವನಿಗೆ ಆನೆ ಕೊಟ್ಟರೂ ಅದರ

ಮಾನ ಬರುವುದಿಲ್ಲ ಎಂದು ಅಂದರೆ, ಅಡಿಕೆ ಒಂದು ಪವಿತ್ರವಾದಂಥದ್ದು ಎಂದು ನಮ್ಮೆಲ್ಲರಿಗೂ ಸಹ ಗೊತ್ತಿದೆ. ಅಡಿಕೆ ಆರೋಗ್ಯಕ್ಕೆ ಹಾನಿಕರ ಎಂದು ಯಾವತ್ತೂ ಸಹ ಯಾವುದೇ ಸಂದರ್ಭದಲ್ಲಿಯೂ ಸಹ ಯಾರೂ ಹೇಳಿಲ್ಲ. ಇವತ್ತಿನದಿವಸ ಅಡಿಕೆಗೆ ಕೆಟ್ಟ ಹೆಸರು ತರಬೇಕೆಂಬ ಒಂದು ದೊಡ್ಡ ಷಡ್ಯಂತ್ರ ನಡೆದಿರುವುದು ಕಾಣುತ್ತಿದ್ದೇವೆ. ಅಂದರೆ ಒಂದು ದೊಡ್ಡ ಲಾಬಿ ಇದರ ಹಿಂದೆ ಕೆಲಸ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇವತ್ತು ಕೇಂದ್ರದ ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಕಾಯಿದೆ ಅಡಿಯಲ್ಲಿ ಅಡಿಕೆಯನ್ನು ಆಹಾರ ಪದಾರ್ಥ ಎಂದು ಸೇರಿಸಿರುವುದೇ ತಪ್ಪೆಂಬ ವಾದವನ್ನು ನಾವು ಮಾಡುತ್ತಿದ್ದೇವೆ. ಅಡಿಕೆ ಆಹಾರವಸ್ತು ಅಲ್ಲ. ಆದ್ದರಿಂದ, ಇದನ್ನು ಆ ಪಟ್ಟಿಯಿಂದ ಹಿಂತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಅನೇಕ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಿದ್ದೇವೆ. ಈ ಒಂದು ಆಧಾರದ ಹಿನ್ನೆಲೆಯಲ್ಲಿ ಅನೇಕರು ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಹಾಕಿದ್ದಾರೆ. ಆಹಾರವಸ್ತು ಎಂದು ಅದು ಪರಿಗಣನೆಯಾಗಿರುವುದರಿಂ ಅದನ್ನು ಆದ ಕಾಯಿದೆಯಿಂದ ಹಿಂತೆಗೆದುಕೊಳ್ಳಬೇಕೆಂದು ಅಡಿಕೆ ಬೆಳೆಗಾರರ ಹೋರಾಟ ಇದೆ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಮಾನ್ಯ ಸಿದ್ದರಾಮಯ್ಯನವರು ವಿರೋಧ ಪಕ್ಷದ ನಾಯಕರಾಗಿದ್ದಂಥ ವೇಳೆಯಲ್ಲಿ ಕೇಂದ್ರ ಸರ್ಕಾರದಲ್ಲಿ ಮಾನ್ಯ ಪ್ರಧಾನ ಮಂತ್ರಿಯವರನ್ನು ಒಳಗೊಂಡತೆ ಎಲ್ಲ ಸಚಿವರನ್ನು ಭೇಟಿ ಮಾಡಿ ಆಹಾರ ಪದಾರ್ಥ ಎಂಬ ಪಟ್ಟಿಯಿಂದ ಅಡಿಕೆಯನ್ನು ಹಿಂತೆಗೆದುಕೊಳ್ಳಬೇಕೆಂದು ಆಗ್ರಹವನ್ನು ಮಾಡಲಾಗಿದೆ. ಹಾಗೆಯೇ ಆ ಸಂದರ್ಭದಲ್ಲಿ ಮಾನ್ಯ ಸಿದ್ದರಾಮಯ್ಯನವರು ಅಡಿಕೆ ಬೆಳೆಗಾರರ ಪರವಾಗಿ ಬಲವಾದ ವಿಚಾರವನ್ನು ಮಂಡಿಸಿದ್ದಾರೆ. ಇದೇ ರೀತಿಯಾದ ಅನೇಕ ವಿಷಯಗಳು ಇವೆ. ಆದರೆ, ಇದು ಬಹಳ ದೊಡ್ಡ ಷಡ್ಯಂತರದ ಭಾಗವಾಗಿದೆ. ಇದರ ಹಿಂದೆ ಯಾವ ದೊಡ್ಡ ಲಾಬಿ ಕೆಲಸ ಮಾಡುತ್ತಿದೆ ಎಂಬುದನ್ನು ಬಹಳ ಎಚ್ಚರಿಕೆಯಿಂದ ನೋಡಬೇಕಾಗಿದೆ. ಗುಟ್ಕಾ ಆರೋಗ್ಯಕ್ಕೆ ಹಾನಿಕರ ಎಂಬ ವಿಷಯವನ್ನು ಮಾನ್ಯ ರಾಯರೆಡ್ಡಿಯವರು ಇಲ್ಲಿ ಪ್ರಸ್ತಾಪ ಮಾಡಿದರು. ಆದ್ದರಿಂದ, ನಾನು ಹೇಳುವುದೇನೆಂದರೆ, ಆರೋಗ್ಯಕ್ಕೆ ಹಾನಿಕರವಾದ ಎಲ್ಲ ವಸ್ತುಗಳನ್ನು ಕೇಂದ್ರ ಸರ್ಕಾರ ಅಥವಾ ಸುಪ್ರೀಂ ಕೋರ್ಟ್, ರಾಜ್ಯ ಸರ್ಕಾರ ಬಂದ್ ಮಾಡಲಾಗುತ್ತದೆಯೇ ಎಂದು ಇವತ್ತಿನದಿವಸ ಘೋಷಣೆ ಮಾಡಲಿ. ತಂಬಾಕು, ಬೀಡಿ ಮತ್ತು ತಂಬಾಕಿನಿಂದ ಉತ್ಪಾದನೆ ಆಗುತ್ತಿರುವಂಥ ಎಲ್ಲ ಸಂಗತಿಗಳು ಆಹಾರಕ್ಕೆ ಹೆಚ್ಚು ಹಾನಿಕಾರವೋ ಅಥವಾ ಅಡಿಕೆಯಿಂದ ತಯಾರಿಸಿರುವಂಥ ಗುಟ್ಕಾದಿಂದ ಹೆಚ್ಚು ಹಾನಿಕಾರವೋ

ಎಂಬ ಬಗ್ಗೆ ಚರ್ಚೆಯಾಗಲಿ ಇವತ್ತಿನದಿವಸ ವಿಜ್ಞಾನಿಗಳು ಅನೇಕ ರೀತಿಯಲ್ಲಿ ಸಂಶೋಧನೆ ಮಾಡಿ ಆರೋಗ್ಯಕ್ಕೆ ಹಾನಿಕಾರವಾದಂಥ ಅನೇಕ ಸಂಗತಿಗಳನ್ನು ತೆಗೆದು ಹಾಕಬೇಕೆಂದು ಹೇಳಿದ್ದಾರೆ. ಸುಪ್ರೀಂ ಕೋರ್ಟ್ ಟೊಬ್ಯಾಕೋ ಮತ್ತು ನಿಕೋಟಿನ್ ಅನ್ನು ನಿಷೇಧ ಮಾಡಬೇಕೆಂಬ ಮಾತನ್ನು ಹೇಳಿದೆ. ಇವತ್ತಿನದಿವಸ ಅಡಿಕೆ ಬೆಳೆಗಾರರು ಏನು ಹೇಳುತ್ತಿದ್ದಾರೆಂದರೆ, ಗುಟ್ಕಾದಲ್ಲಿರುವಂಥ ಟೊಬ್ಯಾಕೋ ಮತ್ತು ನಿಕೋಟಿನ್ ಅನ್ನು ಹೊರತುಪಡಿಸಿ ಅಡಿಕೆಯನ್ನು ಉಪಯೋಗಿಸಿ ಬೇರೆ ಉತ್ಪನ್ನವನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾವು ಹೇಳುತ್ತಿದ್ದೇವೆ. ಈ ರೀತಿಯಾದ ಅನೇಕ ವಿಷಯಗಳು ಇವೆ. ಆದ್ದರಿಂದ, ಚರ್ಚೆಗೆ ತಾವು ಅವಕಾಶ ಕೊಡಬೇಕು. ಚರ್ಚೆಗೆ ಅವಕಾಶ ಇಲ್ಲದೆ ಏಕಾಏಕಿ ಸರ್ವಾಧಿಕಾರಿಯಂತೆ ರೈತರ ವಿರೋಧಿಯಾದಂಥ ಒಂದು ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿರುವುದನ್ನು ಈ ರಾಜ್ಯದ ಜನರು ಮತ್ತು ಅಡಿಕೆ ಬೆಳೆಗಾರರು ಒಪ್ಪವುದಿಲ್ಲವೆಂಬ ಮಾತನ್ನು ಹೇಳುತ್ತೇನೆ. ಈ ರೀತಿಯಾದ ಹತ್ತಾರು ಸಂಗತಿಗಳ ಬಗ್ಗೆ ಚರ್ಚೆ ಮಾಡಬೇಕಾದಂಥ ಅಗತ್ಯತೆ ಇದೆ. ಇವತ್ತಿನ ದಿವಸ ಸರ್ಕಾರ ಯಾವುದೋ ಒಂದು ಪ್ರಬಲವಾದ ಲಾಬಿಗೆ ಮಣಿದು ಗುಟ್ಕಾ ನಿಷೇಧಕ್ಕೆ ಸರ್ಕಾರ ಮುಂದಾಗಿದೆ ಎಂದು ಜನರು ಹೊರಗಡೆ ಮಾತನಾಡುತ್ತಿದ್ದಾರೆ. ಈ ವಿಷಯದಲ್ಲಿ ನಾನೇನೂ ಹೇಳುವುದಕ್ಕೆ ಹೋಗುವುದಿಲ್ಲ. ಗುಟ್ಕಾ ನಿಷೇಧದ ಹಿಂದೆ ಅನೇಕ ಲಾಬಿಗಳು ಕೆಲಸ ಮಾಡಿವೆ ಎಂಬ ಒಂದು ಮಾತು ಇದೆ.

ಅಧ್ಯಕ್ಷರು : ಈ ವಿಷಯವನ್ನು ಈಗಾಗಲೇ ಹೇಳಿದ್ದೀರಿ. ಈ ವಿಷಯ ಬಿಟ್ಟು ಮುಂದಕ್ಕೆ ಹೋಗಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಈ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಯಾವ ಕಾರಣದಿಂದ ಮಾಡಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆ. ಆದರೆ, ಸುಪ್ರೀಂ ಕೋರ್ಟ್‌ಗೆ 5 ನೇ ತಾರಿಖಿನೊಳಗೆ ಉತ್ತರವನ್ನು ಕೊಡಬೇಕಾಗಿತ್ತೋ ಆ ವಿಷಯದಲ್ಲಿಯೂ ಕೂಡ ಸ್ಪಷ್ಟವಾದಂಥ ಚರ್ಚೆ ಆಗಬೇಕಾಗಿತ್ತು. ಇವರು ಗುಟ್ಕಾ ನಿಷೇಧವನ್ನು ಏಕಾಏಕಿ ಮಾಡಿರುವುದನ್ನು ನೋಡಿದರೆ ಗುಟ್ಕಾ ನಿಷೇಧದ ಹಿಂದೆ ಇರುವಂಥ ಲಾಬಿ ಯಾವುದು ಇದೆಯೋ ಅದು ಬಹಳ ದೊಡ್ಡ ಪ್ರಭಾವಿಯಾಗಿ ಕೆಲಸ ಮಾಡಿದೆ ಎಂದು ನಮಗೆ ಅನಿಸುತ್ತಿದೆ.

ಅಧ್ಯಕ್ಷರು :– ತಾವು ಮುಖ್ಯವಾದ ವಿಷಯಕ್ಕೆ ಬರುತ್ತಿಲ್ಲವಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಈ ಬಗ್ಗೆ ಸುಪ್ರೀಂ ಕೋರ್ಟ್‌ನ ಆದೇಶ ಇದೆ. ಆದರೆ, ನಾವು ಸುಪ್ರೀಂ ಕೋರ್ಟ್‌ಗೆ ಏನು ಹೇಳಬೇಕೆಂಬುದರ

ಬಗ್ಗೆ ನಮ್ಮೆಲ್ಲರ ಜೊತೆ ಚರ್ಚೆ ಮಾಡಿದರೆ ಸರಿಯಾದಂಥ ಉತ್ತರವನ್ನು ಸುಪ್ರೀಂ ಕೋರ್ಟ್‌ಗೆ ಕೊಡುವುದಕ್ಕೆ ನಾವು ಸಮರ್ಥರಾಗಿದ್ದೇವೆ.

ಅಧ್ಯಕ್ಷರು : ತಾವು ನೀಡಿರುವ ನೋಟಿಸ್ ಅನ್ನು ದಯವಿಟ್ಟು ಓದಿಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ :- ಮಾನ್ಯ ಕಾಗೇರಿಯವರೆ, ನಾನು ನಿಮಗೆ ಸಹಾಯ ಮಾಡುವುದಕ್ಕೆ ಬರುತ್ತಿದ್ದೇನೆ. ದಯವಿಟ್ಟು ನಾನು ಹೇಳುವುದನ್ನು ಸ್ವಲ್ಪ ಕೇಳಿ. ಸದನ ನಡೆಯುವಂಥ ಸಂದರ್ಭದಲ್ಲಿ ಈ ರೀತಿಯಾದ ಒಂದು ಆದೇಶವನ್ನು ಹೊರಡಿಸಬೇಕಾದಾಗ ಪೂರಕವಾಗಿ ಏನು ಕಾರಣಗಳು ಇದೆ ಎಂಬ ಬಗ್ಗೆ ತಮಗೆ ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ತಾವು ಸುಪೀಂ ಕೋರ್ಟ್‌ನ ಆದೇಶವನ್ನು quote ಮಾಡಿದ್ದೀರಿ. ಅದಕ್ಕೋಸ್ಕರ ನಾನು ಸುಪ್ರೀಂ ಕೋರ್ಟ್‌ನ ಆದೇಶದ ಒಕ್ಕಣೆ ಏನಿದೆ ಎನ್ನುವುದನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ದಯಮಾಡಿ ತಾವು ಕೇಳಿ. "We also direct the Secretaries Health Department of all 23 states and 5 Union Territories to file their affidavit within four weeks."

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ತಾವು ಈಗ ಉತ್ತರ ಕೊಡುವುದಕ್ಕೆ ಹೋಗಬೇಡಿ.

ಶ್ರೀ ಟಿ.ಬಿ.ಜಯಚಂದ್ರ :- ದಯವಿಟ್ಟು ನಾನು ಹೇಳುವುದನ್ನು ಮೊದಲು ಕೇಳಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ :- ಮಾನ್ಯ ಜಯಚಂದ್ರರವರೆ, ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಿ.

ಶ್ರೀ ಟಿ.ಬಿ.ಜಯಚಂದ್ರ :-"on the issue of total compliance on ban imposed on manufacture and sale of gutka paan masala with tobacco and nicotine, Put up on 3/5." ಅದರ ಬಗ್ಗೆ ಹೇಳಿ.

ಅಧ್ಯಕ್ಷರು :- ಆಯಿತು. ಮಾನ್ಯ ಕಾನೂನು ಸಚಿವರೆ, ಅವರ ಗಮನಕ್ಕೆ ತಾವು ತಂದಿದ್ದೀರಿ. ಸಾಕು, ದಯವಿಟ್ಟು ಇಲ್ಲಿಗೆ ತಾವು ಮಾತನಾಡುವುದನ್ನು ನಿಲ್ಲಿಸಿ.

ಶ್ರೀ ಟಿ.ಬಿ.ಜಯಚಂದ್ರ :- ನಾನೂ ಸಹ ಅಡಿಕೆ ಬೆಳೆಗಾರನಾಗಿದ್ದೇನೆ. ನಾನೊಬ್ಬ ರೈತನಾಗಿದ್ದೇನೆ.

ಶ್ರೀ ಕೆ.ಜಿ.ಬೋಪಯ್ಯ :– ಅಡಿಕೆ ಬೆಳೆಗಾರರ ಪರವಾಗಿ ಇರಬೇಕಾಗಿರುವ ನೀವೇ reply ಶುರುಮಾಡಿದಿರಲ್ಲ?

ಅಧ್ಯಕ್ಷರು :– ಅವರ ಚರ್ಚೆಗೆ ಅನುಕೂಲವಾಗಲಿ ಎಂದು ನೀವು ಹೇಳಿದ್ದೀರಿ ಒಳ್ಳೆಯದು, ತಾವು ಕುಳಿತುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಈಗ ಸುಪ್ರೀಂ ಕೋರ್ಟಿನ ಆದೇಶಕ್ಕೆ ಏನು ಉತ್ತರ ಕೊಡಬೇಕು ಎನ್ನುವುದನ್ನು ಸರ್ವಪಕ್ಷಗಳ ಸಭೆ ಕರೆದು ತೀರ್ಮಾನ ಮಾಡಿ. ಬೇರೆ ಬೇರೆ ಅಡಿಕೆ ಬೆಳೆಗಾರರ ಸಂಸ್ಥೆಗಳು ಇವೆ.

ಅಧ್ಯಕ್ಷರು :– ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ಈ ಸರ್ಕಾರದ ತೀರ್ಮಾನದಿಂದ ಅಡಿಕೆ ಬೆಳೆಗಾರರ ಹಿತಾಸಕ್ತಿಯನ್ನು ಸರ್ಕಾರ ಕಡೆಗಣಿಸಿದೆ ಎಂದು ಹೇಳಿದ್ದೀರಿ. ಆ ತೀರ್ಮಾನದಿಂದ ಅಡಿಕೆ ಬೆಳೆಗಾರರ ಮೇಲೆ ಏನು ದುಷ್ಪರಿಣಾಮವಾಗಿದೆ ಎನ್ನುವುದನ್ನು ನೀವು ವಿಶ್ಲೇಷಣೆಯಲ್ಲಿ ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಸದನ ಪ್ರಾರಂಭವಾಗಿತ್ತು.

ಅಧ್ಯಕ್ಷರು :– ಅದನ್ನು ಬಿಟ್ಟು ಬಿಡಿ. ದಯವಿಟ್ಟು ನಾನು ಒಂದು ಮಾತನ್ನು ಹೇಳುತ್ತೇನೆ ಕೇಳಿ. ಇದೊಂದು ದೊಡ್ಡ ಪ್ರಮುಖವಾದಂಥ ಸಮಸ್ಯೆ ಬಹಳ ಜನ ಅಡಿಕೆ ಬೆಳೆಗಾರರು ಇದ್ದಾರೆ. ಅವರು ಅಡಿಕೆ ಬೆಳೆಯನ್ನು ಅವಲಂಬಿಸಿಕೊಂಡಿದ್ದಾರೆ. ನನಗೆ ಬೇಕಾಗಿದ್ದು ಏನೆಂದರೆ, ಗುಟ್ಕಾ ನಿಷೇಧ ಮಾಡುವುದರಿಂದ ಅಡಿಕೆ ಬೆಳೆಗಾರರ ಮೇಲೆ ಯಾವ ರೀತಿಯ ದುಷ್ಪರಿಣಾಮವಾಗುತ್ತದೆ ಎನ್ನುವುದನ್ನು ಸದನಕ್ಕೆ ಸ್ವಲ್ಪ ಬಿಚ್ಚಿ ಹೇಳಿದರೆ ಅನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೆ, ಅವರು ಅದನ್ನು explain ಮಾಡಿ ಹೇಳುತ್ತಾರೆ. ನಾನು ಒಂದನ್ನು objection ಮಾಡಿದ್ದು ಇಷ್ಟು ತರಾತುರಿಯಿಂದ 30ನೇ ತಾರೀಖು ಗುಟ್ಕಾ ನಿಷೇಧವೆಂದು order ಹೊರಡಿಸಿದ್ದಾರೆ. ಈ ಸದನ ನಡೆಯುತ್ತಿದೆ, ಇದನ್ನು ಅವರು ಘೋಷಣೆ ಮಾಡುವುದಕ್ಕೆ ಮುಂಚೆ ಹೇಳಬಹುದಾಗಿತ್ತು. ಸುಪ್ರೀಂ ಕೋರ್ಟಿನ ಆರ್ಡರ್ ಹೀಗಿದೆ, ನಮಗೆ ಬೈಂಡಿಂಗ್ ಇದೆ, ಆ consequences ಏನು ಎಂದು ಹೇಳುತ್ತೇನೆ.

ಅಧ್ಯಕ್ಷರು :– ನೀವು ಇಲ್ಲಿ ಕುಳಿತುಕೊಂಡು ಹೇಳುತ್ತಿದ್ದೀರಿ, ಅದು ನಿಮ್ಮ ಕಷ್ಟ. ಅವರು ಅಲ್ಲಿ ಕುಳಿತಿದ್ದಾರೆ, ಅವರಿಗೆ ಅವರ ಕಷ್ಟ.

ಶ್ರೀ ಜಗದೀಶ್ ಶೆಟ್ಟರ್ :- ಅವರು ಒಂದು ಮೀಟಿಂಗ್ ಕರೆಯಬಹುದಾಗಿತ್ತು, ಚರ್ಚೆ ಮಾಡಬಹುದಾಗಿತ್ತು, ಕೋರ್ಟಿನ ಆರ್ಡರ್ ಹೀಗಿದೆ. ಕಾವೇರಿ ಇಶ್ಯೂ ಬಂದಾಗ ಕೋರ್ಟಿನ ಆದೇಶ ಹೀಗೆ ಇದೆ ಎಂದು ನಾವು ಎಲ್ಲಾ ಡಿಟೇಲ್ಸ್ ತೆಗೆದುಕೊಂಡು ಮೀಟಿಂಗ್ ಕರೆದೆವು ನಾವು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೆವು. ಅವರು ಅದನ್ನು ಮಾಡಬಹುದಾಗಿತ್ತು. ಅದಕ್ಕೆ alternative ಆಗಿ ನಾವು ಹೇಳುತ್ತಿದ್ದೆವು.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನೀವು ಹೇಳಿದಿರಲ್ಲಾ ಸರ್ಕಾರ ಒಂದು ವಿಷಯವನ್ನು ಹೇಳಿ ಬಿಡಲಿ. ತಾವು ಶಿವಮೊಗ್ಗ ಜಿಲ್ಲೆಯ ಸಾಗರದಿಂದ ಬಂದವರು. ಅಡಿಕೆ ಬೆಳೆಗೆ ಒಂದು ನಿಶ್ಚಿತವಾದ ಬೆಲೆ ಇದ್ದು ನಿಗದಿತವಾದ ವಾತಾವರಣವಿತ್ತು. ಎಲ್ಲಾ ಕಡೆ ಅಡಿಕೆ ಬೆಲೆ ಕಡಿಮೆ ಆಗುತ್ತಿದೆ. ಇದರ ಬಗ್ಗೆ ಸರ್ಕಾರ ಹೇಳಿ ಬಿಡಲಿ. ನಾವು ಗುಟ್ಕಾ ನಿಷೇಧ ಮಾಡುತ್ತೇವೆ ಅಡಿಕೆ ಬೆಳೆಗಾರರಿಗೆ ರಕ್ಷಣೆ ಕೊಡುತ್ತೇವೆ. ಇವತ್ತು ಏನು ಬೆಲೆ ಇದೆ ಅದಕ್ಕೆ ಬೆಂಬಲ ಬೆಲೆ ಘೋಷಣೆ ಮಾಡಿ ಸರ್ಕಾರದಿಂದ ತುಂಬಿ ಕೊಡುತ್ತೇವೆಂದು ಹೇಳಿ ಬಿಡಲಿ ನಾವು ಚರ್ಚೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು :- ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : 1.84 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಒಂದು ವರ್ಷಕ್ಕೆ 2.58 ಲಕ್ಷ ಅಡಿಕೆ ಬೆಳೆ ಆಗುತ್ತಿದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿರುವ ಬೆಳೆಗೆ ದುಷ್ಪರಿಣಾಮವಾಗುತ್ತದೆ. ಏನು ದುಷ್ಪರಿಣಾಮ ಅಂದರೆ.. ಗುಟ್ಕಾ ನಿಷೇಧ ಮಾಡುವುದಕ್ಕೆ ನಮ್ಮ ವಿರೋಧವಿಲ್ಲ. ಗುಟ್ಕಾ ನಿಷೇಧ ಮಾಡುವುದರಿಂದ ಅಡಿಕೆ ಬೆಳೆಗಾರರಿಗೆ alternative ಆಗಿ ಏನು ಮಾಡುತ್ತೀರಿ ಎನ್ನುವುದನ್ನು ಹೇಳಿ ಬಿಟ್ಟರೆ ಇವತ್ತು ಒಂದು ಬೆಲೆಯನ್ನು ನಿಗದಿ ಮಾಡಿ ಇಟ್ಟುಕೊಂಡು ಇದಕ್ಕಿಂತ ಅಡಿಕೆ ಬೆಲೆ ಕಡಿಮೆ ಆಗದಂತೆ ನೋಡಿಕೊಳ್ಳುತ್ತೇವೆಂದು ಸರ್ಕಾರ ಹೇಳಿ ಬಿಟ್ಟರೆ ನಾವು ಚರ್ಚೆ ಮಾಡುವುದಕ್ಕೆ ರೆಡ್ಡಿ ಇಲ್ಲ. ಅದಕ್ಕಾಗಿ ನೀವು ವಿತ್‌ಡ್ರಾ ಮಾಡಿಕೊಂಡು ಚರ್ಚೆ ಮಾಡಿ ನಂತರ ಅಡಿಕೆ ಬೆಳೆಗಾರರಿಗೆ alternative ಆಗಿ ಒಂದು ವ್ಯವಸ್ಥೆಯನ್ನು ಮಾಡಿ ನಂತರ ಈ ತೀರ್ಮಾನ ತೆಗೆದುಕೊಳ್ಳಿ ಎನ್ನುವ ಮಾತನ್ನು ನೀವು ಹೇಳಿ ಎಂದು ನಾವು ಒತ್ತಾಯ ಮಾಡುತ್ತಿದ್ದೇವೆ, ಗುಟ್ಕಾ ನಿಷೇಧ ಮಾಡಿಬೇಡಿ ಸುಪ್ರೀಂ ಕೋರ್ಟ್‌ಗೆ ಗೌರವ ಕೊಡಬೇಡಿ ಎಂದು ನಾವು ಹೇಳುತ್ತಿಲ್ಲ.

ಅಧ್ಯಕ್ಷರು :- ಆಯಿತು, ನೀವು ಬೇಗ ಮುಗಿಸಿ.

ಶ್ರೀ ಶಾಮನೂರು ಶಿವಶಂಕರಪ್ಪ (ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ಏಲಕ್ಕಿ ಬೆಳೆಯುವುದಕ್ಕೆ ಸರ್ಕಾರ ಪ್ರೋತ್ಸಾಹ ಮಾಡುತ್ತದೆ. ನಾವು ಸಹಾಯಧನವನ್ನೂ ಕೂಡ ಕೊಡುತ್ತಿದ್ದೇವೆ.

ಶ್ರೀ ಕೆ.ಜಿ.ಬೋಪಯ್ಯ :– ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಲಕ್ಕಿ ಬೆಳೆಯುತ್ತಾರೆಯೇ? ಏನು ಮಾತನಾಡುತ್ತಿದ್ದೀರಿ?

ಶ್ರೀ ಶಾಮನೂರು ಶಿವಶಂಕರಪ್ಪ: ಬೆಳೆಯುತ್ತಾರೆ.

ಶ್ರೀ ಕೆ.ಜಿ.ಬೋಪಯ್ಯ :– ಎಲ್ಲಿ ಬೆಳೆಯುತ್ತದೆ?

ಶ್ರೀ ಶಾಮನೂರು ಶಿವಶಂಕರಪ್ಪ: ನೀವು ಬೆಳೆದಿಲ್ಲ, ಅದಕ್ಕಾಗಿ ನಿಮಗೆ ಗೊತ್ತಿಲ್ಲ.

ಶ್ರೀ ಕೆ.ಜಿ.ಬೋಪಯ್ಯ :– ನಮ್ಮ ಜಿಲ್ಲೆಯಲ್ಲಿ ಮೂರು ಪಂಚಾಯಿತಿಗಳು ಇವೆ. ಅಲ್ಲಿ ಅಡಿಕೆ ಬೆಳೆಯುತ್ತಾರೆ, ಅದನ್ನು ಬಿಟ್ಟು ಏಲಕ್ಕಿ ಬೆಳೆಯುತ್ತಾರೆಂದು ಹೇಳಿದರೆ ಹೇಗೆ?

ಶ್ರೀ ಶಾಮನೂರು ಶಿವಶಂಕರಪ್ಪ: ನಿಮ್ಮ ಜಿಲ್ಲೆಯಲ್ಲಿ ಬೆಳೆಯದಿರಬಹುದು ಆದರೆ ಬೇರೆ ಜಿಲ್ಲೆಯಲ್ಲಿ ಬೆಳೆಯುತ್ತಾರೆ. ನೀವು ಬೆಳೆಯದಿದ್ದರೆ ಕರ್ನಾಟಕದಲ್ಲಿ ಬೆಳೆಯುವುದಿಲ್ಲವೆ?

ಶ್ರೀ ಕೆ.ಜಿ.ಬೋಪಯ್ಯ :– ಕರ್ನಾಟಕದಲ್ಲಿರಬಹುದು. ನಿಮ್ಮ ಜಿಲ್ಲೆಯಲ್ಲಿ ಬೆಳೆಯುತ್ತೀರಾ?

ಶ್ರೀ ಶಾಮನೂರು ಶಿವಶಂಕರಪ್ಪ: ಏಲಕ್ಕಿ ಬೆಳೆಯುತ್ತೇವೆ, ದ್ರಾಕ್ಷಿ ಬೆಳೆಯುತ್ತೇವೆ.

ಅಧ್ಯಕ್ಷರು: ನೀವು ನೀವೇ ಚರ್ಚೆ ಮಾಡಿಕೊಂಡರೆ ಇದೇನು ಸದನ ಅನ್ನುತ್ತಾರಾ? ಮಾನ್ಯ ಕಾಗೇರಿಯವರೆ, ನೀವು ಚರ್ಚೆಯನ್ನು ಬೇಗ ಪೂರೈಸಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮತ್ತು ಪಶು ಸಂಗೋಪನೆ ಸಚಿವರು) : ಏಲಕ್ಕಿ ಬೆಳೆಯುತ್ತಾರೆ.

ಶ್ರೀ ಕೆ.ಜಿ.ಬೋಪಯ್ಯ :– ಏಲಕ್ಕಿ ಬೆಳೆಯುತ್ತದೆಂದು ಹೇಳಿಬಿಟ್ಟರೆ, ನಿಮ್ಮ ತುಮಕೂರಿನಲ್ಲಿ ಬೆಳೆಯುತ್ತದೆಯಾ? ನಿಮ್ಮ ತುಮಕೂರಿನಲ್ಲಿ ಅಡಿಕೆ ಬೆಳೆಯುತ್ತೀರಿ ಬೆಳೆಸಿ ನೋಡೋಣ. ಏಲಕ್ಕಿ ಬೆಳೆಯುತ್ತೀರಾ? ನಾನೇ ಏಲಕ್ಕಿ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ನಾವು ಈಗ ಅಡಿಕೆಯನ್ನು ಬೆಳೆಯುತ್ತಿದ್ದೇವೆ.

ಶ್ರೀ ಕೆ.ಜಿ.ಬೋಪಯ್ಯ :– ಅಡಿಕೆ ಬೆಳೆಯಬಹುದು. ಏಲಕ್ಕಿ ಬೆಳೆಯುವುದಕ್ಕೆ ಆಗುತ್ತದೆಯಾ?

ಶ್ರೀ ಟಿ.ಬಿ. ಜಯಚಂದ್ರ : ಏಲಕ್ಕಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು : ಪ್ರಶ್ನೆ ಎಲ್ಲಿಗೆ ಹೋಗುತ್ತಿದೆ?

ಶ್ರೀ ಶಾಮನೂರು ಶಿವಶಂಕರಪ್ಪ : ನಾನು ದೊಡ್ಡ ಬೆಳೆಗಾರ. ಏಲಕ್ಕಿ ಬೆಳೆಯುತ್ತೇವೆ. ನಿಮ್ಮಲ್ಲಿ ಏಲಕ್ಕಿ ಬೆಳೆಯದಿರಬಹುದು.

(ಗೊಂದಲ)

ಅಧ್ಯಕ್ಷರು : ನಿಮ್ಮ ಚರ್ಚೆಯನ್ನು ಮುಂದುವರೆಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ತಾವು ಅಡಿಕೆ ಬೆಳೆಗಾರರ ಪ್ರದೇಶದಿಂದ ಬಂದವರು.

ಅಧ್ಯಕ್ಷರು : ಹೌದು ಅದಕ್ಕಾಗಿ ಈ ಪ್ರಶ್ನೆಯನ್ನು ಹಾಕಿ ನಿಮಗೆ ಮಾತನಾಡುವುದಕ್ಕೆ ಕೊಟ್ಟಿರುವುದು. ನೀವು ಅದನ್ನು ಬಿಟ್ಟು ಬೇರೆ ಎಲ್ಲೆಲ್ಲಿಗೋ ಹೋಗುತ್ತಿದ್ದೀರಿ!

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ನಾನು ಬೇರೆ ಎಲ್ಲಿಯೂ ಹೋಗುತ್ತಿಲ್ಲ! ನಮಗಿಂತ ನಿಮಗೆ ಹಿರಿಯ ಅನುಭವ ಇದೆ. ನೀವು ನಿಜವಾಗಿ ನಮ್ಮ ಪರವಾಗಿ ಸರ್ಕಾರಕ್ಕೆ ಕಿವಿ ಮಾತನ್ನು ಹೇಳಬೇಕು. ಈ ರೀತಿಯ ಆತುರಾತುರ ನಿರ್ಣಯ ಮಾಡಿದ್ದನ್ನು ಹಿಂದೆ ತೆಗೆದುಕೊಳ್ಳಿ ಎಂದು ಹೇಳಬೇಕು.

ಅಧ್ಯಕ್ಷರು : ನೀವು ಮುಂದೆ ಹೋಗಿ!

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಇಂತಹ ಸಂದರ್ಭದಲ್ಲಿ ತಾವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು: ಅದಕ್ಕಾಗಿ ಮುಕ್ತವಾದ ಚರ್ಚೆಯಾಗಲಿ ಎಂದು ನಿಮಗೆ ಈಗಲೇ ಅವಕಾಶ ಕೊಟ್ಟಿರುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ನಾನು ಅಡಿಕೆ ಬೆಳೆಗಾರರ ಪರವಾಗಿ ನಿಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ನೀವು ಯಾವತ್ತೂ ರೈತರ ಪರವಾಗಿ ಒಳ್ಳೊಳ್ಳೆಯ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡಿದ್ದೀರಿ. ಈಗ ನೀವು ಅವಕಾಶವನ್ನು ಕೊಟ್ಟಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸರ್ಕಾರ ಏಕೆ ಆತುರಾತುರವಾಗಿ ಈ ತೀರ್ಮಾನ ತೆಗೆದುಕೊಂಡರು?

ಅಧ್ಯಕ್ಷರು : ಅದನ್ನು ಬಿಟ್ಟು ಬಿಡಿ. ಇದರಿಂದ ಏನು ದುಷ್ಪರಿಣಾಮವಾಗಿದೆ ಎನ್ನುವುದನ್ನು ನನಗೆ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಇವರು ಆತುರಾತುರವಾಗಿ ತೆಗೆದುಕೊಂಡ ನಿರ್ಣಯದಿಂದ ದುಷ್ಪರಿಣಾಮವಾಗಿದೆ. ನಾನು ಈಗಾಗಲೇ ಹೇಳಿದಂತೆ ಅಡಿಕೆಯನ್ನು ಮೊದಲನೆಯದಾಗಿ ಆಹಾರ ಸುರಕ್ಷತೆ ಮತ್ತು

ಗುಣಮಟ್ಟ ಕಾಯಿದೆಯ ಅಡಿಯಲ್ಲಿ ತಂದಿರುವುದೇ ತಪ್ಪು. ಅದನ್ನು ತರುವುದಕ್ಕೆ ಯಾರ್ಯಾರು ಏನು ಪ್ರಯತ್ನ ಮಾಡಿದ್ದಾರೆ ಅದು ನನಗೆ ಗೊತ್ತಿದೆ.

ಅಧ್ಯಕ್ಷರು : ಅದನ್ನು ಇಲ್ಲಿ ಚರ್ಚೆ ಮಾಡಿದರೆ ಆಗುತ್ತದೆಯಾ? ಕೇಂದ್ರ ಸರ್ಕಾರ, ಅದನ್ನು ಪಾರ್ಲಿಮೆಂಟಿನಲ್ಲಿ ಚರ್ಚೆ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಈ ರೀತಿ ಮಾಡಿರುವುದು ತಪ್ಪು ಎಂದು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಪ್ರತಿನಿಧಿಸಬೇಕಲ್ಲವೆ? ಅಡಿಕೆ ಬೆಳೆಗಾರರು ಎಷ್ಟು ಕಷ್ಟದಲ್ಲಿದ್ದಾರೆಂದು ಗೊತ್ತಿದೆ. ಕೊಳೆ ರೋಗದಿಂದ ಬೆಳೆ ಕುಸಿತದಿಂದ ಬೇರೆ ರೋಗದಿಂದ ಮತ್ತು ಹಳದಿ ರೋಗದಿಂದ ಅಡಿಕೆ ಬೆಳೆಗಾರರಿಗೆ ಕಷ್ಟವಿದೆ. ಅನೇಕ ರೀತಿಯ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಸಾಲದ ಶೂಲದಲ್ಲಿ ಇದ್ದಾನೆ. ಅಡಿಕೆ ಬೆಳೆಗಾರು ಇವತ್ತು ಎಲ್ಲಾ ರೈತರಂತೆ ಕಷ್ಟವನ್ನು ಹೆಚ್ಚು ಅನುಭವಿಸುತ್ತದ್ದಾರೆ ತಮಗೂ ಅಷ್ಟೆ ತಾವು ಸಾಗರ ಪ್ರಾಂತ್ಯದಿಂದ ಬಂದಿರುವವರು, ಅವರ ಕಷ್ಟ ಎಷ್ಟು ಎನ್ನುವುದು ತಮಗೆ ಗೊತ್ತಿದೆ. ಹಾಗಾಗಿ ನಾನು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. "ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು." ಈ ಗಾದೆ ನಮಗೂ ಹಾಗೂ ನಿಮಗೂ ಗೊತ್ತಿದೆ. ಅಡಿಕೆಗೆ ಇಷ್ಟೊಂದು ಪ್ರಾಮುಖ್ಯವಾದಂಥ ಸ್ಥಾನವಿದೆ. ಅಡಿಕೆಯಿಂದ ಆರೋಗ್ಯಕ್ಕೆ ತೊಂದರೆ ಎಂದು ಇವತ್ತಿನವರೆಗೂ ಯಾರೂ ಹೇಳಿರುವುದಿಲ್ಲ. ಗುಟ್ಕಾ ತಯಾರು ಮಾಡುವುದು ನನಗೆ ಗೊತ್ತಿದೆ. ಹಾಗಾಗಿ ಅಡಿಕೆ ಒಂದು ಪವಿತ್ರವಾದ ಪದಾರ್ಥ ಎಂದು ನಮಗೆ ಗೊತ್ತಿದೆ. ಆರೋಗ್ಯಕ್ಕೆ ತೊಂದರೆ ಆಗುತ್ತದೆಂದು ಇದುವರೆಗೂ ಬಂದಿರುವುದಿಲ್ಲ, ಅದು ನನಗೆ ಗೊತ್ತಿದೆ. ಗುಟ್ಕಾದಲ್ಲಿ ಆರೋಗ್ಯಕ್ಕೆ ಹಾನಿಕಾರಕವಾದ ಅಂಶ ಏನಿದೆ ಅದನ್ನು ತೆಗೆಯಬೇಕು ಎನ್ನುವುದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯ ಏನೂ ಇಲ್ಲ. ನಾವು ಸಲಹೆಯನ್ನು ಕೊಡುತ್ತಿದ್ದೆವು, ಆದರೆ ನೀವು ನಿರ್ಣಯ ಮಾಡಿಕೊಂಡ ನಂತರ ಇದನ್ನು ಚರ್ಚೆಗೆ ಅವಕಾಶ ಮಾಡಿ ಕೊಟ್ಟಿದ್ದೀರಿ. ನಿರ್ಣಯ ಮಾಡುವುದಕ್ಕಿಂತ ಮೊದಲು ಅಡಿಕೆ ಬೆಳೆಗಾರರ ಜೊತೆಗೆ ಬೇರೆ ಬೇರೆ ಸಂಘ ಸಂಸ್ಥೆಗಳ ಜೊತೆಯಲ್ಲಿ ಚರ್ಚೆಯನ್ನು ಮಾಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ.

ಅಧ್ಯಕ್ಷರು : ಏನು ಪರಿಸ್ಥಿತಿ ಆಗಿದೆ ಎನ್ನುವುದನ್ನು ಹೇಳಿ ಎಂದರೆ ನೀವೂ ಅದನ್ನೇ ಹೇಳುತ್ತಿಲ್ಲಾ!

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಅಡಿಕೆ ಬೆಳೆಗಾರರು ಈಗಾಗಲೇ ಸಾಲದಲ್ಲಿದ್ದಾರೆ. ಇದರ ಜೊತೆಯಲ್ಲಿ ಮಳೆ ಹೆಚ್ಚಾದರೂ ಕಷ್ಟ, ಕಡಿಮೆ ಆದರೂ ಕಷ್ಟ. ಅನೇಕ ರೋಗ ರುಜ್ಜಿನಗಳನ್ನು ಅಡಿಕೆ ಬೆಳೆಗಾರರು ಅನುಭವಿಸುತ್ತಿದ್ದಾರೆ.

ದರ ಏರಿಳಿತದಿಂದ ಅಡಿಕೆ ಬೆಳೆಗಾರರು ಕಷ್ಟದಲ್ಲಿದ್ದಾರೆ. ಈ ರೀತಿ ಏಕಾಏಕಿ ಗುಟ್ಕಾ ನಿಷೇಧ ಮಾಡುವ ನಿರ್ಣಯ ತೆಗೆದುಕೊಳ್ಳುವುದರಿಂದ ಅಡಿಕೆ ದರ ಕುಸಿತವಾಗುತ್ತಿದೆ. ಈಗಾಗಲೇ 2000, 3000 ರೂ.ಗಳ ಅಡಿಕೆ ದರ ಕುಸಿತವಾಗಿದೆ. ಇನ್ನೂ ಕೆಲವು ದಿವಸಗಳಲ್ಲಿ ಅದು ವೇಗವಾಗಿ ಕುಸಿಯುತ್ತದೆ.

ಅಧ್ಯಕ್ಷರು : ದರ ಕುಸಿಯುವದಕ್ಕೆ ಕಾರಣ ಏನು?

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ :- ಗುಟ್ಕಾಕ್ಕೆ ಮುಖ್ಯವಾಗಿ ಅಡಿಕೆಯನ್ನು ಬಳಸುವುದು. ಗುಟ್ಕಾ ನಿಷೇಧವೆಂದರೆ ಅಡಿಕೆಗೆ ತೊಂದರೆ ಆಗುತ್ತದೆ. ಹಾಗಾಗಿ ಗುಟ್ಕಾದಲ್ಲಿರುವ ಹಾನಿಕಾರಕ ಮತ್ತು ವಿಷಕಾರಕ ಅಂಶ ಏನಿದೆ ಅದನ್ನು ತೆಗೆದು ಹಾಕಲಿ. ಅಡಿಕೆ ಬಗ್ಗೆ ಇವತ್ತು ಏನು ಅಪಪ್ರಚಾರ ನಡೆದಿದೆ ಇವತ್ತು ಅದರ ಬಗ್ಗೆ ಹೆಚ್ಚು ಎಚ್ಚರಿಕೆಯಿಂದ ಇರಬೇಕಾಗಿದೆ. ನಾವು ಇವತ್ತು ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗಿದೆ. ಸುಪ್ರೀಂ ಕೋರ್ಟಿಗೂ ಹೇಳಬೇಕಾಗಿದೆ. ಏಕಾಏಕಿ ಈ ರೀತಿಯ ನಿರ್ಣಯ ತೆಗೆದುಕೊಳ್ಳುವುದರಿಂದ ಏನೇನು ತೊಂದರೆ ಆಗುತ್ತಿದೆ ಎನ್ನುವುದರ ಬಗ್ಗೆ ಈಗಾಗಲೇ ಸುಪ್ರೀಂ ಕೋರ್ಟಿನಲ್ಲಿ ಕೇಸ್ ಇದೆ. ಸುಪ್ರೀಂ ಕೋರ್ಟ್ ಯಾವ್ಯಾವ ರಾಜ್ಯದಲ್ಲಿ ಅಡಿಕೆ ಬೆಳೆಗಾರರ ಸ್ಥಿತಿಗತಿ ಏನೇನು ಇದೆ ಮತ್ತು ಗುಟ್ಕಾದ ಪರಿಣಾಮವಾಗಿ ಏನೇನು ಇದೆ ಎನ್ನುವುದನ್ನು ತಿಳಿಸುವುದಕ್ಕೆ ಹೇಳಿದೆ. ಈ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟಿನಲ್ಲಿ ಪಾರ್ಟಿಯಾಗಿ ನಮ್ಮ ರಾಜ್ಯದಲ್ಲಿ ಶೇಕಡಾ 60 ರಷ್ಟು ಅಡಿಕೆ ಬೆಳೆಯನ್ನು ಮಾಡುತ್ತಿದ್ದಾರೆ. ನಾವು ಇಲ್ಲಿ ಸುಮಾರು ಜನ ಶಾಸಕರು ಅಡಿಕೆ ಬೆಳೆಯುವ ಪ್ರದೇಶದಿಂದ ಬಂದವರು ಇದ್ದೇವೆ. ಶೇ.60 ರಷ್ಟು ಭಾಗ ಅಡಿಕೆ ಬೆಳೆ ಈ ದೇಶದಲ್ಲಿ ಬೆಳೆಯತಕ್ಕಂಥದ್ದು ಕರ್ನಾಟಕದ ಕೊಡುಗೆ ಇದೆ. ಇಂತಹ ಸಂದರ್ಭದಲ್ಲಿ ಅನೇಕ ಸಂಘ-ಸಂಸ್ಥೆಗಳು ಇವೆ. ಕ್ಯಾಂಪ್ಕೋ ಎನ್ನುವ ಸಂಸ್ಥೆ ಇದೆ. ಇನ್ನೂ ಅನೇಕ ಸಂಸ್ಥೆಗಳು ಇವತ್ತು ಅಡಿಕೆ ಬೆಳೆಗಾರರ ಹಿತ ಕಾಪಾಡಿಕೊಳ್ಳುವುದಕ್ಕೋಸ್ಕರವಾಗಿ ಬೇಕಾದ ಕೆಲಸ ಮಾಡುತ್ತಿದ್ದಾರೆ. ಸರ್ಕಾರ ಅವರ ಜೊತೆ ಕರೆದು ಮಾತುಕತೆಯನ್ನು ಮಾಡಬಹುದಾಗಿತ್ತು. ಅಡಿಕೆ ಬೆಳೆಗಾರರ ಪ್ರದೇಶದಿಂದ ಬಂದಂತಹ ಜನಪ್ರತಿನಿಧಿಗಳನ್ನು ಕರೆದು ಮಾತುಕತೆ ಮಾಡಬಹುದಾಗಿತ್ತು. ಏಕಾಏಕಿ, ದಿಢೀರಾಗಿ ಈ ರೀತಿ ನಿರ್ಣಯ ತೆಗೆದುಕೊಂಡಿರುವುದು ಅಡಿಕೆ ಬೆಳೆಗಾರರು ಏನೇನು ಕಷ್ಟ ಅನುಭವಿಸುತ್ತಿದ್ದಾರೋ, ಅವರ ಗಾಯದ ಮೇಲೆ ಬರೆ ಎಳೆದಂತೆ ಈ ಸರ್ಕಾರ ಮಾಡುತ್ತಿದೆ. ಅವರ ಕಷ್ಟಕ್ಕೆ ಮತ್ತಷ್ಟು ಕಷ್ಟವನ್ನು ನೀಡುವಂತಹ ನಿರ್ಣಯವನ್ನು ತೆಗೆದುಕೊಳ್ಳುತ್ತಿದೆ. ಈಗಲಾದರೂ ಇನ್ನೂ ತಡವಾಗಿಲ್ಲ. ಸರ್ಕಾರ ಮನ್ನೆ ಏನು 30ನೇ ತಾರೀಖು ಆದೇಶ ಹೊರಡಿಸಿದೆ ಅದನ್ನು ತಕ್ಷಣದಿಂದಲೇ stay

ಮಾಡಬೇಕು. ಅಡಿಕೆ ಪ್ರತಿನಿಧಿಗಳ ಒಂದು ಸಭೆಯನ್ನು ಕರೆಯಿರಿ. ಬೇರೆ ಬೇರೆ ಸಂಘ–ಸಂಸ್ಥೆಗಳ ಸಭೆಯನ್ನು ಕರೆಯಿರಿ. ಸಭೆಯನ್ನು ಕರೆದು ಈ ವಿಷಯದಲ್ಲಿ ಏನು ಮಾಡಬೇಕೆಂದು ವೈಜ್ಞಾನಿಕವಾಗಿ ಚರ್ಚೆ ಮಾಡಲಿ. ಆನಂತರ ಮುಂದೆ ನಿರ್ಣಯವನ್ನು ತೆಗೆದುಕೊಳ್ಳಲಿ. ಈಗಲೇ ಅಡಿಕೆ ಬೆಳೆಗಾರರು ಸಾಲದಲ್ಲಿದ್ದಾರೆ. ಅನೇಕ ರೈತರು ಇವತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಹಾಗೆ ಅಡಿಕೆ ಬೆಳೆಗಾರರೂ ಆತ್ಮಹತ್ಯೆ

ಮಾಡಿಕೊಳ್ಳುತ್ತಿರುವ ಸಂದರ್ಭವನ್ನು ನಾವು ನೋಡುತ್ತಿದ್ದೇವೆ. ಗುಟ್ಕಾ ಬ್ಯಾನ್ ಮಾಡಿರುವುದರಿಂದ ದರ ಕುಸಿಯುತ್ತಿದೆ. ದರ ಕುಸಿದರೆ ರೈತರು ಮಾಡಿರುವ ಸಾಲವನ್ನು ತುಂಬುವುದಕ್ಕಾಗುವುದಿಲ್ಲ. ರೈತರಿಗೆ ಇನ್ನಷ್ಟು ಗಾಯದ ಮೇಲೆ ಬರೆ ಎಳದಂತೆ ಆಗುತ್ತದೆ. ಇನ್ನಷ್ಟು ಹೆಚ್ಚು ಕಷ್ಟ ಕೊಟ್ಟಿರುವುದಕ್ಕೆ ಈಗತಾನೆ ಬಂದಂತಹ ನಿಮ್ಮ ಸರ್ಕಾರ ಕಾರಣ ಎನ್ನುವುದಾಗುತ್ತದೆ. ನೀವು ಈಗ ತಾನೇ ಬಂದಿದ್ದೀರಿ. ಇನ್ನೂ ಒಂದು ತಿಂಗಳು ಆಗಿಲ್ಲ, ಅಧಿಕಾರ ಸ್ವೀಕಾರ ಮಾಡಿ. ಈಗಲೇ ರೈತರ ಮೇಲೆ ಸವಾರಿ ಮಾಡುವಂತಹ ಕೆಲಸ ಮಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : ಆ ವಿಷಯಕ್ಕೆ ಹೋಗಬೇಡಿ. ಗುಟ್ಕಾ ವಿಚಾರಕ್ಕೆ ಬನ್ನಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಈಗಲೇ ಅಡಿಕೆ ಬೆಳೆಗಾರರ, ರೈತರ ಗಾಯದ ಮೇಲೆ ಬರೆ ಎಳೆಯುವಂತಹ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ಇದು ಸರಿಯಿಲ್ಲ.

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ. ಬೆಲೆ ಕುಸಿಯುತ್ತಿದೆ ಎಂದು ತಾವು ಹೇಳಿದಿರಿ. ಬೆಲೆ ಕುಸಿಯುವುದಕ್ಕೆ ಕಾರಣಗಳೇನು ಎನ್ನುವುದಕ್ಕೆ ನಿಮ್ಮ ಹತ್ತಿರ ಉತ್ತರ ಇದೆಯೇ?

(ಗೊಂದಲ)

ಶ್ರೀ ಬಿ.ಬಿ.ನಿಂಗಯ್ಯ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ..

(ಗೊಂದಲ)

ಅಧ್ಯಕ್ಷರು : ತಾವು ಕುಳಿತುಕೊಳ್ಳಿ, ಅವರು ಮಾತನಾಡುವುದನ್ನು ಮುಗಿಸಿಬಿಡಲಿ. ಎರಡು ನಿಮಿಷ ತಮಗೂ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ **ಬಿ.ಬಿ.ನಿಂಗಯ್ಯ** : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಅವರಿಗೆ ಸಹಾಯವಾಗಲಿ ಎಂದು ಹೇಳುತ್ತಿದ್ದೇನೆ. ಗುಟ್ಕಾ ನಿಷೇಧ ಮಾಡುವುದರಿಂದ ಏನು ದುಷ್ಪರಿಣಾಮ ಎಂದು ತಾವು ಅವರಿಗೆ ಕೇಳಿದಿರಿ. ಉತ್ಪನ್ನಗಳನ್ನು ತಯಾರು ಮಾಡುವಂತಹ ಕಂಪನಿಗಳು ಅಡಿಕೆಯನ್ನು purchase ಮಾಡುವುದನ್ನು ನಿಲ್ಲಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು : ಅದನ್ನು ಅವರು ಹೇಳಲೇ ಇಲ್ಲ.

(ಗೊಂದಲ)

ಶ್ರೀ **ಬಿ.ಬಿ.ನಿಂಗಯ್ಯ** : ಆ ಕಾರಣದಿಂದ ಅಡಿಕೆ ದರ ಇಳಿಯುತ್ತಿದೆ. ಇದು ನಮ್ಮ ಆತಂಕ.

(ಗೊಂದಲ)

ಅಧ್ಯಕ್ಷರು : ಆಯಿತು.

(ಗೊಂದಲ)

ಶ್ರೀ ಬಿ.ಬಿ.ನಿಂಗಯ್ಯ : ಆ ಕಾರಣಕ್ಕಾಗಿ ಇವತ್ತು ವಿಸ್ತೃತವಾಗಿ ಚರ್ಚೆಯಾಗಬೇಕು. ತಾವೂ ಕೂಡ ಆ ಭಾಗದಿಂದ ಬಂದಿದ್ದೀರಿ, ಕೃಷಿ ಪ್ರಧಾನವಾದ ರಾಷ್ಟ್ರದಲ್ಲಿ ಇವತ್ತು ರೈತನ ಮೇಲೆ ಒಂದಾದ ಮೇಲೆ ಒಂದು ಬರೆ ಎಳೆಯುತ್ತಿದ್ದರೆ, ರೈತರಿಗೆ ಎಷ್ಟು ಕಷ್ಟವಾಗುತ್ತದೆ ಎನ್ನುವುದು ಸದನದಲ್ಲಿ ಚರ್ಚೆಯಾಗಬೇಕಾಗಿತ್ತು. ಚರ್ಚೆಗಿಂತಾ ಮೊದಲೇ ಈ ತೀರ್ಮಾನ ಮಾಡಿರತಕ್ಕಂಥದ್ದು ಸರಿಯಲ್ಲ ಎನ್ನುವುದು ನಮ್ಮೆಲ್ಲರ ಅಭಿಪ್ರಾಯ.

ಅಧ್ಯಕ್ಷರು : ಅದು ಸರ್ಕಾರಕ್ಕೆ ಬಿಟ್ಟದ್ದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ನಾನು ಇನ್ನೂ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಇನ್ನೂ ಮಾನ್ಯ ಸುನೀಲ್‌ರವರು, ಬೇರೆ ಬೇರೆ ಮಾನ್ಯ ಸದಸ್ಯರು ಸಂಕ್ಷಿಪ್ತವಾಗಿ ಮಾತನಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ನಾನು ಇಷ್ಟೆ ವಿನಂತಿ ಮಾಡಿಕೊಳ್ಳುವುದು, ಅಡಿಕೆ ಬೆಳೆಗಾರರು ಈ ರಾಜ್ಯದಲ್ಲಿ ಸರ್ಕಾರದ ಆದಾಯಕ್ಕೂ ಬಹಳ ದೊಡ್ಡ ಕೊಡುಗೆಯನ್ನು ಕೊಡುತ್ತಿದ್ದಾರೆ. ಅಡಿಕೆ ಬೆಳೆಗಾರರು ಈ ರಾಜ್ಯದ ಅಭಿವೃದ್ಧಿಯಲ್ಲಿ ಅವರದೇ ಆದಂತಹ ಕೊಡುಗೆಯನ್ನು ಕೊಟ್ಟಿರುವುದನ್ನು ನಾವು ಕಂಡಿದ್ದೇವೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಕೆಲವೇ ಕ್ಷಣದಲ್ಲಿ, ಅಡಿಕೆ ಬೆಳೆಗಾರರಿಗೆ, ಆ ಭಾಗದಲ್ಲಿ ನಿಮ್ಮ ಪ್ರತಿನಿಧಿಗಳನ್ನೆ, ಕಾಂಗ್ರೆಸ್‌ನವರ ಹೆಚ್ಚು ಪ್ರತಿನಿಧಿಗಳನ್ನೂ ಸಹ ಆರಿಸಿಕೊಟ್ಟಿದ್ದಾರೆ. ಅವರಿಗೆ, ಈಗ ಆರಿಸಿ ಬಂದು ಕೆಲವೇ ದಿನಗಳಲ್ಲಿ ಬಹುಮಾನದ ರೀತಿಯಲ್ಲಿ ಅವರ ಗಾಯದ ಮೇಲೆ ಬರೆ ಎಳೆಯುವಂತಹ

ನಿರ್ಣಯ ತೆಗದುಕೊಳ್ಳುವುದು ಸೂಕ್ತ ಅಲ್ಲ. ನಾವು ನಿಜವಾಗಿ ಇನ್ನು ಕೆಲವು ದಿನಗಳು ಈ ಸರ್ಕಾರಕ್ಕೆ ಒಂದು ಹನಿಮೂನ್ ಪೀರಿಯಡ್ ಎಂದು ಕೊಡಬೇಕೆಂದು ಇದ್ದೇವೆ.

ಅಧ್ಯಕ್ಷರು : ಆಯಿತು, repeat ಮಾಡ ಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ನಾವು ಸರ್ಕಾರಕ್ಕೆ ಕಟುವಾಗಿ ಮಾತನಾಡಬಾರದು. ಸರ್ಕಾರಕ್ಕೆ ಒಂದು ಹನಿಮೂನ್ ಪೀರಿಯಡ್ ಇರುತ್ತದೆ. ಅವರು ತಮ್ಮ ಕೊಠಡಿ ಯಾವುದು? ತಮ್ಮ ಹುದ್ದೆ ಯಾವುದು? ತಮ್ಮ ಕಾರ್ಯವ್ಯಾಪ್ತಿ ಯಾವುದು? ಇವೆಲ್ಲವನ್ನೂ ತಿಳಿದುಕೊಳ್ಳುವುದಕ್ಕೆ ಕೆಲವು ದಿನಗಳು ಬೇಕಾಗುತ್ತದೆ. ಹಾಗಾಗಿ ಹಿರಿಯ ಸಚಿವರ ಮಾರ್ಗದರ್ಶನದಿಂದ ಮತ್ತು ಹಿರಿಯ ಸಚಿವರ ಸಹಾಯದಿಂದ ಹಿರಿಯ ಸಚಿವರೂ ಸಹ ಒಳ್ಳೆಯ ರೀತಿಯಲ್ಲಿ ಸರ್ಕಾರವನ್ನು ಪ್ರಾರಂಭಿಸಲಿ ಎಂದು ನಾವು ಕಾಯುತ್ತಿದ್ದೆವು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಎಲ್ಲರೂ ಸಾಮರ್ಥ್ಯದಿಂದ ಇದ್ದಾರೆ. ಅದರ ವಿಚಾರವಾಗಿ ಮಾತನಾಡುವುದು ಬೇಡ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಹಿರಿಯ ಸಚಿವರ ಸಹಾಯದಿಂದ ಹಿರಿಯ ಸಚಿವರೂ ಸಹ ಒಳ್ಳೆಯ ರೀತಿಯಲ್ಲಿ ಸರ್ಕಾರವನ್ನು ಪ್ರಾರಂಭಿಸಲಿ ಎಂದು ನಾವು ಕಾಯುತ್ತಿದ್ದೆವು. ನಾವು ಸರ್ಕಾರದ ಬಗ್ಗೆ, ಸರ್ಕಾರದ ನಿರ್ಣಯದ ಬಗ್ಗೆ, ಸರ್ಕಾರ ಈ ರೀತಿ ಆತುರ ಆತುರವಾದ ನಿರ್ಣಯವನ್ನು ತೆಗದುಕೊಳ್ಳುತ್ತದೆ ಎನ್ನುವ ಕಲ್ಪನೆ ಇರಲಿಲ್ಲ. ಸರ್ಕಾರ ಆತುರ ಆತುರವಾಗಿ ನಿರ್ಣಯ ತೆಗೆದುಕೊಳ್ಳುತ್ತಿದೆ. ಅನೇಕ ರೀತಿಯಲ್ಲಿ ತಾವು ಎಡವುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : ಅದು ಬೇಡ ಗುಟ್ಕಾ ವಿಚಾರವಾಗಿ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ತಾವು ಈಗ ಸಭಾಧ್ಯಕ್ಷರು. ನಮ್ಮ ಪರವಾಗಿ ತಾವು ಇರಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಮಾಡಿದವರು ಅಲ್ಲೇ ಮುಂದೆ ಇದ್ದಾರೆ ನೋಡಿ. ಎರಡು ಜನ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಸರ್ಕಾರ ಈ ರೀತಿ ಆತುರ ಆತುರವಾಗಿ ನಿರ್ಣಯ ತೆಗೆದುಕೊಳ್ಳಬಾರದು. ಅಡಿಕೆ ಬೆಳೆಗಾರರ ಪ್ರತಿನಿಧಿಗಳ ಜೊತೆ ಚರ್ಚಿಸಬೇಕಾಗಿತ್ತು. ಸಂಘ-ಸಂಸ್ಥೆಗಳ ಜೊತೆ ಚರ್ಚಿಸಬೇಕಾಗಿತ್ತು.

ಅಧ್ಯಕ್ಷರು: ಅದನ್ನು ತಾವು ಹೇಳಿದ್ದೀರಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಹಾಗಾಗಿ ಕೊನೆಯದಾಗಿ ಸರ್ಕಾರಕ್ಕೆ ಆಗ್ರಹಪೂರ್ವಕವಾಗಿ ವಿನಂತಿ ಮಾಡುವುದೇನೆಂದರೆ ಈಗ ಮೊನ್ನೆ 30 ನೇ ತಾರೀಖು ಹೊರಡಿಸಿರುವಂತಹ ನೋಟಿಫಿಕೇಷನ್ ಅನ್ನು ಸರ್ಕಾರ ತಕ್ಷಣ withdraw ಮಾಡಬೇಕು. ಅಡಿಕೆ ಬೆಳೆಗಾರರ ಹಾಗೂ ಅದಕ್ಕೆ ಸಂಬಂಧಪಟ್ಟ ಸಂಘ-ಸಂಸ್ಥೆಗಳ ಪ್ರತಿನಿಧಿಗಳ ಜೊತೆ ಚರ್ಚೆ ಮಾಡಬೇಕು.

(ಗೊಂದಲ)

ಅಧ್ಯಕ್ಷರು : ಆಯಿತು, ಅದನ್ನು ತಾವು ಹೇಳಿದ್ದೀರಿ.

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ :- ತಕ್ಷಣ ಇವತ್ತು ಅಥವಾ ನಾಳೆ ನಾಳಿದ್ದು ಸಭೆಯನ್ನು ಕರೆಯಬೇಕು. ಅಲ್ಲಿ ಕರೆದು ಮುಂದೆ ಸುಪ್ರೀಂ ಕೋರ್ಟ್‌ಗೆ ನಾವು ಏನು ಹೇಳಬೇಕು? ಅಥವಾ ಅಡಿಕೆ ಬೆಳೆಗಾರರ ಹಿತವನ್ನು ಕಾಪಾಡಲಿಕ್ಕೆ ನಾವು ಏನು ಮಾಡಬೇಕು? ಗುಟ್ಕಾದಿಂದ ಏನು ಆರೋಗ್ಯಕ್ಕೆ ಹಾನಿಯಾಗುತ್ತಿದೆ? ಅದನ್ನು ತೆಗೆದು ಗುಟ್ಕಾವನ್ನು ಹೇಗೆ ಮಾರುಕಟ್ಟೆಗೆ ತರುವುದಕ್ಕೆ ಸಾಧ್ಯವಿದೆ ಎಂಬ ಬಗ್ಗೆ ಸಂಶೋಧನೆಗಳು ಆಗಿವೆ, ಗುಟ್ಕಾವನ್ನು ಹೇಗೆ ಮಾಡಬಹುದು ಮತ್ತು ಮಾರಬಹುದು ಎನ್ನುವುದಕ್ಕೆ ತಮಿಳುನಾಡು ಸರ್ಕಾರ ಟೊಬ್ಯಾಕೋ ಮತ್ತು ನಿಕೋಟಿನ್‌ಅನ್ನು ಹೊರತುಪಡಿಸಿ ಆದೇಶವನ್ನು ಮಾಡಿದೆ. ಬೇರೆ ಬೇರೆ ರಾಜ್ಯ ಸರ್ಕಾರಗಳು ಏನೇನು ಮಾಡಿವೆ ಎನ್ನುವುದು ಸ್ಪಷ್ಟವಿದೆ. ಆದರೆ ಉಳಿದೆಲ್ಲಾ ರಾಜ್ಯ ಸರ್ಕಾರಗಳಿಗಿಂತಲೂ ಕರ್ನಾಟಕದ ಪಾತ್ರ ದೊಡ್ಡದಿದೆ. ಏಕೆಂದರೆ, ದೇಶದಲ್ಲಿ ಶೇ.60ರಷ್ಟು ಬೆಳೆಗಾರರು ಅಡಿಕೆಯಲ್ಲಿ ನಾವಿದ್ದೇವೆ. ಹಾಗಾಗಿ ಕರ್ನಾಟಕದ ಜವಾಬ್ದಾರಿ ಜಾಸ್ತಿ ಇದೆ. ಆ ಹಿನ್ನೆಲೆಯಲ್ಲಿ ನಮ್ಮ ಕರ್ನಾಟಕ ಸರ್ಕಾರ ಅಡಿಕೆ ಬೆಳೆಗಾರರ ಹಿತ ಕಾಪಾಡಿಕೊಳ್ಳುವುದಕ್ಕೆ ಮುಂದಾಗಬೇಕು. ಅಡಿಕೆ ಬೆಳೆಗಾರರಿಗೆ ಈ ಬಾರಿ ಏನು ಅನಿಸಿತೋ ಏನೋ ಅಡಿಕೆ ಬೆಳೆಗಾರರ ಪ್ರದೇಶದಿಂದ ಕಾಂಗ್ರೆಸ್ ಪ್ರತಿನಿಧಿಗಳನ್ನೇ ಹೆಚ್ಚು ಆಯ್ಕೆ ಮಾಡಿ ಕಳುಹಿಸಿದ್ದಾರೆ.

ಅಧ್ಯಕ್ಷರು : ಆ ವಿಚಾರ ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಈ ರೀತಿ ಗುಟ್ಕಾ ನಿಷೇಧ ಮಾಡಿ ಅಡಿಕೆ ಬೆಳೆಗಾರರಿಗೆ ಬಹುಮಾನದ ರೀತಿ ಬೆಲೆ ಕಡಿಮೆಯಾಗಿ ಅವರ ಜೀವನ

ಇನ್ನಷ್ಟು ಹೆಚ್ಚು ಕಷ್ಟವಾಗುವಂತೆ ಕಾಂಗ್ರೆಸ್ ಮಾಡುತ್ತಿರುವುದು ನಿಜವಾಗಿಯೂ ನಮಗೆ ಆಶ್ಚರ್ಯ ತಂದಿದೆ. ಇನ್ನೂ ಬಂದು ಒಂದು ತಿಂಗಳು ಆಗಿದೆ ಅಷ್ಟರಲ್ಲಿ ಈ ರೀತಿ ಆತುರ ಆತುರವಾಗಿ ನಿರ್ಣಯ ತೆಗೆದುಕೊಂಡು, ರೈತರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಸರ್ಕಾರದ ನಿರ್ಣಯಗಳಿಂದ ಆತ್ಮಹತ್ಯೆ ಸಂಖ್ಯೆ ಜಾಸ್ತಿ ಆಗಬಾರದು. ಆದರೆ ಇವತ್ತು ಸರ್ಕಾರದ ಈ ರೀತಿಯ ಆತುರದ ನಿರ್ಣಯದಿಂದ ರೈತರಿಗೆ ಇನ್ನಷ್ಟು ಕಷ್ಟಪಡುವಂತಹ, ಆಂತಕಪಡುವ ಸ್ಥಿತಿಯಾಗಿದೆ. ಹಾಗಾಗಿ ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ, ತಾವು ನಮ್ಮ ಪ್ರತಿನಿಧಿಗಳು, ತಾವೂ ಸಾಗರದಿಂದ ಬಂದಂಥವರು ಅಡಿಕೆ ಬೆಳೆಗಾರರ ಬಗ್ಗೆ ಅಪಾರವಾದಂತಹ ಗೌರವವಿದೆ.

ಶ್ರೀ ಶಾಮನೂರು ಶಿವಶಂಕರಪ್ಪ (ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಗೇರಿಯವರು ರೈತರ ಬಗ್ಗೆ ಬಹಳ ಚೆನ್ನಾಗಿ ಅನುಕೂಲ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ನೀವೆಲ್ಲಾ ಇದ್ದಾಗ ರೈತರಿಗೆ ಎಷ್ಟು ಚೆನ್ನಾಗಿ ಅನುಕೂಲ ಮಾಡಿದ್ದೀರಿ ಎಂದು ನೋಡಿಬಿಟ್ಟೇ ಜನರು ನಿಮ್ಮನ್ನು ಅಲ್ಲಿಗೆ ಕಳುಹಿಸಿದ್ದಾರೆ, ನಮ್ಮನ್ನು ಈ ಕಡೆ ಕಳುಹಿಸಿದ್ದಾರೆ. ಈಗ ತಮಗೆಲ್ಲಾ ಗೊತ್ತಿದೆ. ಪರ್ಯಾಯವಾಗಿ ನಾವು ಯಾವ ರೀತಿ ಅಡಿಕೆ ಬೆಳೆಗಾರರಿಗ ಸಹಾಯ ಮಾಡಬೇಕು ಎನ್ನುವುದನ್ನು ತಾವು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಈ ಬಗ್ಗೆ ಒಂದು ಸಭೆ ಕರೆದು ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಶಾಮನೂರು ಶಿವಶಂಕರಪ್ಪ: ತಾವು ಸಲಹೆ ಕೊಡಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಕಾಗೇರಿಯವರೆ, ತಾವು ಮಾತನಾಡುವುದನ್ನು ಮುಗಿಸಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಅಧ್ಯಕ್ಷರೆ, ಶಾಮನೂರುರವರೂ ತಮ್ಮ ಹಾಗೇಯೇ ಹಿರಿಯರು. ನೀವು ಅಲ್ಲಿ ಎಷ್ಟು ಸಲ ಇದ್ದೀರಿ? ಇಲ್ಲಿ ಎಷ್ಟು ಸಲ ಬಂದಿದ್ದೀರಿ? ಅದೆಲ್ಲಾ ತಮಗೆ ಗೊತ್ತಿದೆ.

(ಗೊಂದಲ)

ಶ್ರೀ ಶಾಮನೂರು ಶಿವಶಂಕರಪ್ಪ: ಮಾನ್ಯ ಅಧ್ಯಕ್ಷರೆ. . . .

(ಗೊಂದಲ)

ಅಧ್ಯಕ್ಷರು : ಮಾನ್ಯ ಮಂತ್ರಿಗಳೆ, ಅವರು ಮಾತನಾಡುವುದನ್ನು ಮುಗಿಸಲಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ನೀವೂ ಎಷ್ಟು ಸಲ ಬಂದಿದ್ದೀರಿ ಎನ್ನುವುದು ಗೊತ್ತಿದೆ. ನಾವು ಅಲ್ಲಿ ಬರುತ್ತೇವೆ. ಯಾವುದೇ ತೊಂದರೆ ಇಲ್ಲ. ನಾವೂ ಮತ್ತೆ ಅಲ್ಲಿ ಬರುತ್ತೇವೆ, ಮಾನ್ಯ ಅಧ್ಯಕ್ಷರೆ, ಈ ಸಂಧರ್ಭದಲ್ಲಿ ತಕ್ಷಣವೇ ಸಭೆಯನ್ನು ಕರೆಯಬೇಕು. ನೋಟಿಫಿಕೇಷನ್ ಅನ್ನು stay ಮಾಡಬೇಕು ಎಂದು ಆಗ್ರಹ ಮಾಡತ್ತೇನೆ. ಇಲ್ಲವಾದರೆ ರಾಜ್ಯದ ಜನ ಅಡಿಕೆ ಬೆಳೆಗಾರರು ನಾವು ಪಕ್ಷಾತೀತವಾಗಿ ಸರ್ಕಾರದ ಈ ನಿರ್ಣಯವನ್ನು ಉಗ್ರವಾಗಿ ಖಂಡಿಸಬೇಕಾಗುತ್ತದೆ. ಹೋರಾಟದ ದಾರಿಯನ್ನು ಹಿಡಿಯಬೇಕಾಗುತ್ತದೆ ಎನ್ನುವ ಮಾತನ್ನು ಈ ಸಂಧರ್ಭದಲ್ಲಿ ಹೇಳುತ್ತಾ, ಅಡಿಕೆ ಬೆಳೆಗಾರರ ರಕ್ಷಣೆಗೆ ಈ ಸರ್ಕಾರ ಮುಂದಾಗಬೇಕು ಆಗ್ರಹವನ್ನು ಮಾಡುತ್ತಾ, ಇನ್ನೂ ಕೆಲವು ಸದಸ್ಯರಿಗೆ ಮಾತನಾಡಲು ಅವಕಾಶ ಕೊಡಬೇಕೆಂದು ವಿನಂತಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು : ಆಯಿತು. ಮಾನ್ಯ ಜೀವರಾಜ್ ಅವರು ಮಾತನಾಡು–ವುದು. ಒಂದೂವರೆ ಗಂಟೆಯೊಳಗೆ ಮಾತನಾಡುವುದನ್ನು ಮುಗಿಸಬೇಕು. ಉಳಿದದ್ದನ್ನು after lunch ತೆಗೆದುಕೊಳ್ಳೋಣ.

ಶ್ರೀ ಡಿ.ಎನ್.ಜೀವರಾಜ್ (ಶೃಂಗೇರಿ) : ಆಯಿತು. ಮಾನ್ಯ ಅಧ್ಯಕ್ಷರೆ, ತಾವು ಬಹಳ ಹಿರಿಯರಾಗಿ ಈ ಸದನದ ಅಧ್ಯಕ್ಷರಾಗಿ ಇವತ್ತು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಮೊದಲನೆಯದಾಗಿ, ತಮಗೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ನಮ್ಮ ಹಿರಿಯ ನಾಯಕರಾದಂತಹ ವಿಶ್ವೇಶ್ವರ ಹೆಗಡೆ ಕಾಗೇರಿಯವರು ತುಂಬಾ ವಿಷಯಗಳನ್ನು ಪ್ರಸ್ತಾಪ ಮಾಡಿದರು. ಗುಟ್ಕಾವನ್ನು ಏಕೆ ಬ್ಯಾನ್ ಮಾಡಬಾರದು ಎನ್ನುವುದರ ಬಗ್ಗೆ ಹೇಳಿ ಎಂದು ತಾವು ಪದೇ ಪದೇ ಹೇಳಿದಿರಿ. ನನಗೂ ನಿಮಗೂ ಕ್ಷೇತ್ರ ಒಂದೇ ತರಹ. ಸಾಗರ ಮತ್ತು ಶೃಂಗೇರಿ ಕ್ಷೇತ್ರದ ಭೌಗೋಳಿಕ ವಿಸ್ತೀರ್ಣವೂ ಒಂದೇ ತರಹ. ಬೆಳೆಯೂ ಒಂದೇ ತರಹ. ಮನುಷ್ಯರ ಗುಣಲಕ್ಷಣಗಳೂ ಹತ್ತಿರ ಹತ್ತಿರ ಒಂದೇ ತರಹ ಇವೆ. ಮಳೆಯೂ ಒಂದೇ ತರಹ ಬರುತ್ತದೆ. ಅಡಿಕೆ ಒಂದು ರೀತಿಯಲ್ಲಿ ಸಾಂಪ್ರದಾಯಿಕ ಬೆಳೆ ಆಗಿತ್ತು. ಅಡಿಕೆ ಸಾಂಪ್ರದಾಯಿಕ ಬೆಳೆ ಆಗಿದ್ದಾಗ, ಅಡಿಕೆಯನ್ನು ಬರೀ ಕಂಬದ ಗದ್ದೆಗಳಲ್ಲಿ ಎರಡು ಗುಡ್ಡೆಗಳ ಮಧ್ಯೆಯಲ್ಲಿ ಬೆಳೆಯುತ್ತಿದ್ದರು. ಆಗ 2,500–3,500 ರೂಪಾಯಿ ಬೆಲೆ ಇತ್ತು. ಗುಟ್ಕಾ

ಎನ್ನುವುದು ಯಾವಾಗ launch ಆಯಿತು, ಆಗ 12,000–16,000 ರೂಪಾಯಿಗೆ ಅಡಿಕೆ ಬೆಲೆ ಹೋಯಿತು. ನಮ್ಮ ಕಾನೂನು ಮಂತ್ರಿಯವರಾದ ಮಾನ್ಯ ಜಯಚಂದ್ರರವರು 'ನಾನೂ ಅಡಿಕೆ ಬೆಳೆಗಾರ' ಎಂದು ಹೇಳಿದರು. ಅಡಿಕೆ ಬೆಲೆ ಯಾವಾಗ 16,000 ರೂಪಾಯಿಗ ಹೋಯಿತು, ಆ ಸಂದರ್ಭದಲ್ಲಿ ಬಯಲು ಸೀಮೆಗೆ ಮತ್ತು channel area ಗೆ ಅಡಿಕೆ ಬೆಳೆ ಪ್ಲಾಸ್ಟಿಕ್ ಕೊಟ್ಟೆಗಳ ಮುಖಾಂತರ, ಡ್ರಿಪ್‌ನ ಮುಖಾಂತರ ಗುಡ್ಡಗಾಡಿಗೆ ಅಡಿಕೆ ಬೆಳೆ ಬಂದಿತು. ಆ ಬೆಳೆ ಜಾಸ್ತಿ ಆಗುತ್ತಾ ಹೋಯಿತು. ಸಾಂಪ್ರದಾಯಿಕ ಬೆಳೆಯೇ ಆಗಿದ್ದರೆ ನಾವು ಮದುವೆ ಮನೆಯಲ್ಲಿ ಎಲೆ ಅಡಿಕೆ ಹಾಕಿದ್ದರೆ, ಸಾಯಂಕಾಲ ಊಟ ಮಾಡಿದ ಮೇಲೆ ಎಲೆ ಅಡಿಕೆ ಹಾಕಿದ್ದರೆ ಸಾಕಾಗಿತ್ತು. ಆದರೆ ಇವತ್ತು ಗುಟ್ಕಾ ಎನ್ನುವಂಥದ್ದು ಬಂದಿದ್ದರಿಂದ, ದೇಶದ ತುಂಬೆಲ್ಲಾ ಈ ಪ್ಯಾಕೆಟ್‌ಗಳು ರಸ್ತೆಯ ಮೇಲೆ ನೇತಾಡಿದ್ದರಿಂದ, ಲಾರಿ ಡ್ರೈವರ್‌ಗಳು ನೇತ್ಹಾಕಿದ್ದರಿಂದ ಈ ಬೆಳೆ ಇಷ್ಟೊಂದು ಬಂದಾಗಲೂ ರೈತ ಕಂಗಾಲಾಗಲಿಲ್ಲ ಮತ್ತು ರೈತನಿಗೆ ಬೆಲೆ ಸಿಗುತ್ತಿತ್ತು.

ಆ ರೀತಿ ಬೆಲೆ ಸಿಗುವಂತಹ ಸಂದರ್ಭದಲ್ಲಿ ಹಳದಿ ಎಲೆ ರೋಗ ಎನ್ನುವಂತಹ ಮಾರಕ ರೋಗ ಅಡಿಕೆ ಬೆಳೆಗೆ ತಾಗಿತು. ಈ ಬಗ್ಗೆ ತಮಗೂ ಸಹ ಗೊತ್ತಿದೆ, 100 ಕ್ವಿಂಟಾಲ್ ಅಡಿಕೆ ಬೆಳಯುವಂತಹ ರೈತನು ಮದುವೆ ಮನೆಗಾಗಿ ಪಕ್ಕದ ಮನೆಗೆ ಹೋಗಿ ಎರಡು ಕೆ.ಜಿ. ಅಡಿಕೆಯನ್ನು ತೆಗೆದುಕೊಂಡು ಬರುವಂತಹ ಸನ್ನಿವೇಶ ಬಂತು ಶೃಂಗೇರಿ ವಿಧಾನಸಭಾ ಕ್ಷೇತ್ರದ ಒಳಗಡೆ ಮಾತ್ರವಲ್ಲ. ಇದು ಕೊಡಗು ಜಿಲ್ಲೆ, ಸುಳ್ಯ ಮತ್ತು ಪುತ್ತೂರಿನಲ್ಲಿಯೂ ಈ ಹಳದಿ ಎಲೆ ರೋಗ ಬಂತು. ಇಂತಹ ಸಂದರ್ಭದೊಳಗಡೆ ನಮ್ಮ ಕಾನೂನು ಸಚಿವರು ಇದ್ದರು ಎಂದು ನಾನು ಅಂದುಕೊಳ್ಳುತ್ತೇನೆ. ಉಡುಪಿ-ಚಿಕ್ಕಮಗಳೂರು ಲೋಕಸಭಾ ಚುನಾವಣೆಗೆ ಅಲ್ಲಿಗೆ ಬಂದಂತಹ ಕಾಂಗ್ರೆಸ್‌ನ ಎಲ್ಲಾ ಮುಖಂಡರು ಒಂದು ಆಶಾದಾಯಕವಾದ ಕೊಡುಗೆಯನ್ನು ಕೊಟ್ಟುಹೋದರು. ಶ್ರೀ ಗೋರಕ್ ಸಿಂಗ್ ಸಮಿತಿಯ ವರದಿಯು ಇದೆ. 1400 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ, ನಾವು 1400 ಕೋಟಿ ರೂಪಾಯಿಗಳನ್ನು ಕೊಡುವುದರ ಮುಖಾಂತರ ರೈತರ ರಕ್ಷಣೆಗೆ ಬರುತ್ತೇವೆಂದು ಹೇಳಿದರು. ನಾನು ಅತ್ಯಂತ ಆಸೆಗಣ್ಣಿನಿಂದ ಒಂದು ಸೀಟು ಚುನಾವಣೆಯಲ್ಲಿ ಸೋಲುವುದರಿಂದ ದೇಶದಲ್ಲಿ ಏನೂ ಪ್ರಳಯವಾಗುವುದಿಲ್ಲ. ಶ್ರೀ ಮನಮೋಹನ್ ಸಿಂಗ್‌ರವರು ಭಾರತದ ಪ್ರಧಾನ ಮಂತ್ರಿಯಾಗಿರುತ್ತಾರೆ ಹೋಗಲಿ ಒಂದು ರೌಂಡ್ ಎಂದು ಇದ್ದೆವು. ನಮ್ಮ ಶಾಸಕರಾದ ಶ್ರೀ ಸುನೀಲ್ ಕುಮಾರ್ ಕುಮಾರ್‌ರವರು ಇಲ್ಲಿಯೇ ಕುಳಿತಿದ್ದಾರೆ. ಆಗ ಅವರು ಚುನಾವಣೆಯಲ್ಲಿ ಸೋತುಬಿಟ್ಟರು. ನೀವು

ಚುನಾವಣೆಯಲ್ಲಿ ಅವರನ್ನು ಸೋಲಿಸಿದ್ದೀರಿ. ಅವರನ್ನು ಚುನಾವಣೆಯಲ್ಲಿ ಸೋಲಿಸಿದ ಮೇಲೆ ನಾವು ಸುಮಾರು 1400 ಕೋಟಿ ರೂಪಾಯಿಗಳು ಬರುತ್ತದೆ ಎಂದು ಕಾಯುತ್ತಾ ಕುಳಿತಿದ್ದರೆ ಮಾನ್ಯ ಅಧ್ಯಕ್ಷರೆ, ನಮಗೆ 1400 ಕೋಟಿ ರೂಪಾಯಿಗಳು ಬರಲಿಲ್ಲ, ನಮಗೆ ಏಕಾಏಕಿ ಬಂದಿದ್ದು ಯಾವುದು ಎಂದರೆ, ಹಳದಿ ಎಲೆ ರೋಗ ಎನು ಇದೆ ಅದಕ್ಕೆ ದುಡ್ಡು ಕೊಡುತ್ತೇವೆಂದು ಹೇಳುವುದರ ಬದಲು ಗುಟ್ಕಾ ban ಎನ್ನುವಂತಹದ್ದನ್ನು ತಂದರು ಕರ್ನಾಟಕವು ಅಡಿಕೆ ಬೆಳೆಗೆ ತಾಯಿನಾಡಾಗಿದೆ. ಇದು ಸುಮಾರು 22–23 ರಾಜ್ಯಗಳಲ್ಲಿ ban ಆಗಿದೆ ಎಂದು ಅವರು ಹೇಳಿದರು. ಇದು ಎಷ್ಟೋ ರಾಜ್ಯಗಳಲ್ಲಿ ban ಆಗಬಹುದು, ಆದರೆ ಇದು ಕರ್ನಾಟಕದಲ್ಲಿ ban ಆಗಬಾರದು ಏಕೆಂದರೆ, ಉತ್ತರಪ್ರದೇಶ, ರಾಜಾಸ್ತಾನ ಮತ್ತು ಮಧ್ಯಪ್ರದೇಶ ಇರಬಹುದು, ಯಾವುದೇ ರಾಜ್ಯಗಳಲ್ಲಿ ಅಲ್ಲಿ ಅಡಿಕೆಯನ್ನು ತಿನ್ನುವವರು ಮಾತ್ರ ಇದ್ದಾರೆ, ಆದರೆ ಅಲ್ಲಿ ಬೆಳೆಗಾರರು ಇಲ್ಲ. ಕರ್ನಾಟಕ ತಾಯಿ ಅಡಿಕೆಯ ನೆಲವಾಗಿದೆ. ಲಕ್ಷಾಂತರ ರೈತರು ಹಳ್ಳಿಗಳಲ್ಲಿ ಇದ್ದಾರೆ. ಹಳ್ಳಿಗಳಲ್ಲಿ ತೋಟ ಮಾಡಿಕೊಂಡಿರುವಂತಹ ರೈತರು ಮಾತ್ರ ಇಲ್ಲ, ಅಡಿಕೆ ಗೊನೆಯನ್ನು ತೆಗೆಯುವವನು, ಅಡಿಕೆ ಸುಲಿಯುವವನು ಇದ್ದಾನೆ. ಇಲ್ಲಿ ಅಡಿಕೆ ಬೇಸಾಯವನ್ನು ಮಾಡುವವನು ಇದ್ದಾನೆ.

ಅಧ್ಯಕ್ಷರು : ಜೀನರಾಜ್‌ರವರೆ, ಮಧ್ಯಾಯೀ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ, ಈಗ 1.30 ಗಂಟೆ ಆಯಿತು.

ಶ್ರೀ ಡಿ.ಎನ್. ಜೀವರಾಜ್ : ನಾನು ಊಟಕ್ಕೆ ಹೋಗುವುದಕ್ಕಿಂತ ಮುಂಚೆ ಬೇಗನೆ ಮುಗಿಸಿಬಿಡುತ್ತೇನೆ. ಅಡಿಕೆಯನ್ನು ಸುಲಿಯುವುದಕ್ಕೆ ಜನ ಸಿಗುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಅದೇನು ಹೇಳುತ್ತಿದ್ದಾರೋ? ಅದರ ಅರ್ಥವೇನು? ಅದರ ಹಿಂದುಗಡೆ ಎಷ್ಟು ಜನರು ಇದ್ದಾರೆ. ಎಂದು ತೋರಿಸುತ್ತಿದೆ. ಇಂತಹ ಸನ್ನಿವೇಶವಿದ್ದಾಗ ಮಾನ್ಯ ಅಧ್ಯಕ್ಷರೆ, ಇಲ್ಲಿ ಗಡಿಬಿಡಿ ಏನೂ ಇಲ್ಲ. ನಾನು 5 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ಇಂತಹ ಗಂಭೀರವಾದಂತಹ ಸ್ಥಿತಿ ಇರುವಂತಹ ಸಂದರ್ಭದಲ್ಲಿ ಅಡಿಕೆಗೆ ಕರ್ನಾಟಕ mother land. ಇಲ್ಲಿ ಅಡಿಕೆ 60% ಗಿಂತ ಹೆಚ್ಚಿಗೆ ಬೆಳೆಯುತ್ತೇವೆ. ಆದ್ದರಿಂದ ನಾವು ಅಡಿಕೆ ಬೆಳೆಗಾರರ ರಕ್ಷಣೆಗೆ ನಿಲ್ಲಬೇಕಾಗಿತ್ತು. ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತ್‌ನಲ್ಲಿ ತಿನ್ನುವವರಿದ್ದಾರೆ. ಅಲ್ಲಿ/ಅಡಿಕೆ ಬೆಳೆಯುವ ರೈತರು ಇಲ್ಲ ಅಲ್ಲಿ ಅದನ್ನು ಮಾತ್ರ ಮಾಡುತ್ತಾರೆ. ಇಲ್ಲಿ ರೈತರ ರಕ್ಷಣೆಯ ಬಗ್ಗೆ ಒಂದು ಗಾದೆ ಇದೆ. "ಹಡೆದ ತಾಯಿ ವಿಷ ಹಾಕಿದರೆ ಯಾವ ಮಗುವನ್ನೂ ಯಾವ ಡಾಕ್ಟರ್‌ರೂ ಬದುಕಿಸುವುದಿಲ್ಲವಂತೆ" ಇಲ್ಲಿ

ಹಡೆದ ತಾಯಿಯೇ ವಿಷಯವನ್ನು ರೈತರಿಗೆ ಹಾಕಿದೆ ಹಾಗೆ ಆಗಿದೆ. ಇವತ್ತು ಗುಟ್ಕಾ ban ಎನ್ನುವಂತಹದ್ದು, ಇದನ್ನು ban ಮಾಡುವುದು ತಪ್ಪು. ಗುಟ್ಕಾದೊಳಗಿರುವಂತಹ ವಿಷ ban ಮಾಡುತ್ತೇವೆಂದು ಹೇಳಿದ್ದರೆ ಸರಿಯಾಗುತ್ತಿತ್ತು. ಆದರೆ ರೈತರು ವಿಷ ಹಾಕುವವರಲ್ಲ. ಗುಟ್ಕಾದೊಳಗಿರುವಂತಹ ವಿಷ ban ಮಾಡುತ್ತೇವೆನ್ನುವ ಬದಲು, ಕಾಲಿಗೆ ಕಾಲಿಗೆ ಮುಳ್ಳು ಹತ್ತಿದೆ ಎಂದು ಕಾಲನೇ ಕಡಿಯುತ್ತೇವೆಂದು ಹೇಳಿದರೆ ಹೇಗೆ? ನಮ್ಮ ಮಾನ್ಯ ಮುಖ್ಯಮಂತ್ರಿಗಳು 2009ನೇ ಇಸವಿಯಲ್ಲಿ ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಅವರು ವಿರೋಧ ಪಕ್ಷದ ನಾಯಕರಾಗಿ, ನಮ್ಮ ಮಾನ್ಯ ಮುಖ್ಯಮಂತ್ರಿಗಳು, ವಿಧಾನ ಪರಿಷತ್ತಿನ ವಿರೋಧಿ ನಾಯಕರಾಗಿದಂತಹ ಶ್ರೀಮತಿ ಮೋಟಮ್ಮನವರು, ರೇವಣ್ಣನವರು ಮತ್ತು ನಾವೆಲ್ಲರೂ ಗುಟ್ಖಾ ban ಆಗಿರುವುದು ತಪ್ಪು ಎಂದು ಹೇಳುವುದಕ್ಕೆ ಪ್ರಧಾನಮಂತ್ರಿಯಾಗಿದ್ದಂತಹ ಶ್ರೀ ಮನಮೋಹನ್ ಸಿಂಗ್‌ರವರ ಹತ್ತಿರ ಹೋಗಿದ್ದೇವು. ಅವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು ರೈತರ ಪರವಾಗಿ ಧ್ವನಿಯನ್ನು ಹೇಳಿದ್ದರು. ಅವರು ಮಾನ್ಯ ಪ್ರಧಾನ ಮಂತ್ರಿಗಳೆ, ನೀವು ಗುಟ್ಕಾ ಮಾತ್ರ ನೋಡಬೇಡಿ, ಅದರ ಹಿಂದಿರುವಂತಹ ಲಕ್ಷಾಂತರ ಕುಟುಂಬಗಳನ್ನು ನೋಡಿ ಎನ್ನುವಂತಹ ಪದವನ್ನು ಹೇಳಿದ್ದರು. ಅವರು ವಿರೋಧಪಕ್ಷದ ನಾಯಕರಾಗಿದ್ದಾಗ ಈ ತರಹ ಹೇಳಿ ಮುಖ್ಯಮಂತ್ರಿಗಳಾಗಿ 17ನೇ ದಿನಕ್ಕೆ ರೈತರಿಗೆ ಇಂತಹ ಒಂದು ಕೊಡುಗೆಯನ್ನು ಕೊಡುಬಹುದಾ ಮಾನ್ಯ ಅಧ್ಯಕ್ಷರೆ? ಇದು ತಪ್ಪಲ್ಲವೇ? ಮಾನ್ಯ ರೇವಣ್ಣನವರು ಬರುತ್ತಿದ್ದಾರೆ. ಅವರು ಆಲೂಗಡ್ಡೆಯ ಬಗ್ಗೆ ಆವತ್ತು ಏತಕ್ಕಾಗಿ ಕೇಳಲಿಲ್ಲ, ಬರೀ ಇದನ್ನು ಕೇಳುತ್ತಿದ್ದೀರಿ ಎಂದು ಆವತ್ತು ಹೇಳಿದ್ದರು.

ಅಧ್ಯಕ್ಷರು : ಆಯಿತು.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಮಾತನಾಡುತ್ತೇನೆ. ಇಂತಹ ಒಂದು ಸಂದರ್ಭದೊಳಗಡೆ ಗುಟ್ಕಾ ban ಎಂದು ಹೇಳಿದ್ದರಲ್ಲಾ, ಇವರು ಸಿಗರೇಟ್, ಪರಾಗ್, ಮಧು, ಹನ್ಸ್ ಅನ್ನು ban ಮಾಡುವುದಿಲ್ಲ. ಈ ಬಗ್ಗೆ ಕೇಳಿದರೆ ನಮ್ಮ ಮಂತ್ರಿಗಳು ಹೇಳಿಬಿಡಬಹುದು. ಸಿಗರೇಟಿನ ಪ್ಯಾಕ್‌ನ ಮೇಲೆ "Cigarette smoking is injurious to health"– ಎಂದು ಇದೆ ಅಂತಾ. ಅದೇ ತರಹ ಗುಟ್ಕಾ ಪ್ಯಾಕೆಟ್ ಮೇಲೆಯೂ ಸಹ ದೊಡ್ಡದಾಗಿ ಪ್ರಿಂಟ್ ಹಾಕುವುದಕ್ಕೆ ಹೇಳಿ. ಗುಟ್ಕಾ ತಿನ್ನುವುದರಿಂದ ಹಾನಿ ಆಗುತ್ತದೆ ಎಂದು ಪ್ಯಾಕೇಟ್ ಮೇಲೆ ಹಾಕಿ ನಂತರ ಅದನ್ನು ಬಿಡುಗಡೆ

ಮಾಡಲಿ. ಆದರೆ ಕರ್ನಾಟಕವು ಅಡಿಕೆ ಬೆಳೆಗಾರರ ರಕ್ಷಣೆಗೆ ಬರದೆ ಹೋದರೆ ಬೇರೆ ಯಾವ ರಾಜ್ಯದವರೂ ಬರುವುದಕ್ಕೆ ಸಾಧ್ಯವಿಲ್ಲ. ಕರ್ನಾಟಕ ಸರ್ಕಾರವು ಅಡಿಕೆ ಬೆಳೆಗಾರರ ರೈತರ ರಕ್ಷಣೆಗೆ ಬರಬೇಕಾಗುತ್ತದೆ.

ಅಧ್ಯಕ್ಷರು : ಆಯಿತು. ಈಗ ಟೈಮ್ ಆಗುತ್ತಿದೆ. ಮಾನ್ಯ ಜೀವರಾಜ್‌ರವರು ಮುಗಿಸುತ್ತಿದ್ದಾರೆ.

ಶ್ರೀ ಅಶೋಕ ಮಹದೇವಪ್ಪ ಪಟ್ಟಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಜೀವರಾಜ್‌ರವರು

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಅಶೋಕ್‌ರವರು ಮಧ್ಯ ಮಧ್ಯ ಎದ್ದು disturb ಮಾಡುತ್ತಿದ್ದಾರೆ.

ಅಧ್ಯಕ್ಷರು : ಆಯಿತು. ಈಗ ಟೈಮ್ ಆಗುತ್ತಿದೆ. ಮಾನ್ಯ ಸದಸ್ಯರು ಮಾತನ್ನು ಪೂರೈಸುತ್ತಿದ್ದಾರೆ. ಮಾನ್ಯ ಅಶೋಕ್‌ರವರೆ, ತಾವು ಕುಳಿತುಕೊಳ್ಳಿ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಶೋಕ್‌ರವರಿಗೆ ಅಡಿಕೆ ಬೆಳೆಯ ಬಗ್ಗೆ ಏನೂ ಗೊತ್ತಿಲ್ಲ.

ಅಧ್ಯಕ್ಷರು : ಮಾನ್ಯ ಜೀವರಾಜ್‌ರವರೆ, ತಾವು ಮುಗಿಸಿ.

ಶ್ರೀ ಡಿ.ಎನ್.ಜೀವರಾಜ್ : ನಾನು ನನ್ನ ಮಾತನ್ನು ಪೂರೈಸುತ್ತೇನೆ. ಇದು ಗಂಭೀರವಾದಂತಹ ವಿಷಯವಾಗಿದೆ. ಹೀಗೆ ಹೇಳಿದರೆ ಹೇಗೆ? ನನಗೆ ಮಾತನಾಡುವುದಕ್ಕೆ 2 ನಿಮಿಷಗಳ ಕಾಲಾವಕಾಶವನ್ನು ಕೊಡಿ. ನಾನು ತಮಗೆ ಕೈಮುಗಿಯುತ್ತೇನೆ. ಮಾನ್ಯ ಅಶೋಕ್‌ರವರು ಬೆಳಗಾಂ ಜಿಲ್ಲೆಯಿಂದ ಬಂದವರಾಗಿದ್ದಾರೆ.

ಅಧ್ಯಕ್ಷರು : ಅದನ್ನು ಮಾತನಾಡುವುದಕ್ಕೆ ಹೋಗಬೇಡಿ.

ಶ್ರೀ ಡಿ.ಎನ್.ಜೀವರಾಜ್ : ಅವರು ಬೆಳಗಾಂನಿಂದ ಬಂದಿದ್ದಾರೆ. ನಿಪ್ಪಾಣಿಯಲ್ಲಿರುವಂತಹ factory ಗಳು ಮುಚ್ಚಿಹೋಗಿದೆ. ಅಲ್ಲಿ ಕಾರ್ಖಾನೆಯನ್ನು ಮುಚ್ಚಿರುವುದರಿಂದಾಗಿ ಕೆಲಸ ಮಾಡುವಂತಹ ಕಾರ್ಮಿಕರೆಲ್ಲರೂ ರಸ್ತೆಗೆ ಬಂದಿದ್ದಾರೆ. ಅಲ್ಲಿ ಅವರು ಚಳುವಳಿಯನ್ನು ಮಾಡುತ್ತಿದ್ದಾರೆ. ಏತಕ್ಕಾಗಿ ಕರ್ನಾಟಕದಲ್ಲಿ ಈ factory ಬಂತು? ನಾವೇ ದೆಹಲಿಗೆ ಹೋಗಿದ್ದಾಗ ಅಲ್ಲಿರುವಂತಹ ಯಾರು ಗುಟ್ಕಾ ಮಾಲೀಕರುಗಳು ಇದ್ದರು ಅವರನ್ನು ಕರೆದು ಕರ್ನಾಟಕಕ್ಕೆ ಬಂದು ಕಾರ್ಖಾನೆಯನ್ನು ತೆರೆಯಿರಿ ನಿಮ್ಮ ಸಂಪೂರ್ಣ ರಕ್ಷಣೆಗೆ ನಾವು ನಿಲ್ಲುತ್ತೇವೆ. ಎಂದು ನಮ್ಮ ಸರ್ಕಾರ ಹೇಳಿದ್ದರಿಂದ ಅವರು ಕರ್ನಾಟಕಕ್ಕೆ ಬಂದು factory ಅನ್ನು ತೆರೆದರು. ಅವರನ್ನು ನಾವು ಕರೆದುಕೊಂಡು ಬಂದು factory ಅನ್ನು ಹಾಕಿಸಿ ಇವತ್ತು

ಏಕಾಏಕಿ factory ಅನ್ನು ಮುಚ್ಚುವಂತಹ ಸಂದೇಶವನ್ನು ಕೊಟ್ಟರೆ ಕರ್ನಾಟಕವನ್ನು ಯಾರು ನಂಬುತ್ತಾರೆ? ಇವತ್ತಿನದಿವಸ ಕರ್ನಾಟಕ ರಾಜ್ಯದ ಪರಿಸ್ಥಿತಿ ಅತ್ಯಂತ ಸಂಕಷ್ಟದ ಪರಿಸ್ಥಿತಿಯನ್ನು ತಲುಪಿದೆ. ನಮ್ಮ ಸರ್ಕಾರವು ಈ ತರಹದ ಗುಟ್ಕಾದ ಸಮಸ್ಯೆ ಬಂದು plastic sachet ban ಎಂದು ಹೇಳಿದಾಗ ಅವತ್ತು ಇದ್ದಂತಹ ಮುಖ್ಯಮಂತ್ರಿಗಳು ಕರ್ನಾಟಕದಿಂದ ಕರ್ನಾಟಕ ಸರ್ಕಾರದ ಹಣದಿಂದ. . . .

ಅಧ್ಯಕ್ಷರು : ತಾವು ಹೇಳುತ್ತಿರುವುದು ವಿಷಯಾಂತರವಾಗುತ್ತದೆ.

ಶ್ರೀ ಡಿ.ಎನ್.ಜೀವರಾಜ್ : ನಾನು ಹೇಳುತ್ತಿರುವುದು ವಿಷಯಾಂತರ ಎಂದು ತಮಗೆ ಅನಿಸಿದರೆ. ಈಗಲೇ ನಿಲ್ಲಿಸುತ್ತೇನೆ.

ಅಧ್ಯಕ್ಷರು : ತಾವು ಕೊಟ್ಟಿರುವಂತಹ ನೋಟಿಸ್‌ಗೆ ಸಂಬಂಧಪಟ್ಟಂತೆ ಮಾತನಾಡಿ.

ಶ್ರೀ ಡಿ.ಎನ್.ಜೀವರಾಜ : ನಾನು ಹೇಳುತ್ತಿರುವಂತಹ ಮುಂದಿನದನ್ನು ತಾವು ಕೇಳಬೇಕು. Gutka plastic sachet ಅನ್ನು ban ಮಾಡಬೇಕು. ಎಂದು ಆದಾಗ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ senior lawyer ರೊಬ್ಬರನ್ನು ನೇಮಕಮಾಡಿತ್ತು. ಇದು ಹೇಗೆ ವಿಷಯಾಂತರವಾಗುತ್ತದೆ? ಇದು ಗುಟ್ಕಾಕ್ಕೆ ಸಂಬಂಧಪಟ್ಟಿದಲ್ಲವೇ?

ಅಧ್ಯಕ್ಷರು : ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ,. . . .

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ತಾವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು : ತಾವು ಹೇಳುವುದು ಖಂಡಿತ ಸರಿ ಇದೆ. ನಿಮಗೆ ಸಂಪೂರ್ಣ ಸಹಕಾರವನ್ನು ಕೊಟ್ಟಿದ್ದೇನೆ.

ಶ್ರೀ ಡಿ.ಎನ್.ಜೀವರಾಜ್ : ಕೊಟ್ಟಿದ್ದೀರಿ. ನಾನು ಆರೋಪವನ್ನು ಮಾಡುತ್ತಿಲ್ಲ. ನಾನು ಇಷ್ಟು ಗಂಭೀರವಾದ ವಿಷಯವನ್ನು ಹೇಳುತ್ತಿದ್ದೇನೆ ಕರ್ನಾಟಕದ ನ ಇವತ್ತು ಮಲೆನಾಡಿನಲ್ಲಿರುವಂತಹ ಜನರು ಮಾತ್ರವಲ್ಲ, ಬರಗಾಲದಂಥ ಚಿತ್ರದುರ್ಗ ಊರಿನಲ್ಲಿಯೂ ಸಹ ಅಡಿಕೆ ಬೆಳೆ ಇದೆ. ಗುಟ್ಕಾವನ್ನು ಏಕಾಏಕಿ ban ಮಾಡಿರುವುದರಿಂದ ಅಲ್ಲಿರುವಂತಹ ಜನರು ಕಣ್ಣಿನಲ್ಲಿ ನೀರು ಹಾಕುತ್ತಿದ್ದಾರೆ. ಇವರು ಬರಿ ಸುಪ್ರೀಂ ಕೋರ್ಟ್ ಸುಪ್ರೀಂ ಕೋರ್ಟ್ ಎಂದು ಹೇಳುತ್ತಾರೆ. ಇವರು ಹೇಳುವುದನ್ನು ನಾನು ಒಪ್ಪುತ್ತೇನೆ. ಈ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಏನಾದರೂ ಇದ್ದರೆ ಇವರು ಅಧಿಕಾರಕ್ಕೆ ಬಂದು ಕೇವಲ 17 ದಿನಗಳು ಕಳೆದಿದೆ ಇದನ್ನು ನೋಡುವ ಬಗ್ಗೆ ಸ್ವಲ್ಪ

ಸಮಯವನ್ನು ಕೊಡಿ ಎಂದು ಕೇಳಬಹುದಿತ್ತು. ತಂಬಾಕುರಹಿತ ದಿನದಂದು ಇದನ್ನು declare ಮಾಡುತ್ತೇವೆನ್ನುವಂತಹ ಹರಿಬಿರಿಯಲ್ಲಿ ಇವರು ಇವತ್ತು ಗುಟ್ಕಾವನ್ನು ಬ್ಯಾನ್ ಮಾಡಿದರು. ತಂಬಾಕು ರಹಿತ ದಿನದಲ್ಲಿ ಸಿಗರೇಟ್, ಮಧು, ಹನ್ಸ್ ಅನ್ನು ban ಮಾಡಿದ್ದರೆ ಒಟ್ಟು ತಂಬಾಕನ್ನು ಬ್ಯಾನ್ ಮಾಡಿದ್ದರೆ ನಾನು ಸ್ವಾಗತ ಮಾಡುತ್ತಿದ್ದೆ. ಆದರೆ ಅಡಿಕೆಗೆ ಮಾತ್ರ ಈ ಕಷ್ಟವನ್ನು ಕೊಟ್ಟಿರುವುದು ITC company ಮಾಲೀಕರ ಜೋತೆಯಲ್ಲಿ ಎಲ್ಲೋ ಶಾಮೀಲು ಇದೆಯಾ ಎನ್ನುವಂತಹ ಅನುಮಾನ ಕಾಡುವಂತಹ ಸ್ಥಿತಿಗಳು ನಿರ್ಮಾಣವಾಗಿ, ಇದು ಆಗಬಾರದು. ದಯಮಾಡಿ ನಾನು ತಮ್ಮ ಮುಖಾಂತರ ಅವರಲ್ಲಿ ಕೇಳುತ್ತೇನೆ. ಇವರು ನಮ್ಮೆಲ್ಲರನ್ನೂ ಈ ಬಗ್ಗೆ ಚರ್ಚೆಯ ಸಂಬಂಧ ಕರೆಯಬಹುದಿತ್ತು. ಅಡಿಕೆ ಬೆಳೆಗಾರರ ಬಗ್ಗೆ ಯಾರು ಶಾಸಕರು ಇದ್ದಾರೆ, ಕ್ಯಾಂಪ್ಕೊ ಇದೆ, ಅವರ ಜತೆ ಚರ್ಚೆ ಮಾಡಬಹುದಿತ್ತು.

ಅಧ್ಯಕ್ಷರು : ಮಾನ್ಯ ಜೀವರಾಜ್‌ರವರು ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ 5 ನಿಮಿಷವಾಯಿತು.

ಶ್ರೀ ಡಿ.ಎನ್.ಜೀವರಾಜ್ : ಶ್ರೀ ಅನೂಪ್ ಕೆ.ಪೂಜಾರಿ ಎನ್ನುವಂತಹ ಒಬ್ಬ Senior I.A.S. Officer, UPA ಸರ್ಕಾರದಲ್ಲಿದ್ದಾರೆ. ಅವರು Import tax ಜಾಸ್ತಿ ಮಾಡಿದ್ದೇವೆಂದು ಆದೇಶವನ್ನು ಕೊಡುತ್ತಾರೆ. ಇದು UPA Governmentನ ಆದೇಶವಾಗಿದೆ. ನಾನು I.A.S. Officerದು ಎಂದು ಹೇಳುವುದಿಲ್ಲ. ಅದು UPA ಸರ್ಕಾರದ ಒಂದು ಅಂಶವಾಗಿದೆ. ಆ ರೀತಿ ಆದೇಶ ಕೊಟ್ಟಾಗ ಅಡಿಕೆ ಬೆಲೆಯು 26 ರಿಂದ 27 ಸಾವಿರಕ್ಕೆ ಹೋಗುತ್ತದೆ. ಅದು ಏಕಾಏಕಿ 24,000 ರೂಗಳಿಗೆ ಒಂದು ನಿಂತಿದೆ. ರೂ. 18,000 ಇದ್ದಂತಹ ಬೆಟ್ಟೆ ಅಡಿಕೆ ಗುಟ್ಕಾ ban ಎನ್ನುವಂತಹ ಒಂದು ಪದದಿಂದಾಗಿ ಇವತ್ತಿನ ದಿವಸ ರೂ.15,000 ಕ್ಕೆ ಬಂದು ನಿಂತಿದೆ. ಕರ್ನಾಟಕದ ರೈತನು ಬ್ಯಾಂಕಿಗೆ ಸಾಲ ಕಟ್ಟುವಂತಹ ಸಮಯದಲ್ಲಿ ಇದನ್ನು ಮಾಡಿದರೆ ಹೇಗೇ? ಇವರು ಮಾಡುತ್ತಿರುವುದು ಸರಿಯಲ್ಲ. ದಯಮಾಡಿ ನಾನು ತಮ್ಮ ಹತ್ತಿರ ಕೈಮುಗಿದು ಕೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ಆರೋಗ್ಯ ಮಂತ್ರಿಗಳಿಗೆ ತಿಳಿಸಿ, ಆರೋಗ್ಯ ಮಂತ್ರಿಗಳು ಈ ಆದೇಶವನ್ನು ವಾಪಸ್ಸು ತೆಗೆದುಕೊಳ್ಳಲಿ. ಈ ಆದೇಶವನ್ನು ವಾಪಸ್ಸು ತೆಗೆದುಕೊಂಡು ಮತ್ತೆ ನಮ್ಮೆಲ್ಲರನ್ನು ಮಾತುಕತೆಗೆ ಕರೆದು ಮಾಡಲಿ. ಈ ಬಗ್ಗೆ ಏಕ ಪಕ್ಷೀಯ ನಿರ್ಧಾರ ಮಾಡಿರುವುದು ಸರಿಯಲ್ಲ. ಇವರು ಮಾಡಿರುವಂತಹ ನಿರ್ಧಾರವನ್ನು ನಾವೆಲ್ಲರೂ ವಿರೋಧಿಸುತ್ತೇವೆ.

ಶ್ರೀ ನರಸಿಂಹಯ್ಯನವರ ವರದಿ ಬಂದಾಗ ತಾವು ಅಂದು ಮಂತ್ರಿಗಳಾಗಿದ್ದಿರಿ. ಅಂದು ತಾವೇ ರಕ್ಷಣೆಗೆ ನಿಂತು ನರಸಿಂಹಯ್ಯನವರ ವರದಿಯನ್ನು ನಿಲ್ಲಿಸಿದ್ದಿರಿ. ಶ್ರೀ ನರಸಿಂಹಯ್ಯನವರ ವರದಿ ಜಾರಿಗೆ ಬಾರದಿರುವಂತೆ ನೋಡಿಕೊಳ್ಳುವುದರಲ್ಲಿ ತಮ್ಮ ಪಾತ್ರವೂ ಇದೆ. ಶ್ರೀ ಜಯಚಂದ್ರರವರ ಪಾತ್ರವೂ ಇದೆ. ಇವತ್ತು ಈ ರೀತಿ ಆದೇಶ ಬಂದಿರುವುದರಿಂದ ರೈತರ ಮೇಲೆ ಬಹಳ ಕೆಟ್ಟ ಪರಿಣಾಮವಾಗಿದೆ. ದಯಮಾಡಿ ಈ ರೀತಿಯ ಏಕಪಕ್ಷೀಯವಾದ ನಿರ್ಣಯವನ್ನು ಮಾಡದೆ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವಂತೆ ತಾವು ಮಾನ್ಯ ಮುಖ್ಯಮಂತ್ರಿಯವರಿಗೂ, ಸರ್ಕಾರಕ್ಕೆ ಆದೇಶ ಕೊಡಬೇಕು. ಈ ಆದೇಶವನ್ನು ಕೊಡುವುದರ ಮೂಲಕ ರೈತರ ರಕ್ಷಣೆ ಮಾಡಬೇಕು. 15 ನೇ ದಿವಸಕ್ಕೆ ಒತ್ತುವರಿ ಬಿಡಿಸುತ್ತೇವೆಂದು ಹೇಳುತ್ತಾರೆ. ರೈತರ ಪರಿಸ್ಥಿತಿ ಎಲ್ಲಿಗೆ ಬರುತ್ತದೆ ನೋಡಿ, ನಮ್ಮ ಕೈಕಟ್ಟಿ ಹಾಕುವಿರಾ? ಕೊನೆಯ ಮಾತು ತಂಬಾಕು ರಹಿತ ದಿನದಲ್ಲಿ ಗುಟ್ಕಾ ಬ್ಯಾನ್ ಮಾಡುತ್ತೇವೆಂದರೆ, ಜನಸಂಖ್ಯೆ ನಿಯಂತ್ರಣ ದಿನ ಎಂದರೆ ಜನರನ್ನು ತೆಗೆದುಬಿಡುವರೆ!

ಅಧ್ಯಕ್ಷರು : ಅದಕ್ಕೂ ಇದಕ್ಕೂ ಏನು ಸಂಬಂಧ ಇದೆ? ಚರ್ಚೆ ಮಾಡುವಾಗ ಸ್ವಲ್ಪ relevancy ಇರಬೇಡವೇ? ಆಯಿತು, ಮುಗಿಸಿ.

ಶ್ರೀ ಡಿ.ಎನ್. ಜೀವರಾಜ್ : ಆದ್ದರಿಂದ ನಾನು ತಮ್ಮಲ್ಲಿ ಕೈಮುಗಿದು ಕೇಳುತ್ತೇನೆ. ದಯಮಾಡಿ ರೈತರ ರಕ್ಷಣೆಗೆ ತಾವು ಆದೇಶ ಕೊಡಬೇಕೆಂದು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಆಯಿತು. ಈಗ ಒಂದು ಪ್ರಕಟಣೆ. ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರಾದ ಶ್ರೀ ಆರ್.ವಿ.ದೇಶಪಾಂಡೆಯವರು ಇಂದು ಮಧ್ಯಾಹ್ನ 1.30 ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾನ್ಯ ಸಚಿವರು ಹಾಗೂ ಮಾನ್ಯ ಸದಸ್ಯರಿಗೆ ಭೋಜನಕೂಟ ಏರ್ಪಡಿಸಿರುತ್ತಾರೆ. ತಾವೆಲ್ಲರೂ ಈ ಭೋಜನಕೂಟದಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ. ಸದನದ ಕಲಾಪವು ಭೋಜನ ವಿರಾಮದ ನಂತರ ಮಧ್ಯಾಹ್ನ 2.30 ಗಂಟೆಗೆ ಪುನಃ ಪ್ರಾರಂಭವಾಗುತ್ತದೆ.

(ಸದನದ ಕಲಾಪವನ್ನು ಮಧ್ಯಾಹ್ನ 1.41 ಗಂಟೆಗೆ ಮುಂದೂಡಿ ಭೋಜನ ವಿರಾಮದ ನಂತರ ಪುನಃ ಮಧ್ಯಾಹ್ನ 2.30 ಗಂಟೆಗೆ ಸೇರುವುದಾಗಿ ನಿರ್ಣಯಿಸಿತು).

ಸದನವು ಮಧ್ಯಾಹ್ನ 2 ಗಂಟೆಗೆ 50 ನಿಮಿಷಕ್ಕೆ ಸಮಾವೇಶಗೊಂಡಿತು ಅಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಪೀಠದಲ್ಲಿ ಉಪಸ್ಥಿತರಿದ್ದರು

(ಗೊಂದಲ)

ಶ್ರೀ ಸಿ.ಟಿ.ರವಿ : ಸಚಿವರಿಗೆ ಸದನಕ್ಕೆ ಬರುವ ಕನಿಷ್ಠ ಆಸಕ್ತಿ ಇಲ್ಲದಿದ್ದರೆ ಹೇಗೆ?

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸಚಿವರು ವಿಧಾನ ಪರಿಷತ್ತಿನಲ್ಲಿ ಇದ್ದರು. ಹಾಗಾಗಿ ತಡವಾಗಿ ಊಟಕ್ಕೆ ಹೋಗಿದ್ದಾರೆ. ಆದ್ದರಿಂದ ಬರುವುದರಲ್ಲಿ ತಡವಾಗಿದೆ. ಅವರು ಬರುತ್ತಾರೆ.

(ಗೊಂದಲ)

ಅಧ್ಯಕ್ಷರು : ಅವರು ಊಟಕ್ಕೆ ಹೋಗಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ.ರವಿ : ರಾಜ್ಯದ ಜನರು ಬೇಜವಾಬ್ದಾರಿಯುಳ್ಳವರಿಗೆ ಅಧಿಕಾರವನ್ನು ಕೊಟ್ಟುಬಿಟ್ಟಿದ್ದಾರೋ ಎಂದು ಅನ್ನಿಸುತ್ತಿದೆ. ಸದನಕ್ಕೆ ಬರುವ ಕನಿಷ್ಠ ಕಾಳಜಿ ಇಲ್ಲದಿರುವವರಿಗೆ ಅಧಿಕಾರ ಕೊಟ್ಟುಬಿಟ್ಟರೋ ಎಂದು ಅನ್ನಿಸುತ್ತಿದೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಪಶುಸಂಗೋಪನಾ ಸಚಿವರು) : ಅವರು ಈ ಕಡೆ ಇದ್ದಂತಹ ಸಂದರ್ಭದಲ್ಲಿ ಯಾರೂ ಬರೆದುಕೊಳ್ಳುವವರು ಇರಲಿಲ್ಲ. Parliamentary Minister ಆಗಿ ಈಗ ಇಲ್ಲಿ ನಾನು ಇದ್ದೇನೆ.

(ಗೊಂದಲ)

ಶ್ರೀ **ಆರ್.ಅಶೋಕ್** : ಅಧ್ಯಕ್ಷರೆ, ಸರ್ಕಾರ ಎತ್ತುಕೊಂಡು ಹೋಗುವುದಕ್ಕೆ ನಾಲ್ಕು ಜನ ಬೇಕು. ಆದರೆ ಮೂರೇ ಜನ ಇದ್ದಾರೆ! ಹಿಂದೆ ಯಾರಾದರೂ ಮಡಿಕೆ ಹಿಡಿದುಕೊಂಡು ಹೋಗುವುದಕ್ಕೆ ಬೇಕು ! ಐದು ಜನನೂ ಇಲ್ಲ. ಮಾನ್ಯ ನಾಡಗೌಡರು ಬಂದಿದ್ದಾರೆ. ಅವರನ್ನು Minister

ಮಾಡಿಲ್ಲ. ಮಾನ್ಯ ರೋಷನ್ ಬೇಗ್ ಬಂದಿದ್ದಾರೆ ಅವರನ್ನು Minister ಮಾಡಿಲ್ಲ. Minister ಮಾಡಿದವರು ಒಬ್ಬರೂ ಇಲ್ಲ.

ಅಧ್ಯಕ್ಷರು : ನಿಜ. ನಾನು ವಾರನ್ ಮಾಡುತ್ತೇನೆ. ಈಗ ಚರ್ಚೆಯನ್ನು ಶುರು ಮಾಡೋಣ. ಎಲ್ಲಾ ಸರಿ ಹೋಗುತ್ತದೆ.

ಶ್ರೀ ಸಿ.ಟಿ.ರವಿ : ಇದು ಆಕಸ್ಮಿಕ ಅಲ್ಲ. ಎಲ್ಲೋ ಖಾತೆ ಹಂಚಿಕೆಯಲ್ಲಿ ವ್ಯತ್ಯಾಸ ಆಗಿದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಅಶೋಕ್, ತಾವು Senior Member .

ಶ್ರೀ ಆರ್.ಅಶೋಕ್ : ನಾವು ಯಾರ ಹತ್ತಿರ ಮಾತನಾಡಬೇಕು. ಖಾಲಿ Chair ಜೊತೆ ಮಾತನಾಡಬೇಕೆ?

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಕೋರಂ ಇದೆ.

ಶ್ರೀ ಆರ್.ಅಶೋಕ್ : ಕೋರಂ ಆದರೂ ಮಂತ್ರಿಗಳು ಇಲ್ಲವಲ್ಲಾ?

ಶ್ರೀ ಆರ್.ಅಶೋಕ್ : ತೋಟಗಾರಿಕೆ ಸಚಿವರು ಇಲ್ಲ. ಕೃಷಿ ಸಚಿವರು ಇಲ್ಲ. ಆಹಾರ ಮಂತ್ರಿ ಇಲ್ಲ. ಆರೋಗ್ಯ ಮಂತ್ರಿ ಇಲ್ಲ. ಪ್ರಾರಂಭದಲ್ಲೇ ಈ ಸರ್ಕಾರಕ್ಕೆ ಆರೋಗ್ಯ ಇಲ್ಲ.

(ಗೊಂದಲ)

ಅಧ್ಯಕ್ಷರು : It will be ensured in future..ನೀವು ಎತ್ತಿರುವ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸುತ್ತೇನೆ ಮತ್ತು ಅವರಿಗೂ ಕೂಡ ಸೂಚನೆಯನ್ನು ನೀಡುತ್ತೇನೆ.-

ಶ್ರೀ ಆರ್.ಅಶೋಕ್ : ತಾವು ಬುದ್ಧಿವಾದ ಹೇಳಬೇಕು. ಕಳೆದ ಮೂರು ದಿನಗಳಿಂದ ಬುದ್ಧಿವಾದ ಹೇಳುತ್ತಿದ್ದೀರಿ. ಅವರು ಕೇಳಲಿಲ್ಲ. ಸರ್ಕಾರಕ್ಕೆ ಕಿವಿ ಹಿಂಡಿ ಸರಿಯಾಗಿ ಮಾರ್ಗದರ್ಶನ ಮಾಡಿ. ಅವರು ಸದನಕ್ಕೆ ಬಂದು ಕುಳಿತುಕೊಳ್ಳಬೇಕು.

ಅಧ್ಯಕ್ಷರು : ಖಂಡಿತ ಮಾಡುತ್ತೇನೆ.

ಶ್ರೀ ಆರ್.ಅಶೋಕ್ : ಅವರು ಪ್ರತಿನಿಧಿಗಳು. ಅವರಿಗೆ Secretary ಗಳು ಇದ್ದಾರೆ, P.A ಗಳು ಇದ್ದಾರೆ. ನಮಗೆ ಯಾರೂ ಇಲ್ಲ. ದಯವಿಟ್ಟು ಸದನವನ್ನು ಮುಂದಕ್ಕೆ ಹಾಕಿ.

ಅಧ್ಯಕ್ಷರು : ಈಗ ಚರ್ಚೆಗೆ ರೇವಣ್ಣನವರನ್ನು ಕರೆದರೆ ಅವರೂ ಇಲ್ಲ. ನಾನೇನು ಮಾಡಲಿ?

(ಗೊಂದಲ)

ಅಧ್ಯಕ್ಷರು : ಮಾನ್ಯ ಸುನೀಲ್ ಕುಮಾರ್, ಮಾತನಾಡಿ.

ಶ್ರೀ ಆರ್.ಅಶೋಕ್ : ಯಾರ ಜೊತೆ ಮಾತನಾಡುವುದು? ಅಧ್ಯಕ್ಷರೆ, ಮಾತನಾಡುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ : ತಮ್ಮಲ್ಲಿ ಒಂದು ವಿನಂತಿ. ತಾವು ಸಭಾಧ್ಯಕ್ಷರಾಗಿ ಹೊಸದಾಗಿ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೀರಿ. ನಿಮ್ಮ ಹಿರಿತನದ ಬಗ್ಗೆ ಇಡೀ ನಾಡಿಗೆ ಹಾಗೂ ನಮ್ಮೆಲ್ಲರಿಗೂ ಹೆಮ್ಮೆ ಇದೆ. ತಾವು ಈ ಸದನದ ಸಭಾಧ್ಯಕ್ಷರಾದ ನಂತರದಲ್ಲಿ ಈ ಸದನದ ಘನತೆ-ಗೌರವಗಳು ಇನ್ನಷ್ಟು ಹೆಚ್ಚುತ್ತದೆ ಎಂಬ ಅಭಿಪ್ರಾಯ ಎಲ್ಲರಲ್ಲೂ ಇದೆ. ತಾವು ಈ ಪ್ರಾರಂಭದ ಸಂದರ್ಭದಲ್ಲೇ ಆಡಳಿತ ಪಕ್ಷದ ಸಚಿವರಿಗೆ ಎಚ್ಚರಿಕೆಯನ್ನು ಕೊಟ್ಟರೆ ಮಾತ್ರ ಅವರು ಸದನಕ್ಕೆ ಬರುತ್ತಾರೆ. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಅವರನ್ನು ಮಂತ್ರಿಗಳನ್ನಾಗಿ ಮಾಡಿದರು. ಮಂತ್ರಿ ಆದವರು ಸದನಕ್ಕೆ ಬರುವುದಿಲ್ಲವಾದರೆ ಸದನದ ಘನತೆ-ಗೌರವ ಹೆಚ್ಚುವುದಿಲ್ಲ. ತಾವು ಹಿರಿಯರಿದ್ದೀರಿ, ಅವರಿಗೆ ಕಿವಿಮಾತನ್ನು ಹೇಳಬೇಕು.

ಅಧ್ಯಕ್ಷರು : ನೀವು ಕೊಟ್ಟ ಸಲಹೆಯನ್ನು ಸ್ವಾಗತಿಸುತ್ತೇನೆ.

ಶ್ರೀ ಆರ್.ಅಶೋಕ್ : ತಾವು ಮಂತ್ರಿ ಮಾಡಿರುವವರು ಒಬ್ಬರೂ ಇಲ್ಲಿ ಇಲ್ಲ. ಮೇಲ್ಮನೆ ಬಿಡಿ, ಕೆಳ ಮನೆ ಬಗ್ಗೆ ಹೇಳಿ. ಮೊನ್ನೆ ಮಂತ್ರಿ ಮಾಡಿದ್ದೀರಿ, ಒಂದು ತಿಂಗಳ ಹಿಂದೆ ಮಂತ್ರಿ ಮಾಡಿದ್ದೀರಿ. ಆಗಲೇ ಒಬ್ಬರೂ ಪತ್ತೆ ಇಲ್ಲ.

(ಗೊಂದಲ)

ಅಧ್ಯಕ್ಷರು : ನಾವು ಇದನ್ನು ಗಂಭೀರವಾಗಿ ಪರಿಗಣಿಸುತ್ತೇವೆ. ತಾವು ಎತ್ತಿದ ಪ್ರಶ್ನೆ ಸೂಕ್ತವಾಗಿದೆ. ಎಲ್ಲರೂ ಇರಬೇಕಾದಂಥ ಅವಶ್ಯಕತೆ ಇದೆ. ಅದನ್ನು ಯಾರೂ ತಳ್ಳಿ ಹಾಕುವಂತಿಲ್ಲ. ಮಾನ್ಯ ಮುಖ್ಯಮಂತ್ರಿಗಳೇ, ಸಾಮಾನ್ಯವಾಗಿ ಚರ್ಚೆ ಆಗಬೇಕಾದರೆ ಮಂತ್ರಿಗಳು ಇರಬೇಕು. ಮಂತ್ರಿಗಳು ಎಲ್ಲಿ ಇದ್ದಾರೆ ನೋಡಿ?

ಶ್ರೀ ಆರ್.ಅಶೋಕ್ : Home Minister ಗೆ ಹೇಳಿ ಅವರನ್ನು ಹುಡುಕಿಸಬೇಕು. ಅವರೂ ಇಲ್ಲ.

ಅಧ್ಯಕ್ಷರು : ಸಿ.ಟಿ.ರವಿಯವರೆ ಹೇಳಿ.

(ಗೊಂದಲ)

ಶ್ರೀ ಸಿ.ಟಿ. ರವಿ: (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ತಾವು ನನಗೆ ಮಾತಾಡಿ ಎಂದು ಹೇಳಿದ್ದೀರಿ. ನಮ್ಮ ಆರೋಗ್ಯ ಸಚಿವರು ಇಲ್ಲ. ನಮ್ಮ ತೋಟಗಾರಿಕೆ ಸಚಿವರು ಇಲ್ಲ.

(ಗೊಂದಲ)

ಅಧ್ಯಕ್ಷರು : ಮುಖ್ಯಮಂತ್ರಿಗಳು ಇದ್ದಾರೆ, ನಮ್ಮ ಕಾನೂನು ಸಚಿವರು ಇದ್ದಾರೆ.

ಶ್ರೀ ಸಿ.ಟಿ.ರವಿ : ಕಾನೂನು ಸಚಿವರು ಬೆಳಿಗ್ಗೆ assurance ಕೊಟ್ಟರು. ಸದನ ಪ್ರಾರಂಭ ಆದ ಮೇಲೆ....

ಅಧ್ಯಕ್ಷರು : ಮುಖ್ಯಮಂತ್ರಿಗಳು ಇದ್ದ ಮೇಲೆ ವಿಶೇಷವಾಗಿ ಇದರಲ್ಲಿ ಮುಖ್ಯಮಂತ್ರಿಗಳದ್ದೇ ಜವಾಬ್ದಾರಿ ಹೆಚ್ಚು. ಅವರು ಇದ್ದ ಮೇಲೆ ಸಾಕು.

ಶ್ರೀ ಸಿ.ಟಿ.ರವಿ : ಆ ಕಾರಣಕ್ಕಾಗಿ ಅವರು ಏಕಪಕ್ಷೀಯ ನಿರ್ಣಯ ತೆಗೆದುಕೊಂಡು ಯಾರೂ ಬೇಕಾಗಿಲ್ಲವೆಂದು ಘೋಷಣೆ ಮಾಡಿದ್ದು. ಅವರು one-man show ಮಾಡುತ್ತಾರೆ. ನಾವೆಲ್ಲಾ ಏಕೆ ಎಂದು ಅವರು ಬರದೇ ಇರಬಹುದು.

ಅಧ್ಯಕ್ಷರು : ದಯವಿಟ್ಟು ಚರ್ಚೆಯನ್ನು ಪ್ರಾರಂಭಿಸಿ, ಅವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಸಿ.ಟಿ. ರವಿ: (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಈ ಗುಟ್ಕಾ ನಿಷೇಧಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಅನುಮತಿ ಕೊಟ್ಟಿರುವುದಕ್ಕೆ ನಾನು ಧನ್ಯವಾದಗಳನ್ನು ಸಲ್ಲಿಸುತ್ತಾ, ಗುಟ್ಕಾ ನಿಷೇದ ಮಾಡಬೇಕಾದರೆ ಒಂದು ಕಡೆ ಸುಪ್ರೀಂ ಕೋರ್ಟ್‌ನ ತೀರ್ಪು ಮತ್ತೊಂದು ಕಡೆ ಜನರ ಆರೋಗ್ಯ ದೃಷ್ಟಿಯಿಂದ ನಿಷೇಧ ಮಾಡಿದ್ದೇವೆ ಎನ್ನುವ ಮಾತನ್ನು ಆರೋಗ್ಯ ಸಚಿವರು ಹೇಳಿಕೆಯಲ್ಲಿ ಕೊಟ್ಟಿದ್ದರು. ನಾನು ತಮ್ಮ ಮೂಲಕ ಕೇಳಲು ಬಯಸುತ್ತೇನೆ. ಆರೋಗ್ಯಕ್ಕೆ ಹಾನಿಯಾಗುವಂಥದ್ದು ಕೇವಲ ಗುಟ್ಕಾದಲ್ಲಿ ಮಾತ್ರ ಇದೆಯೇ? ಬೇರೆ ಇನ್ನಾವ ವಸ್ತುಗಳಲ್ಲಿ ಇದೆ ಎನ್ನುವುದನ್ನು ಅವರು ಪಟ್ಟಿ ಮಾಡಿದ್ದಾರೆ. ಜನರು ಉಪಯೋಗಿಸತಕ್ಕಂಥ ಯಾವ ಯಾವ ವಸ್ತುವಿನಲ್ಲಿ ಆರೋಗ್ಯಕ್ಕೆ ಹಾನಿಯಾಗುವಂಥ ಅಂಶಗಳು ಇವೆ, ಅದನ್ನು ಪಟ್ಟಿ ಮಾಡಿ, ಎಲ್ಲವನ್ನೂ ನಿಷೇಧ ಮಾಡುವಂಥ ಕ್ರಮ ಕೈಗೊಂಡಿದ್ದರೆ ಇವರು ಪಾರದರ್ಶಕವಾಗಿದ್ದಾರೆ, ಪೂರ್ವಗ್ರಹಪೀಡಿತವಾಗಿಲ್ಲವೆಂದು ತಿಳಿಯಬಹುದಿತ್ತು. ಸಭಾಧ್ಯಕ್ಷರೆ, ಗುಟ್ಕಾದಲ್ಲಿ ಮಾತ್ರ ಆರೋಗ್ಯಕ್ಕೆ ಹಾನಿಕಾರಿಯಾಗುವಂಥ ಅಂಶವಿದೆಯೇ? ಉಳಿದಂತೆ ಜನ ಉಪಯೋಗಿಸತಕ್ಕಂಥ ಬೇರೆ ಯಾವ್ಯವ ವಸ್ತುವಿನಲ್ಲಿ ಆರೋಗ್ಯಕ್ಕೆ ಹಾನಿಕಾರಿಯಾಗುವಂಥ ಅಂಶಗಳಿವೆ ಎನ್ನುವುದನ್ನು ಅವರು ಸ್ಪಷ್ಟಪಡಿಸಬೇಕು ಮತ್ತು ಪೂರ್ವಗ್ರಹವಿಲ್ಲದಿದ್ದರೆ ಪ್ರಾಮಾಣಿಕವಾಗಿ ಜನರ ಆರೋಗ್ಯ ಬಗ್ಗೆ ಕಾಳಜಿ ಇದ್ದರೆ ಎಲ್ಲದರ ನಿಷೇಧದ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಆಗ ಯಾವುದೇ ಲಾಬಿಗೆ, ಒತ್ತಡಕ್ಕೆ ಒಳಗಾಗಿಲ್ಲ; ಇವರು

ಜನರ ಆರೋಗ್ಯದ ಕಾಳಜಿಯನ್ನು ಇಟ್ಟುಕೊಂಡು ಕೆಲಸ ಮಾಡಿದ್ದಾರೆ ಎನ್ನತಕ್ಕಂಥ ಭಾವನೆ ನಮಗೂ ಬರುತ್ತದೆ. ಜನರಿಗೂ ಆ ನಂಬಿಕೆ ಬರುತ್ತದೆ. ಆದರೆ ಅದಕ್ಕೆ ತದ್ವಿರುದ್ಧವಾಗಿ ಇವತ್ತು 60 ಭಾಗ ನಮ್ಮ ರಾಜ್ಯದ ಅಡಿಕೆಯನ್ನು ಉಪಯೋಗಿಸಿಕೊಂಡು ಗುಟ್ಕಾ ಮಾರುಕಟ್ಟೆ ಇದೆ. ಅಂದರೆ ನಾನು ಗುಟ್ಕಾ ಪರವಾಗಿ ಮಾತನಾಡುತ್ತೇನೆ ಅಂಥ ಅಲ್ಲ. ವಾಸ್ತವಿಕ ಹಿನ್ನಲೆಯಲ್ಲಿ ಮಾರುಕಟ್ಟೆ establish ಆಗಿದ್ದೇ ಗುಟ್ಕಾ ಮಾರುಕಟ್ಟೆಗೆ ಬಂದಮೇಲೆ. ಅದಕ್ಕೂ ಮೊದಲು ಅಡಿಕೆ ಒಂದು ಸಾಂಪ್ರಾದಾಯಿಕ ಬೆಳೆ ಅಷ್ಟೇ ಆಗಿತ್ತು. ಸಾಂಪ್ರದಾಯಿಕ ಬೆಳೆ ಆಗಿದ್ದಾಗ ಅದನ್ನು ನಾವು ತೋಟಗಳಲ್ಲಿ ಬೆಳೆದುಕೊಳ್ಳುತ್ತಿದ್ದೆವು. ಅದು ಸಾಂಪ್ರದಾಯಿಕವಾಗಿ ಅಷ್ಟೇ ಉಪಯೋಗವಾಗುತ್ತಿತ್ತು. ಇವತ್ತು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಮಾರುಕಟ್ಟೆಯಾಗಿ ಬೆಳೆದಿದೆ. ನಮ್ಮ 13 ಜಿಲ್ಲೆಗಳಲ್ಲಿ ಅಡಿಕೆ ಒಂದು ಮುಖ್ಯ ಆದಾಯ ತರುವಂಥ commercial crop ಆಗಿದೆ. ಈ ವಾಣಿಜ್ಯ ಬೆಳೆ 3 ತಿಂಗಳ ಬೆಳೆ ಅಲ್ಲ. Immediate ಆಗಿ crop pattern change ಮಾಡಿಬಿಡೋಣ, ನಾಳೆ ಬೆಳಿಗ್ಗೆ ಅಲೂಗೆಡ್ಡೆ ಬೆಳೆ ಹೋಯಿತು ಎಂದರೆ ನೆಲಗಡಲೆ ಹಾಕಿಬಿಡೋಣ ಎನ್ನುವುದಕ್ಕೆ ಇದು 3 ತಿಂಗಳ ಬೆಳೆ ಅಲ್ಲ. ಮಲೆನಾಡಿನಲ್ಲಿ ಇದರ ಮೊದಲ ಬೆಳೆ ತೆಗೆಯಬೇಕೆಂದರೆ ಕನಿಷ್ಠ 13 ರಿಂದ 14 ವರ್ಷ ಬೇಕು. ಒಂದು ತೋಟ ಮಾಡಬೇಕೆಂದರೆ ಲಕ್ಷಾಂತರ ರೂಪಾಯಿ invest ಮಾಡಬೇಕು. ಇವತ್ತು ಲಕ್ಷಾಂತರ ರೂಪಾಯಿ invest ಮಾಡಬೇಕೆಂದರೆ ರೈತ ಸಾಲಗಾರನಾಗಿರುತ್ತಾನೆ. ಏಕಾಏಕಿ ಈ ನಿರ್ಧಾರದಿಂದ ರೈತರ ಮೇಲೆ ಆಗುವ ಪರಿಣಾಮದ ಬಗ್ಗೆ ಸರ್ಕಾರ ಆಲೋಚನೆ ಮಾಡಿದೆಯೇ? ಹಾಗೆ ಸರ್ಕಾರ ಆಲೋಚನೆ ಮಾಡಿದ್ದರೆ ರೈತನನ್ನು ಉಳಿಸಲು ತೆಗೆದುಕೊಂಡ ಕ್ರಮ ಏನು? Precautionary measures ತೆಗೆದುಕೊಳ್ಳ-ಬೇಕಲ್ಲ? ಒಂದು ಇನ್ಸುಲಿನ್ ಇಂಜೆಕ್ಷನ್ ಕೊಡಬೇಕಾದರೂ suit ಆಗುತ್ತದೆಯ ಅಥವಾ ಇಲ್ಲವೇ ಎಂದು ನೋಡಲು ದೇಹಕ್ಕೆ ಒಂದು ಟೆಸ್ಟ್ ಡೋಸ್ ಇಂಜೆಕ್ಷನ್ ಕೊಡುತ್ತಾರೆ. ಆ Test dose ಏನು? ಆ ರೀತಿ ಅಡಿಕೆ ಬೆಳೆಗಾರರ ನೆರವಿಗೆ ಬರುವುದಕ್ಕೆ ಸರ್ಕಾರ ಏನೇನು ಕ್ರಮ ಕೈಗೊಂಡಿದೆ? ಗುಟ್ಕಾ ನಿಷೇಧ ಮಾಡುವುದಕ್ಕಿಂತ ಮುಂಚೆಯೇ ಅಡಿಕೆ ಬೆಳೆಗಾರರ ನೆರವಿಗೆ ನಾವು ಇಂತಿಂಥ ಕ್ರಮಗಳನ್ನು ಕೈಗೊಂಡಿದ್ದೇವೆಂದು ಹೇಳಬೇಕು. ಯಾವುದೇ ಕಾರಣಕ್ಕೂ ಬೆಲೆ ಕುಸಿಯುವುದಕ್ಕೆ ಅವಕಾಶ ಕೊಡುವುದಿಲ್ಲ, ಬೆಳೆಗಾರರು ಬೀದಿಗೆ ಬೀಳುವುದಕ್ಕೆ ಅವಕಾಶ ಕೊಡುವುದಿಲ್ಲ ಎನ್ನುವಂಥ ಕ್ರಮಗಳನ್ನು ಕೈಗೊಂಡು ಏನಾದರೂ ಗುಟ್ಕಾ ನಿಷೇಧ ಮಾಡಿದ್ದಾರೆಯೇ? ಏನೂ ಇಲ್ಲದೆ

ಏಕಾಏಕಿ ನಿಷೇಧ ಮಾಡಿದ್ದಾರಾ ಎನ್ನುವುದನ್ನು ಸದನದ ಮುಂದೆ ಸ್ಪಷ್ಟಪಡಿಸಬೇಕಾಗುತ್ತದೆ. ಅದಕ್ಕೆ ಅಡಿಕೆ ಬೆಳೆಗಾರರ ನೆರವಿಗೆ ಸರ್ಕಾರ ಬರಬೇಕು. ಇನ್ನೂ ಯಾವ್ಯಾವುದರಲ್ಲಿ ವಿಷಕಾರಿ ಅಂಶಗಳಿವೆ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಮದ್ಯಪಾನದಿಂದಲೂ ಆರೋಗ್ಯಕ್ಕೆ ಹಾನಿ ಎಂದು ನಾನು ಸಣ್ಣ ಹುಡುಗನಿದ್ದಾಗಿನಿಂದಲೂ "ಕುಡಿತದ ಬಾಳು ಮನೆ ಹಾಳು" ಎನ್ನುವಂಥ ಗೋಡೆ ಬರಹವನ್ನು ಬರೆದಿದ್ದನ್ನು ನೋಡಿದ್ದೇನೆ. "ಕುಡುಕನಲ್ಲದ ಗಂಡನ ಕೊಡು ತಾಯಿ" ಎನ್ನುವಂಥ ಪದ್ಯವನ್ನು ಸಹ ಬರೆದು ಬಿಟ್ಟಿದ್ದರು. ಹೀಗಿರುವಾಗ, ಮದ್ಯವನ್ನು ನಿಷೇಧ ಮಾಡುತ್ತೇವೆಂದು ಎಲ್ಲಿಯೂ ಹೇಳಿಲ್ಲ. ನಮ್ಮ ಮುಖ್ಯಮಂತ್ರಿಗಳು ಅಗ್ಗದ ಮದ್ಯ ಕೊಡುತ್ತೇವೆಂದು ಒಂದು ಹೇಳಿಕೆಯನ್ನು ಕೊಟ್ಟುಬಿಟ್ಟರು. ಅಂದರೆ ಅಗ್ಗದ ಮದ್ಯದಿಂದ ಜನರ ಆರೋಗ್ಯ ಹಾಳಾಗುವುದಿಲ್ಲವೇ? ಆ ರೀತಿ ಹಾಳಾದರೂ ಪರವಾಗಿಲ್ಲ. ಬೆಳೆಗಾರರಿಗೆ ಉಪಯೋಗವಾಗುವಂಥ, ಬೆಳೆಗಾರರು ಬದುಕುವಂಥ ಗುಟ್ಕಾವನ್ನೇ ನಿಷೇಧ ಮಾಡುವ ಹಿನ್ನೆಲೆ ಏನು? ಅದಕ್ಕಾಗಿಯೇ ನಾವು ಏನು ಹೇಳುತ್ತಿದ್ದೇವೆಂದರೆ, ಈ ಬಗ್ಗೆಯೂ ಯೋಚನೆ ಮಾಡಬೇಕಾದಂಥ ಅವಶ್ಯಕತೆಯಿದೆ. ಈಗ ಇದರ ಪರಿಣಾಮದಿಂದ ಬೆಲೆ ಕುಸಿತವಾಗುತ್ತದೆ. ಬರೀ ಹೇಳಿಕೆಯಿಂದ ಈಗಾಗಲೇ 3000/– ರೂಪಾಯಿ ಕ್ವಿಂಟಾಲ್‌ಗೆ ಬೆಲೆ ಕುಸಿದಿದೆ. ಇನ್ನೂ ಹೆಚ್ಚಿನ ಪ್ರಮಾಣದ ಕುಸಿತ ಆಗುತ್ತದೆ. ಪೂರ್ಣ ಪ್ರಮಾಣದ ಅನುಷ್ಠಾನ ಬಂದ ನಂತರ ಮತ್ತಷ್ಟು ಬೆಲೆ ಕುಸಿತವಾಗುತ್ತದೆ. ಆ ಬೆಲೆ ಕುಸಿತವಾದರೆ ಎಲ್ಲಾ ಅಡಿಕೆ ಬೆಳೆಗಾರರು ಸಾಲದ ಶೂಲಕ್ಕೆ ಸಿಕ್ಕಿ ಆತ್ಮಹತ್ಯೆಗೆ ಶರಣಾಗುವುದೊಂದೇ ದಾರಿ ಉಳಿಯುತ್ತದೆ. ಹಾಗೆಯೇ ಜನ ಸಾಯುವುದನ್ನು, ರೈತರು ಸಾಯುವುದನ್ನು ಸರ್ಕಾರ ಬಯಸುತ್ತಿದೆಯೇ? ಸರ್ಕಾರ ರೈತರು ಸಾಯುವುದನ್ನು ಬಯಸುವುದಿಲ್ಲವೆಂದರೆ ಅಡಿಕೆ ಬೆಳೆಗಾರರ ನೆರವಿಗೆ ಸರ್ಕಾರ ಬರಬೇಕಾಗಿರುವುದು ಧರ್ಮ. ನೀವು ಗುಟ್ಕಾ ಎನ್ನುವುದನ್ನು ಮಾರುಕಟ್ಟೆಗೆ ಬರುವುದಕ್ಕೆ ಮುಂಚೆಯೇ ಅವಕಾಶ ಕೊಡದೇ ಇದ್ದರೆ ಇಷ್ಟೆಲ್ಲಾ ಸಂಕಷ್ಟಕ್ಕೆ ಬರುವಂಥ ಸ್ಥಿತಿ ಇರಲಿಲ್ಲ. ಏಕೆಂದರೆ, ನಾನು ಮೊದಲೇ ಹೇಳಿದಂತೆ ಈ ಬೆಳೆಯನ್ನು ಸಾಂಪ್ರದಾಯಿಕ ಪ್ರದೇಶದಲ್ಲಿ ಮಾತ್ರವೇ ಬೆಳೆಯುತ್ತಿದ್ದರು. ಅದನ್ನು ಮೀರಿ ಅಡಿಕೆ ಬೆಳೆ ವಿಸ್ತರಣೆ ಆಗಿದೆ. ವಿಸ್ತರಣೆ ಆಗಿರುವುದನ್ನು ಒಂದು ದಿನಕ್ಕೆ ಬದಲಾಯಿಸುವುದಕ್ಕೆ ಆಗುವುದಿಲ್ಲವೆಂದು ನಾನು ಮುಂಚೆಯೇ ಮಾತನಾಡುವಾಗ ಹೇಳಿದ್ದೇನೆ. ಒಂದು ದಿನಕ್ಕೆ ಬದಲಾಯಿಸುವುದಕ್ಕೆ ಆಗುವುದಿಲ್ಲವೆಂದರೆ ಪರ್ಯಾಯ ದಾರಿ ಏನು ಎನ್ನುವುದನ್ನು ಸ್ಪಷ್ಟ ಪಡಿಸಬೇಕು. ನಾವು ಅಡಿಕೆ ಏನೂ ನಿಷೇಧ ಮಾಡಿಲ್ಲ, ಗುಟ್ಕಾ ಮಾತ್ರ ನಿಷೇಧ ಮಾಡಿದ್ದೇವೆಂದು ಇವತ್ತು ಮಾತನಾಡುತ್ತಾ

ಹೇಳಿದರು. ಆದರೆ, ಗುಟ್ಕಾ ನಿಷೇಧ ಮಾಡಿದ್ದೇವೆ ಎನ್ನುವುದರ ಬದಲು ಅದರಲ್ಲಿರುವಂಥ ವಿಷಕಾರಕ ಅಂಶಗಳನ್ನು ಮಾತ್ರ ನಿಷೇಧ ಮಾಡಿದ್ದರೆ ಸಾಕಾಗಿತ್ತಲ್ಲವೇ? ಇಂತಿಂಥ ಅಂಶ ವಿಷಕಾರಕವಾಗಿರುವುದಿದೆ, ಆ ವಿಷಕಾರಕವಾಗಿರುವುದನ್ನು ಮಾತ್ರ ನಿಷೇಧ ಮಾಡುತ್ತೇವೆಂದು, ಆ ಅಂಶಗಳನ್ನು ಮಾತ್ರ ನಿಷೇಧ ಮಾಡಿದ್ದರೆ ನಾವು ಆತಂಕ ಪಡುವಂಥ ಸ್ಥಿತಿ ಇರುತ್ತಿರಲಿಲ್ಲ. ಇವತ್ತು ಆ ರೀತಿ ಬೇರೆ ಬೇರೆ ವಸ್ತುಗಳನ್ನು ಉಪಯೋಗಿಸಿ, food colour ಅದು ಕೂಡಾ ವಿಷಕಾರಕವೇ, ಅದರಿಂದಲೂ ಕ್ಯಾನ್ಸರ್ ಬರುತ್ತದೆ. ಅದನ್ನು ನಿಷೇಧ ಮಾಡಿಲ್ಲ. ಅಜಿನೋಮೋಟೋ ಎನ್ನುವಂಥ ಒಂದು Tasting powder ಬರುತ್ತದೆ. ಅದರಿಂದಲೂ ಕೂಡಾ ಆರೋಗ್ಯಕ್ಕೆ ಹಾನಿಕರ. ಅದನ್ನು ನಿಷೇಧ ಮಾಡುವಂಥ ಕೆಲಸ ಮಾಡಿಲ್ಲ. ಬೇರೆ ಬೇರೆ ಬೆಳೆಗಳನ್ನು ಬೆಳೆಯಬೇಕಾದರೆ ನಾವು ರಾಸಾಯನಿಕಗಳನ್ನು ಬಳಸುತ್ತೇವೆ. ಅದರಿಂದಲೂ ಕೂಡಾ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. Pesticides ನ್ನು ಕೂಡಾ ನಿಷೇಧ ಮಾಡುವಂಥ ಕೆಲಸ ಮಾಡಿಲ್ಲ. ಶುಂಠಿ ಬೆಳೆ ಬೆಳೆಯಬೇಕಾದರೆ ಎಷ್ಟು ತರಹದ ವಿಷ ರಾಸಾಯನಿಕಗಳನ್ನು ಹಾಕುತ್ತಾರೆನ್ನುವುದನ್ನು ಮಲೆನಾಡಿನಲ್ಲಿ ನಾವು ನೋಡಿದ್ದೇವೆ. ಹಾರುತ್ತಿರುವಂಥ ಚಿಟ್ಟೆ ಸಹ ಉಳಿಯುವುದಿಲ್ಲ, ಏಡಿಗಳು ಸಹಿತ ಸತ್ತು ಹೋಗುತ್ತವೆ. ಅದನ್ನು ನಿಷೇಧ ಮಾಡುವಂಥ ಕೆಲಸ ಇವತ್ತಿನವರೆಗೂ ಮಾಡಲಿಲ್ಲ. ಗುಟ್ಕಾವನ್ನೇ ನಿಷೇಧ ಮಾಡುವುದೇನು? ಸಿಗರೇಟು, ಅದರಿಂದಲೂ ಕ್ಯಾನ್ಸರ್ ಬರುತ್ತದೆಂದು ನಮ್ಮ ಅಪ್ಪನ ಕಾಲದಿಂದಲೂ ಹೇಳುತ್ತಿದ್ದಾರೆ. ಆದರೆ, ಅದನ್ನು ನಿಷೇಧ ಮಾಡುವಂಥ ಕೆಲಸ ಮಾಡಲಿಲ್ಲ. ಇಷ್ಟೆಲ್ಲಾ ಆದರೂ ಇವುಗಳನ್ನು ನಿಷೇಧ ಮಾಡದೇ ಇರುವ ಹಿನ್ನೆಲೆ ಏನು? ಕೇವಲ ಗುಟ್ಕಾವನ್ನು ಮಾತ್ರ ನಿಷೇಧ ಮಾಡುವುದೆಂದರೆ ಏನು? ಶ್ರೀಯುತ ಜೀವರಾಜ್‌ರವರು ಮಾತನಾಡುತ್ತಾ ತಾಯಿಯೇ ಮಗುವಿಗೆ ವಿಷ ಹಾಕಿದರೆ ಯಾವ ಡಾಕ್ಟರ್ ಸಹ ಬದುಕಿಸುವುದಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ಹೇಳಿದರು. ಬೇರೆ ರಾಜ್ಯದಲ್ಲಿ ಅಡಿಕೆ ಒಂದು ಪ್ರಮುಖ ವಾಣಿಜ್ಯ ಬೆಳೆ ಅಲ್ಲ. ನಮ್ಮ ರಾಜ್ಯದಲ್ಲಿ ಅಡಿಕೆ ಒಂದು ಪ್ರಮುಖ ವಾಣಿಜ್ಯ ಬೆಳೆ. ಅದನ್ನೇ ಅವಲಂಬಿತರಾಗಿರುವಂಥ ಲಕ್ಷಾಂತರ ರೈತ ಕುಟುಂಬಗಳಿವೆ. ಈ ಲಕ್ಷಾಂತರ ರೈತ ಕುಟುಂಬಗಳು ಏಕಾಏಕಿ ಬೀದಿಗೆ ಬರಬಾರದೆಂದರೆ ಅದಕ್ಕೆ ಪರ್ಯಾಯ ಕ್ರಮ ಏನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ತಿಳಿಸಬೇಕಾದಂಥ ಅವಶ್ಯಕತೆ ಇದೆ. ಮತ್ತೊಂದು ಮಾತು, ಆಮದು ಸುಂಕ ಹೆಚ್ಚು ಮಾಡಿದ್ದೇವೆ, ಅದರಿಂದ ಒಂದಷ್ಟು ಬೆಲೆ ನಿಯಂತ್ರಣಕ್ಕೆ

ಬರುತ್ತದೆ, ಬೆಲೆ ಸ್ಥಿರತೆಯನ್ನು ಕಾಪಾಡಬಹುದು ಎನ್ನುವಂಥ ಮಾತನ್ನು ಹೇಳಿದರು. ಆದರೆ, ಆಮದು ಸುಂಕ ಹೆಚ್ಚು ಮಾಡಿದ್ದಾರೆ, ಅದಕ್ಕೆ ಮುಂಚೆ ಏನಿತ್ತು ಎಂದರೆ, ಅಡಿಕೆಯನ್ನು ಮಂಗಳೂರಿನ portಗೆ ಮಾತ್ರ import ಮಾಡಿಕೊಳ್ಳುವಂಥ ಒಂದು ವ್ಯವಸ್ಥೆ ಇತ್ತು. ಈಗ ದೇಶದ ಎಲ್ಲಾ ಕಡೆಗೂ ಅಡಿಕೆಯನ್ನು import ಮಾಡುಕೊಳ್ಳುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಈ CAMPCO ಅವರು certify ಮಾಡುತ್ತಿದ್ದರು.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : Import duty 70 ರಿಂದ 120ರವರೆಗೂ ಮಾಡಿದರು. ಇದರಿಂದ ಪರಿಣಾಮ ಏನಾಗಿದೆಯೆಂದರೆ, ಸುಮಾರು 200 ರೂಪಾಯಿಗಳವರೆಗೂ ಜಾಸ್ತಿ ಆಗುವುದಕ್ಕೆ ಸಾಧ್ಯವಾಗಿದೆ. ಏಕೆಂದರೆ, ಅಡಿಕೆ ಬೆಳೆಗಾರರಿಗೆ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕೋಸ್ಕರವೇ ಹಿಂದೆ ನಿಯೋಗ ಹೋಗಿದ್ದಂಥ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಂಡಿರುವಂಥದ್ದು. ಅದು ಲಾಭ ಆಗಿದೆ. ಲಾಭ ಆಗಿಲ್ಲ ಎನ್ನುವಂಥ ಪ್ರಶ್ನೆ ಅಲ್ಲ.

ಶ್ರೀ ಡಿ.ಎನ್.ಜೀವರಾಜ್ : ತಾವು ಹೇಳಿದ್ದು ಸರಿ ಇದೆ. Import duty ಇದಕ್ಕಿಂತ ಮುಂಚೆ ಈಗ ಇರುವುದಕ್ಕಿಂತ ಜಾಸ್ತಿ ಇತ್ತು. ಅದನ್ನು ಮತ್ತೆ ಕಡಿಮೆ ಮಾಡಿದರು. ಕಡಿಮೆ ಮಾಡಿದ್ದನ್ನು ಮತ್ತೆ ಜಾಸ್ತಿ ಮಾಡಿದರು. ಶ್ರೀ ರವಿಯವರು present ಮಾಡುತ್ತಿರುವುದೇನೆಂದರೆ, ಮಂಗಳೂರು port ಗೆ ಮಾತ್ರ ಅಡಿಕೆ ಬರಬೇಕು ಎನ್ನುವಂಥ ಒಂದು ತೀರ್ಮಾನ ಆಯಿತು. ಏಕೆ ಈ ತೀರ್ಮಾನ ಆಯಿತು ಎಂದರೆ, Campco ಸರ್ಕಾರಿ ಸ್ವಾಮ್ಯದ ಒಂದು ಸಹಕಾರ ಸಂಸ್ಥೆ. ಅದರ supervisionನಲ್ಲಿ ಏನು ಅಡಿಕೆ ವಿದೇಶಗಳಿಂದ ಬಂತು, ಅದು ಯಾವ ತರಹದ್ದು ಬಂದಿದೆ, ಎಷ್ಟು ಬಂದಿದೆ ಎನ್ನುವುದು ಆಗಬೇಕು ಎನ್ನುವುದು ಆಗಿತ್ತು. ಇವತ್ತು ದೇಶದ ಎಲ್ಲಾ portಗಳಿಗೆ ಅಡಿಕೆ ಬರಬಹುದು ಎಂದು ಆಗಿದೆ. ಅದು ಬದಲಾಗಬೇಕು. ಮಂಗಳೂರು port ಗೆ ಬರುವಂತಾದರೆ ಒಳ್ಳೆಯದು ಎನ್ನುವಂಥ ಒಂದು ಸಲಹೆಯನ್ನು ಅವರು ಹೇಳಿದ್ದಾರೆ ಅಷ್ಟೇ.

ಶ್ರೀ ಟಿ.ಬಿ.ಜಯಚಂದ್ರ : ಒಳ್ಳೆಯ ಸಲಹೆಗಳು ಇದ್ದರೆ ಕೊಡಿ. Campco ಕೇರಳ ಮತ್ತು ಕರ್ನಾಟಕದ ಒಂದು ಅಂಗ ಸಂಸ್ಥೆ. ಕೇರಳದಲ್ಲಿ ಬ್ಯಾನ್ ಆಗಿ ಎಷ್ಟು ವರ್ಷಗಳಾಯಿತು? ಅಲ್ಲಿ ಆ ವಿಚಾರ ಪ್ರಸ್ತಾಪವೇ

ಮಾಡಲಿಲ್ಲ. ಇಲ್ಲಿ ಮಾತ್ರ ಪ್ರಸ್ತಾಪ ಆಗುತ್ತಿದೆ. ತಾವು ಪ್ರಸ್ತಾಪ ಮಾಡುತ್ತಿರುವುದು ತಪ್ಪು ಎಂದು ಅಲ್ಲ. ಏಕೆಂದರೆ, ಶೇಕಡ 60ಕ್ಕೂ ಹೆಚ್ಚು ಜನ ಬೆಳೆಗಾರರು ಇವತ್ತು ಕರ್ನಾಟಕದಲ್ಲಿದ್ದಾರೆ. ಕರ್ನಾಟಕದ ಹಿತವನ್ನು ರಕ್ಷಣೆ ಮಾಡಬೇಕು.

ಶ್ರೀ ಡಿ.ಎನ್.ಜೀವರಾಜ್ : ನಾನು–ನೀವೂ ಎಲ್ಲರೂ ಅಡಿಕೆ ಬೆಳೆಗಾರರೇ. ನನ್ನ ವಾದ ಏನೆಂದರೆ, ಉತ್ತರಪ್ರದೇಶ, ಬಿಹಾರ, ರಾಜಸ್ಥಾನ ಅಥವಾ ಗುಜರಾತ್ ಯಾರು ಬೇಕಾದರೂ ಅಡಿಕೆ/ ಗುಟ್ಕಾವನ್ನು ಬ್ಯಾನ್ ಮಾಡಬಹುದು. ಅವರಿಗೆ ಬೆಳೆಗಾರರೇ ಇಲ್ಲ. ಕರ್ನಾಟಕದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜೊತೆ ನಿಯೋಗ ಬಂದಿದ್ದರು. ಅವತ್ತು ಈ ದೇಶದ ಪ್ರಧಾನ ಮಂತ್ರಿಗಳಿಗೆ ಹೇಳುತ್ತಾ, ಒಂದು ಪದವನ್ನು ಹೇಳಿದ್ದರು. ಮೋಟಮ್ಮನವರು ವಿರೋಧ ಪಕ್ಷದ ನಾಯಕರಿದ್ದರು. ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಆಗ, ಆಚೆ–ಈಚೆ ಇವರೆಲ್ಲಾ ನಿಂತು, ಮಧ್ಯದಲ್ಲಿ ನಿಂತಿದ್ದ ಪ್ರಧಾನ ಮಂತ್ರಿಗಳಿಗೆ "ಬರೀ ಗುಟ್ಕಾ ನೋಡಬೇಡಿ, ಅದರ ಹಿಂದಿರುವ ರೈತರನ್ನು ನೋಡಿ," ಎಂದು ಹೇಳಿ ನಮ್ಮ ಮಾನ್ಯ ಇವತ್ತಿನ ಮುಖ್ಯಮಂತ್ರಿಗಳು, ಅವತ್ತಿನ ವಿರೋಧ ಪಕ್ಷದ ನಾಯಕರು. ನಾವು ಎಲ್ಲಾ ಜೊತೆಯಲ್ಲಿದ್ದೆವು. ನಮ್ಮ ಪರವಾಗಿಯೇ ಅವರು ಮಾತನಾಡಿದರು. ಯಾಕೋ ಇವತ್ತು 17ನೇ ದಿನಕ್ಕೆ ನಮ್ಮ ರೈತರ ಪರವಾದಂಥ ಮುಖ್ಯಮಂತ್ರಿಯವರು ಹೀಗೆ ಮಾಡಿಬಿಟ್ಟರಲ್ಲಾ ಎನ್ನುವಂಥ ನೋವು ಅಷ್ಟೇ ನಮಗೆ.

ಶ್ರೀ ಟಿ.ಬಿ.ಜಯಚಂದ್ರ : ನಾನೂ ಸಹ ಅಡಿಕೆ ಬೆಳೆಗಾರನಾಗಿದ್ದೇನೆ. ನಮ್ಮಲ್ಲಿ ಬೆಟ್ಟೆ, ಚಾಲಿ, ಕೆಂಪು ಅಡಿಕೆ ಹೀಗೆ ನಾನಾ ತರಹ ಇವೆ. ಆದರೆ ಗುಟ್ಕಾಗೆ ಹೋಗುವ ಅಡಿಕೆ ಯಾವುದೆಂದರೆ, ನಮ್ಮಲ್ಲಿ "ಉಂಡೆ" ಎಂದು ಹೇಳುತ್ತಾರೆ. ನಾವು ತಿನ್ನುವ ಅಡಿಕೆಗೆ ತೊಂದರೆ ಆಗಿಲ್ಲ.

ಶ್ರೀ ಸಿ.ಟಿ.ರವಿ : ಅಡಿಕೆ ಬೆಳೆ ಯಾವುದೇ ಕಾರಣಕ್ಕೂ ಕಡಿಮೆ ಆಗುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಈಗ ಕಾನೂನು ಸಚಿವರು ಈ ಸದನಕ್ಕೆ ಭರವಸೆ ಕೊಡಬೇಕು.

ಅಧ್ಯಕ್ಷರು : ಉತ್ತರ ಹೇಳುವಾಗ ಅದೆಲ್ಲವನ್ನೂ ಹೇಳಿ.

(ಗೊಂದಲ)

ಶ್ರೀ ಸಿ.ಟಿ.ರವಿ : ಅಡಿಕೆ ಬೆಲೆ ಕಡಿಮೆಯಾದರೆ ಸರ್ಕಾರ ಖರೀದಿ ಮಾಡುತ್ತೇವೆಂದು, ರೈತರಿಗೆ ಬೆಂಬಲ ಬೆಲೆ ಕೊಡುತ್ತೇವೆಂದು ಇವರು ಈ ಸದನಕ್ಕೆ ಹೇಳಲಿ. ಈಗ ಏನು ಮಾರುಕಟ್ಟೆ ದರ ಇದೆಯೋ, ಆ ಮಾರುಕಟ್ಟೆ ದರವನ್ನು ಸ್ಥಿರವಾಗಿಟ್ಟುಕೊಳ್ಳುವುದಕ್ಕೆ ಸರ್ಕಾರ ಮಧ್ಯ ಪ್ರವೇಶ ಮಾಡಿ ಖರೀದಿ ಮಾಡುತ್ತೇವೆ, ಯಾವುದೇ ಕಾರಣಕ್ಕೂ ಬೆಲೆ ಕುಸಿಯುವುದಕ್ಕೆ ಬಿಡುವುದಿಲ್ಲ

ಎನ್ನುವ ಭರವಸೆಯನ್ನು ಇವರು ಕೊಟ್ಟರೆ, ಇವರು ಗುಟ್ಕಾನಾದರೂ ಅಥವಾ ಯಾವುದನ್ನಾದರೂ ಬೇಕಾದರೆ ಬ್ಯಾನ್ ಮಾಡಿಕೊಳ್ಳಲಿ. ನೀವು ಆ ಭರವಸೆ ಕೊಡಿ.

ಅಧ್ಯಕ್ಷರು : ನೀವು ಚರ್ಚೆ ಮಾಡುವಾಗ ಇದೆಲ್ಲವನ್ನು ಹೇಳಿ.

ಶ್ರೀ ಟಿ.ಬಿ.ಜಯಚಂದ್ರ : ಇಲ್ಲಿ ಎರಡು issueಗಳಿವೆ. ಒಂದು ಅಡಿಕೆ ಬೆಳೆಗಾರರ ವಿಚಾರ. ನೀವು ಚರ್ಚೆ ಮಾಡುತ್ತಿರುವುದೇನಿದೆಯೆಂದರೆ, ಅಡಿಕೆಯನ್ನೇ ನಿಷೇಧ ಮಾಡಿಬಿಟ್ಟಿದ್ದಾರೇನೋ ಎನ್ನುವ ರೀತಿ ಮಾತಾಡುತ್ತಿದ್ದಾರೆ. ಟೊಬ್ಯಾಕೋ ಅಥವಾ ನಿಕೋಟಿನ್ contents ಇರುವುದನ್ನು ನಿಷೇಧ ಮಾಡಿರುವುದು.

ಅಧ್ಯಕ್ಷರು : ಇಲ್ಲ. ಇಲ್ಲ. ಮಂತ್ರಿಗಳೇ.....

ಶ್ರೀ ಡಿ.ಎನ್.ಜೀವರಾಜ್ : ಮಧು ಬ್ಯಾನ್ ಮಾಡಿ, ಅದರಿಂದಲೂ ಕ್ಯಾನ್ಸರ್ ಬರುತ್ತದೆ.

ಅಧ್ಯಕ್ಷರು : ಜೀವರಾಜ್, ದಯವಿಟ್ಟು, ನೀವು ಮಾತಾಡುವುದನ್ನೆಲ್ಲಾ ಮಾತನಾಡಿದ್ದೀರಿ. ನೀವು ಹೇಳುವುದನ್ನೆಲ್ಲಾ ಹೇಳಿದ್ದೀರಿ. ದಯವಿಟ್ಟು ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೋ ಹೇಳಲಿ ಬಿಡಿ. ನಾನು ಆಗಲೇ ನಮ್ಮ ಕಾಗೇರಿಯವರಿಗೆ ಹೇಳಿದೆ.

(ಗೊಂದಲ)

ಶ್ರೀ ಸಿ.ಟಿ.ರವಿ : ಮಾನ್ಯ ಸಭಾಧ್ಯಕ್ಷರೆ, ನಿಕೋಟಿನ್ ಬ್ಯಾನ್ ಆಗಿಲ್ಲ, ಹೊಗೆಸೊಪ್ಪು ಬ್ಯಾನ್ ಆಗಿಲ್ಲ. ಅಂದರೆ ಮೂಲ ವಸ್ತು ಏನಿದೆಯೋ ಅದನ್ನು ಬ್ಯಾನ್ ಮಾಡಿಲ್ಲ. ಈಗ ಬ್ಯಾನ್ ಮಾಡಿರುವುದು ಕೇವಲ ಗುಟ್ಕಾ ಮಾತ್ರ. ಇವರು ಹೊಗೆಸೊಪ್ಪನ್ನು ಬ್ಯಾನ್ ಮಾಡಲಿ. ಹೊಗೆಸೊಪ್ಪಿನಲ್ಲಿರುವಂಥ ನಿಕೋಟಿನ್ ಇರುವಂಥ ಎಲ್ಲಾ ವಸ್ತುಗಳನ್ನು ಇವರು ಬ್ಯಾನ್ ಮಾಡಿದ್ದರೆ, ಇವರ ಪ್ರಾಮಾಣಿಕತೆ ಒಪ್ಪಬಹುದಿತ್ತು. ಈಗ ಹಾನಿಕಾರಕ ಎಂದು ಆಗಿರುವುದು ಈ ನಿಕೋಟಿನ್‌ನಿಂದ ಹೊರತು ಅಡಿಕೆಯಿಂದಲ್ಲ. ಈ ನಿಕೋಟಿನ್ ಇರುವಂಥ ವಸ್ತುಗಳನ್ನು ಇವರು ಬ್ಯಾನ್ ಮಾಡಲಿ. ಮಾಡಿಸಿ. ಅಧ್ಯಕ್ಷರೆ, ನಿಕೋಟಿನ್ ಇರುವಂಥ ಹೊಗೆಸೊಪ್ಪನ್ನು ಬ್ಯಾನ್ ಮಾಡುತ್ತೇವೆಂದು ಹೇಳಲಿ ಇವರು.

(ಗೊಂದಲ)

ಅಧ್ಯಕ್ಷರು : ಅವರು ಏನು ಹೇಳುತ್ತಾರೋ ಹೇಳಲಿ ಬಿಡಿ.

ಶ್ರೀ ಸಿ.ಟಿ.ರವಿ : ಇವರು ಹೇಳುತ್ತಿದ್ದಾರೆ. ನಮ್ಮ ರಾಜ್ಯದ ಅಡಿಕೆನೇ ಈ ಗುಟ್ಕಾಗೆ ಹೋಗುವುದಿಲ್ಲ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಅವರು ಏನು ಹೇಳುತ್ತಾರೋ ಹೇಳಲಿ. ನೀವು–ನಂತರ ಹೇಳಿ.

ಶ್ರೀ ಸಿ.ಟಿ.ರವಿ : ಸಭಾಧ್ಯಕ್ಷರೆ, ರಾಜ್ಯದ ಅಡಿಕೆನೇ ಗುಟ್ಕಾಕ್ಕೆ ಹೋಗುವುದಿಲ್ಲ. ಗುಟ್ಕಾಕ್ಕೆ ಹೋಗುವುದು ಹೊರ ದೇಶದ್ದು, ಹೊರ ರಾಜ್ಯದ್ದು ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಯಾರು ಹೇಳಿದರು ಈಗ?

ಶ್ರೀ ಸಿ.ಟಿ.ರವಿ : ನಮ್ಮ ಗೋಪಾಲ ಪೂಜಾರ್ ರವರು ಹೇಳಿದರು.

ಅಧ್ಯಕ್ಷರು : ಅದು ಇನ್ನೂ ಚರ್ಚೆಯಾಗಿಲ್ಲ.

ಶ್ರೀ ಸಿ.ಟಿ.ರವಿ : ವಾಸ್ತವವಾಗಿ ಅದೇ ನಿಜವಾಗಿದ್ದರೆ ಅಡಿಕೆ ಬೆಲೆ ಸ್ಥಿರವಾಗಿರುತ್ತದೆ ಎಂದು ಹೇಳುತ್ತಿದ್ದಾರೆ, ನಾನು ರಾಜ್ಯದ ರೈತರ ಪರವಾಗಿ ಕೇಳುತ್ತೇನೆ.

ಅಧ್ಯಕ್ಷರು : ಇನ್ನೂ ಅವರು ಹೇಳಿಲ್ಲ.

ಶ್ರೀ ಸಿ.ಟಿ.ರವಿ : ಈ ಬೆಲೆ ಸದಾ ಕಾಲ ಇರುವಂತೆ ನಾವು ನೋಡಿಕೊಳ್ಳುತ್ತೇವೆ. ಈ ಬೆಲೆಯನ್ನು ಕುಸಿಯಲು ಬಿಡುವುದಿಲ್ಲ. ಅಕಸ್ಮಾತ್ ಕುಸಿದರೆ ಸರ್ಕಾರ ಮಧ್ಯೆ ಪ್ರವೇಶ ಮಾಡಿ ಅಡಿಕೆ ಬೆಳೆಯನ್ನು ಖರೀದಿ ಮಾಡಿ, ಬೆಂಬಲ ಬೆಲೆ ಕೊಡುತ್ತೇವೆಂಬ ಆಶ್ವಾಸನೆ ಕೊಡಲಿ ಮತ್ತು ವಿಷಕಾರಕವಿರುವ ಎಲ್ಲಾ ಅಂಶವನ್ನು ನಿಷೇಧ ಮಾಡುತ್ತೇವೆಂಬ ಪ್ರಾಮಾಣಿಕ ಕಾಳಜಿಯನ್ನು ತೋರಿಸಲಿ. ಯಾವ ಯಾವ product ನಲ್ಲಿ ವಿಷಕಾರಕ ಅಂಶಗಳಿವೆ, ಅವೆಲ್ಲವನ್ನೂ ನಿಷೇಧ ಮಾಡುವಂತಹ ಪ್ರಾಮಾಣಿಕ ಕಾಳಜಿಯನ್ನು ತೋರಿಸಲಿ. ಅದು ಇಲ್ಲದಿದ್ದರೆ ಇದು ರೈತನ ಮೇಲೆ ಚಪ್ಪಡಿ ಎಳೆಯುವುದು, ರೈತರ ಮೇಲೆ ಪ್ರಹಾರ ಮಾಡುವಂತಹುದು. ಅಡಿಕೆ ಬೆಳೆಗಾರರ ಮೇಲೆ ಗದಾ ಪ್ರಹಾರ ಮಾಡುವಂತಹುದು ಆಗುತ್ತದೆ. ಹಾಗೆ ಮಾಡಬಾರದು ಎಂಬುದು ನನ್ನ ವಿನಂತಿ.

ಅಧ್ಯಕ್ಷರು : ಇನ್ನು ಯಾರಾದರೂ ಮಾತನಾಡುವವರಿದ್ದೀರಾ?

ಶ್ರೀ ಬಿ.ಬಿ.ನಿಂಗಯ್ಯ (ಮೂಡಿಗೆರೆ) : ಸನ್ಮಾನ್ಯ ಅಧ್ಯಕ್ಷರೆ, ಇಂದು ಒಂದು ಗಂಭೀರವಾದ ವಿಚಾರವನ್ನು ಚರ್ಚೆ ಮಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ನಾವೆಲ್ಲರೂ ರೈತ ಪ್ರಧಾನವಾದ ಮಲೆನಾಡು ಪ್ರದೇಶದಿಂದ ಬಂದಿರುವವರು. ತಾವು ಪಕ್ಕದ ಜಿಲ್ಲೆಯಿಂದ ಬಂದಿರುವವರು. ಅಡಿಕೆ ಬೆಳೆಯುವಂತಹ ಎಲ್ಲಾ ಜಿಲ್ಲೆಯ ರೈತರುಗಳಿಗೆ ಬಹಳ ದೊಡ್ಡ ಆತಂಕವಾಗಿದೆ. ಇವತ್ತು ರಾಜ್ಯ ಸರ್ಕಾರ ಸನ್ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಂಡಿರುವ ನಿರ್ಧಾರದಿಂದಾಗಿ ರೈತ ಸಮುದಾಯ ಬಹಳ ಕಂಗಾಲಾಗಿದೆ. ಅವರಿಗೂ ಗೊತ್ತಿದೆ. ಈ ಹಿಂದೆ ಈ ಮನೆಯಲ್ಲಿ ನಾವು ಸದಸ್ಯರಿದ್ದಾಗ ಶ್ರೀಮಾನ್

ಜೆ.ಹೆಚ್.ಪಟೇಲ್ ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಈಗಿನ ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳಾಗಿದ್ದರು. ಆಗ ಇಂತಹುದೇ ಸಮಸ್ಯೆ ಉದ್ಭವವಾಗಿತ್ತು. ಆಗ ಅಡಿಕೆ ಬೆಳೆಯುವಂತಹ ಪ್ರದೇಶದಿಂದ ಬಂದಿದ್ದ ಎಲ್ಲಾ ಮಂತ್ರಿಗಳು, ಎಂ.ಎಲ್.ಎ.ಗಳು, ಅಡಿಕೆ ಬೆಳೆಗಾರರ ಸಂಘಟನೆಗಳವರನ್ನು ಕರೆದು ತುರ್ತು ಸಭೆ ಮಾಡಿ ಈಗಿನ ಆತಂಕ ಏನಿದೆ, ಅಂತಹುದೇ ಆತಂಕ ಆ ಸಂದರ್ಭದಲ್ಲಿಯೂ ಬಂದಿತ್ತು, ಅಂದಿನ ಮಾನ್ಯ ಮುಖ್ಯಮಂತ್ರಿಗಳು ಈ House ನಲ್ಲಿಯೇ ಮಾತನಾಡಿದ್ದಾರೆ. ಈ ಗುಟ್ಕಾದಲ್ಲಿ ಆರೋಗ್ಯಕ್ಕೆ ಹಾನಿಕಾರವಾಗುವ ಅಂಶಗಳೇನಿವೆ, ಅವನ್ನು ತೆಗೆದು ಹಾಕೋಣ, ಆದರೆ ಗುಟ್ಕಾ ನಿಷೇಧ ಮಾಡುವುದು ಬೇಡ ಎಂಬ ತೀರ್ಮಾನ ಮಾಡಿದ್ದು, ಅಂದಿನ ಚರ್ಚೆಯಲ್ಲಿ ಬಂದಿದೆ. ಕಡತದಲ್ಲಿ ಆ ವಿಚಾರ ಪ್ರಸ್ತಾಪವಾಗಿರುವುದು ಇದೆ. ಆ ವಿಚಾರವನ್ನು ನಾನು ಇಲ್ಲಿ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಶ್ರೀಮಾನ್ ಜೆ.ಹೆಚ್.ಪಟೇಲ್ ಸಾಹೇಬರವರು ಕೂಡಾ ಅಡಿಕೆ ಬೆಳೆಯುವ ಪ್ರದೇಶದಿಂದ ಬಂದಿದ್ದರು. ಆಗ ಶ್ರೀಮಾನ್ ಸಿದ್ದರಾಮಯ್ಯ ನವರು ಉಪ ಮುಖ್ಯಮಂತ್ರಿಗಳಾಗಿದ್ದರು. ಅವರೂ ಕೂಡಾ ಭಾಗಿಗಳೆ. ಇದು ಬಹಳ ಗಂಭೀರವಾದ ವಿಚಾರವಾಗಿರುವುದರಿಂದ ಅಡಿಕೆ ಬೆಳೆಯುವ ಪ್ರದೇಶದಿಂದ ಬಂದಿರುವ ಎಲ್ಲಾ ಮಂತ್ರಿಗಳು, ಎಂ.ಎಲ್.ಎ.ಗಳು, ಎಂ.ಪಿ.ಗಳು, ಎಂ.ಎಲ್.ಸಿ.ಗಳನ್ನು ಕರೆದು, ಅವರ ಅಧ್ಯಕ್ಷತೆಯಲ್ಲಿ ಅಡಿಕೆ ಬೆಳೆಗಾರರ ಸಂಘದವರನ್ನೂ ಕರೆದು, ಚರ್ಚೆಮಾಡಿ. ನಾನು 1988 ರಲ್ಲಿ ತೋಟಗಾರಿಕಾ ಸಚಿವನಾಗಿದ್ದೆ. ಅಂದು ತಮ್ಮ ಜಿಲ್ಲೆಯಿಂದ ಬಂದಿದ್ದಂತಹ ಮಾದಪ್ಪ ಎಂಬ ಎಂ.ಎಲ್.ಸಿ. ಇದ್ದರು. ಅವರು ಅಡಿಕೆಗೆ ಒಂದು ಮಂಡಳಿ ಬೇಕೆಂದು ನನಗೆ ಪ್ರಶ್ನೆ ಮಾಡಿದ್ದರು. ಆಗ ಅಡಿಕೆಗೆ ಇಂತಹ ಧಾರಣೆ ಬಂದಿರಲಿಲ್ಲ. ಅದಕ್ಕಾಗಿ ಅಡಿಕೆಗೆ ಮಂಡಳಿ ಮಾಡುವ ಅವಶ್ಯಕತೆ ಇಲ್ಲ ಎಂಬ ಉತ್ತರವನ್ನು Council ನಲ್ಲಿ ನಾನೇ ಕೊಟ್ಟಿದ್ದೆ. ಆದರೆ ಇಂದು ಅಡಿಕೆಗೆ ಮಂಡಳಿ ಮಾಡುವ ಪರಿಸ್ಥಿತಿ ಕೂಡಾ ಬಂದಿದೆ. ಇಂತಹ ಸಂದರ್ಭದಲ್ಲಿ ಏಕಾಏಕಿ ಸುಪ್ರೀಂ ಕೋರ್ಟ್ ಆದೇಶವನ್ನು ಪಾಲನೆ ಮಾಡಬೇಕಾಗುತ್ತದೆ ಎಂದು ತಾವು ಆದೇಶ ಮಾಡಿರುವುದು ರಾಜ್ಯದ ರೈತರಿಗೆ ಮಾತ್ರವಲ್ಲದೆ, ಆ ಭಾಗದಿಂದ ಬಂದಿರುವ ಜನ ಪ್ರತಿನಿಧಿಗಳಾದ ನಮಗೆಲ್ಲರಿಗೂ ಕೂಡಾ ಬಹಳ ಆಶ್ಚರ್ಯವಾಗುತ್ತದೆ. ಆದುದರಿಂದ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಮಂತ್ರಿಮಂಡಲದ ಹಾಗೂ ಸದನದಲ್ಲಿರುವ ಸದಸ್ಯರನ್ನು ಕೇಳುತ್ತೇನೆ, ಇದೊಂದು ಗಂಭೀರವಾದ ಸಮಸ್ಯೆಯಾಗಿರುವುದರಿಂದ ಒಂದು ತುರ್ತು ಸಭೆ ಕರೆದು ಕೂಲಂಕಷವಾದ ಚರ್ಚೆ ಮಾಡಿ, ಗುಟ್ಕಾ ನಿಷೇಧದ ಆದೇಶವನ್ನು

ಸದ್ಯಕ್ಕೆ ತಡೆ ಹಿಡಿದು ಎಲ್ಲರ ಅಭಿಪ್ರಾಯಗಳನ್ನು ಪಡೆದು ನಮ್ಮ ರೈತರಿಗೆ ಯಾವ ರೀತಿಯಲ್ಲಿ ನಾವು ಸಹಾಯ ಮಾಡಬಹುದು, ಈ ಆದೇಶದ ನಡುವೆಯೂ ಕೂಡಾ ಸರ್ಕಾರ ಹೇಗೆ ರೈತರ ನೆರವಿಗೆ ಮುಂದಾಗಬಹುದು ಎಂಬುದನ್ನು ಸುದೀರ್ಘವಾಗಿ ಚರ್ಚಿಸಿ, ಸರ್ಕಾರ ರೈತರ ನೆರವಿಗೆ ಬರುವಂತಹ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಇಂದು ಅಡಿಕೆ ಸಾಂಪ್ರದಾಯಿಕ ಬೆಳೆಯಾಗಿ ಉಳಿದಿಲ್ಲ ಎಂಬುದು ತಮಗೂ ಗೊತ್ತಿದೆ. ಅಡಿಕೆ ಒಂದು ವಾಣಿಜ್ಯ ಬೆಳೆಯಾಗಿ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಕೂಡಾ ಇಂದು ಧಾರಣಾ ಬಂದಿದೆ, ಬೆಲೆ ಬಂದಿದೆ. ಅದರ ಮೇಲೆ ಅವಲಂಬಿತವಾಗಿರುವ ರೈತರಷ್ಟೇ ಅಲ್ಲ, ಗ್ರಾಹಕರೂ ಮತ್ತು ಬಹಳಷ್ಟು ಜನರಿಗೆ ಉದ್ಯೋಗವಿಲ್ಲದೆ ನಿರುದ್ಯೋಗಿಗಳಾಗುತ್ತಾರೆಂಬುದು. ಅಡಿಕೆ ಧಾರಣೆ ಒಂದೇ ಬಾರಿಗೆ ಎರಡರಿಂದ ಮೂರು ಸಾವಿರದಷ್ಟು ಕುಸಿದಿದೆ. ತಮಗೂ ಗೊತ್ತಿದೆ. ಆ ಭಾಗದಲ್ಲಿ ತಾವೂ ಅಡಿಕೆ ಬೆಳೆಗಾರರಿದ್ದೀರಿ. ಆದುದರಿಂದ ಇದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡು ಈ ಸಮಸ್ಯೆಗೆ ತಕ್ಷಣ ಪರಿಹಾರ ನೀಡಬೇಕು. ರೈತರ ಆತಂಕವನ್ನು ಹೋಗಲಾಡಿಸಬೇಕು. ಒಂದು ವೇಳೆ ನಿಷೇಧ ಮಾಡಲೇ ಬೇಕಾದ ಅನಿವಾರ್ಯತೆ ಇದ್ದಲ್ಲಿ, ಹೇಗೆ ಸರ್ಕಾರ ರೈತರ ನೆರವಿಗೆ ಬರಬೇಕು? ಬೆಳೆ ನಷ್ಟ ತುಂಬಿಕೊಡುವುದಕ್ಕೆ, ಬೆಂಬಲ ಬೆಲೆ ನೀಡಲು ಸಾಧ್ಯವೆ ಎಂಬ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಸರ್ಕಾರ ರೈತರ ನೆರವಿಗೆ ಬರಬೇಕು.

ಅಧ್ಯಕ್ಷರು : ಬೆಂಬಲ ಬೆಲೆ ಕೊಡಬೇಕೆಂದು ಹೇಳುತ್ತೀರಿ.

ಶ್ರೀ ಬಿ.ಬಿ.ನಿಂಗಯ್ಯ : ಬೆಂಬಲ ಬೆಲೆ ಕೊಡಬೇಕೆಂಬುದು ಒಂದು. ಎರಡನೆಯದಾಗಿ, ತಕ್ಷಣ ಈ ಆದೇಶವನ್ನು ತಡೆ ಹಿಡಿದು ಎಲ್ಲರೂ ಸೇರಿ ಸುದೀರ್ಘವಾಗಿ ಚರ್ಚೆಯಾದ ಮೇಲೆ ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳಿ. ಅಧ್ಯಕ್ಷರೆ, ನೀವೇ ನಮ್ಮ ಪರವಾಗಿ ಅಲ್ಲಿದ್ದೀರಿ. ತಮ್ಮ ಅಪಾರ ಅನುಭವವನ್ನು ಬಳಸಿ ರೈತರ ನೆರವಿಗೆ ಬರಬೇಕು. ಒಟ್ಟಾರೆಯಾಗಿ ಸರ್ಕಾರ ರೈತರ ಪರವಾಗಿ ಕೆಲಸ ಮಾಡಬೇಕೆಂದು ನಾವು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇವೆ.

ಅಧ್ಯಕ್ಷರು : ನೀವು ಹಿಂದೆ ತೋಟಗಾರಿಕಾ ಸಚಿವರಾಗಿದ್ದವರು.

ಶ್ರೀ ಬಿ.ಬಿ.ನಿಂಗಯ್ಯ : ನಲವತ್ತೇ ದಿನ ಇದ್ದದ್ದು.

ಅಧ್ಯಕ್ಷರು : ಒಂದೇ ದಿನ ಇರಲಿ ಬಿಡಿ. ಅಲ್ಲಿಂದ ಬಂದವರು. ಒಂದು ಹೇಳಿ. ಗುಟ್ಕಾ ನಿಷೇಧದಿಂದ ಅಡಿಕೆ ಬೆಳೆಗಾರರ ಮೇಲೆ ಏನು ಪರಿಣಾಮವಾಗಿದೆ, ಕಾರಣಗಳೇನು?

ಶ್ರೀ ಬಿ.ಬಿ.ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ಇವತ್ತು ಅಡಿಕೆ ಧಾರಣೆ ಕುಸಿದಿದೆ. ಎರಡನೆಯದಾಗಿ, ಯಾವ ಕಂಪನಿಗಳು ಗುಟ್ಕಾ ತಯಾರು ಮಾಡುತ್ತಿದ್ದವು. ಅವು ಅಡಿಕೆಗಳನ್ನು ಕೊಳ್ಳುತ್ತಿಲ್ಲ. ಇದರ ಹಿಂದೆ ಬಹಳ ದೊಡ್ಡ ಲಾಬಿ ಕೆಲಸ ಮಾಡುತ್ತಿದೆ ಎಂಬುದು ಸತ್ಯವಿದೆ. ಅದರ ಬಗ್ಗೆ ನಾವು ಕೂಲಂಕಷವಾಗಿ ಚರ್ಚೆ ಮಾಡಬೇಕೆಂಬುದಕ್ಕಾಗಿ ವಿಶೇಷ ಸಭೆ ಕರೆದು, ರೈತರ ನೆರವಿಗೆ ಬರಬೇಕು. ರೈತರು ಬೀದಿಗೆ ಬರುವಂತಹ ಪರಿಸ್ಥಿತಿ ತಪ್ಪಿಸಬೇಕೆಂಬುದು ನಮ್ಮ ಕೋರಿಕೆ. ಆ ಕಾರಣಕ್ಕಾಗಿ ತಾವು ದಯಮಾಡಿ ಅವರಿಗೆ ಆದೇಶ ಮಾಡಬೇಕು. ಗುಟ್ಕಾ ನಿಷೇಧ ಮಾಡುವ ಆದೇಶವನ್ನು ತಡೆ ಹಿಡಿದು ಆಮೂಲಾಗ್ರ ಚರ್ಚೆಯಾಗಿ, ಎಲ್ಲಾ ಪ್ರತಿಪಕ್ಷದವರನ್ನು, ರೈತ ಸಂಘಟನೆಗಳನ್ನು ಕರೆದು ತೀರ್ಮಾನ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ) : ಸನ್ಮಾನ್ಯ ಸಭಾಧ್ಯಕ್ಷರೆ, ಗುಟ್ಕಾ ನಿಷೇಧದ ಬಗ್ಗೆ ಏನು ಕಾನೂನು ತಂದಿದ್ದಾರೆ, ಇವತ್ತು ಈ ಸದನದಲ್ಲಿ ನಿಂತು ಎರಡನ್ನೂ ಮಾತನಾಡಲಾಗುವುದಿಲ್ಲ. ನಿಷೇಧ ಮಾಡಿರುವುದನ್ನು ತಪ್ಪು ಎಂದೂ ಹೇಳಲಾಗುವುದಿಲ್ಲ. ಇಲ್ಲ, ಒಳ್ಳೆಯದು ಎಂದೂ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಒಂದು ಕಡೆ ರೈತರ ಉಳಿವು-ಅಳಿವಿನ ಪ್ರಶ್ನೆ ಅಡಗಿದೆ. ಮತ್ತೊಂದು ಕಡೆ ಗುಟ್ಕಾ ತಯಾರು ಮಾಡುವ ಕಾರ್ಖಾನೆಗಳು, ಯಾರು ತಯಾರು ಮಾಡುತ್ತಾರೋ, ಅವರು ಒಳ್ಳೆಯ ಮಾದಕ ವಸ್ತುಗಳನ್ನು ಹಾಕುವುದಿಲ್ಲ. ಅಂಗಡಿಗೆ ಹೋಗಿ ಗುಟ್ಕಾ ಕೊಡಿ ಎನ್ನುವುದಕ್ಕೆ 60 ಕೊಡಿ, 50 ಕೊಡಿ, 80 ಕೊಡಿ ಎನ್ನುತ್ತಾರೆ. ಇದೇನೆಂದರೆ, ಆ ಪ್ರಮಾಣದ ಗುಟ್ಕಾ. ಅದರ ಒಳಗೆ ಹಾಕುವುದು 50 ಪ್ರಮಾಣದ್ದು ಕೊಡಿ, 40 ಪ್ರಮಾಣದ್ದು ಕೊಡಿ, 60 ಪ್ರಮಾಣದ್ದು ಕೊಡಿ ಎನ್ನುತ್ತಾರೆ. Experience ಅಲ್ಲ. ಬೀಡಾ ಅಂಗಡಿಯವನು ಪರಿಚಯ ಇರುವುದರಿಂದ ಹೇಳುತ್ತಿದ್ದೇನೆ. Gsass, root level ನಲ್ಲಿ ಆಗುತ್ತಿರುವ ಅನ್ಯಾಯ ಇದು. ಯಾರು ತಯಾರು ಮಾಡುತ್ತಾರೆ, ಆ ಕಾರ್ಖಾನೆಯ ಮಾಲೀಕರ ಮೇಲೆ ಸ್ಪಷ್ಟವಾದ ಕಾನೂನನ್ನು ತಂದು 10-15% ತಂಬಾಕು ಹಾಕಿ ಕೊಟ್ಟರೆ ಏನೂ ಆಗುವುದಿಲ್ಲ. ಸ್ವಲ್ಪ ಎಲೆ ಅಡಿಕೆ ಹಾಕಿಕೊಂಡಂತೆ ಮತ್ತು ಬಂದ ಹಾಗೆ ಆಗುತ್ತದೆ. ಒಂದು ಸಿಗರೇಟ್ ಸೇದಿದಂತಾಗುತ್ತದೆ, ಸುಮ್ಮನಾಗುತ್ತಾರೆ.

ಒಬ್ಬ ಮಾನ್ಯ ಸದಸ್ಯರು : cheap liquor ರೀತಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಆದರೆ ಇದು 80% ಹಾಕುವುದು cheap liquor ಗಿಂತ ಇನ್ನೂ ಸ್ವಲ್ಪ ಕೆಳಗೆ. 60% ಮಾದಕ ವಸ್ತು ಹಾಕಿಕೊಡುತ್ತಾರೆ. ಅದು ಬಾಯೆಲ್ಲಾ ಕೊಳೆತು ಹೋಗುತ್ತದೆ. ಬಹಳ ರೀತಿಯಲ್ಲಿ ಪರಿಣಾಮ ಬೀರುತ್ತದೆ. ಅದಕ್ಕೋಸ್ಕರ ಇಂದು ಆ ಒಂದು ವ್ಯವಸ್ಥೆಯೊಳಗೆ ಬಹಳ ಸ್ಪಷ್ಟವಾದ ನಿರ್ದೇಶನವನ್ನು ತರಬೇಕಾಗಿದೆ. ಅದು ಗುಟ್ಕಾ ನಿಷೇಧದಲ್ಲಿ ಬಹಳ ಪ್ರಮುಖವಾದುದು. ಆದರ ಜೊತೆಯಲ್ಲಿ ನಮ್ಮ ಎಲ್ಲಾ ಸದಸ್ಯರು, ನಾಯಕರು ಮಾತನಾಡಿದ ಹಾಗೆ ಎಷ್ಟು ಪ್ರಮಾಣದಲ್ಲಿ ಗುಟ್ಕಾಗೆ ಅಡಿಕೆಯನ್ನು ಉಪಯೋಗ ಮಾಡುತ್ತಾರೆ ಎಂಬುದನ್ನು ಕಂಡು ಹಿಡಿಯಬೇಕು. ಅದಕ್ಕೆ ಎಷ್ಟು ಪ್ರಮಾಣದಲ್ಲಿ ಅಡಿಕೆ ಹೋಗಬಹುದು, ಅಡಿಕೆ ಒಂದು ಸಾಂಪ್ರದಾಯಿಕ ಬೆಳೆ. ಅದು ಬಹಳ ವರ್ಷಗಳಿಂದ ತಿನ್ನಲು ಉಪಯೋಗಿಸುವಂತಹ ಬೆಳೆ. ಆದರೆ ಇಂದು ಅದನ್ನು ಗುಟ್ಕಾಗೆ ಹಾಕಿದ್ದರಿಂದ ಬೆಲೆ ಹೆಚ್ಚಾಗಿದೆ. ಬಯಲು ಸೀಮೆಯಲ್ಲಿಯೂ ಬೆಳೆಯುತ್ತಿದ್ದೆವು, ಈಗ ಎಲ್ಲಾ ಕಳೆದುಕೊಂಡಿದ್ದೇವೆ. ಸುಳಿ ಬಿದ್ದು ಬೆಳೆ ನಷ್ಟವಾಗಿ ಹೋದವು. ಒಂದೂ ಇಲ್ಲ. ಆದುದರಿಂದ ಈ ಬೆಳೆಯನ್ನು ಹೆಚ್ಚಿನ ಪ್ರಮಾಣದಲ್ಲಿ, rate ಬಂದ ತಕ್ಷಣ ಬೆಳವಣಿಗೆ ಜಾಸ್ತಿಯಾಗಿ ಇವತ್ತು ಈ ಒಂದು ವ್ಯವಸ್ಥೆಗೆ ಬಂದಿದ್ದೇವೆ. ಮಾರುಕಟ್ಟೆಯಲ್ಲಿ ಉತ್ಕೃಷ್ಟ ದರಕ್ಕೆ ಏರಿಕೆಯಾಗಿದ್ದ ಅಡಿಕೆ ಧಾರಣೆ ಈಗ ಕುಸಿದಿರುವುದರಿಂದ, ಕುಸಿದಿರುವ ಅಡಿಕೆ ಧಾರಣೆಯನ್ನು ತುಂಬಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡಲೇಬೇಕು. ರೈತ ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಲು ಆಯೋಗವೊಂದನ್ನು ರಚಿಸುವ ಮೂಲಕ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವ ಚಿಂತನೆ ಮಾಡಿದ್ದೇವೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಘನತೆವೆತ್ತ ರಾಜ್ಯಪಾಲರ ಭಾಷಣದ ಮೂಲಕ ಬಹಳ ಬದ್ಧತೆಯಿಂದ ಹೇಳಿಸಿದ್ದಾರೆ. ಆದುದರಿಂದ, ಅಡಿಕೆ ಬೆಳೆಗೂ ವೈಜ್ಞಾನಿಕ ಬೆಲೆ ನಿಗದಿಪಡಿಸಿ, ಅಡಿಕೆ ಬೆಳೆಗಾರರಿಗೆ ಯಾವುದೇ ತೊಂದರೆ ಬಾರದ ರೀತಿಯಲ್ಲಿ ಒಂದು ಪ್ರಾಮಾಣಿಕ ವ್ಯವಸ್ಥೆ ಮಾಡಿದರೆ ನಿಜವಾಗಿಯೂ ಅವರು ಉಳಿಯುತ್ತಾರೆ ಮತ್ತು ಗುಟ್ಕಾವನ್ನು ನಿಯಂತ್ರಿಸಿ, ನಿಷೇಧಿಸುವ ಸಂಬಂಧ ಸುಪ್ರೀಂ ಕೋರ್ಟ್‌ಗೆ ಸರ್ಕಾರವು ಯಾವುದೇ ಮಾಹಿತಿ ನೀಡಿಲ್ಲವೆಂದು ಕಾಣುತ್ತದೆ. ಸುಪ್ರೀಂ ಕೋರ್ಟ್‌ಗೆ ಸರ್ಕಾರ ಮಾಹಿತಿ ಕೊಡಬೇಕು. ಶೇಕಡ 30,50,80ರಷ್ಟು ಇಲ್ಲವೇ ಎಷ್ಟು ಶೇಕಡ ಪ್ರಮಾಣದಲ್ಲಿ ಮಾದಕ ಬೆರೆಸಿ ಗುಟ್ಕಾ ತಯಾರಿಸಲು ನೀವು ಲೈಸೆನ್ಸ್ ಕೊಟ್ಟಿದ್ದೀರೆಂದು ಕೇಳಬೇಕು. ಹೇಗೆ ಬೇಕೋ ಹಾಗೆ ಅಂದರೆ ಇತ್ತ ಕಡೆ ಸಾರಾಯಿಯೂ ಒಂದೇ, ಅತ್ತ ಕಡೆ 'ಏ' ಕ್ಲಾಸ್ ಡ್ರಿಂಕ್ಸ್ ಸಹ ಒಂದೇ

ಎನ್ನುವಂತೆ ರಾಜ್ಯದಲ್ಲಿ ನಾನಾ ತರಹದ ಗುಟ್ಕಾಗಳಿವೆ. ಅವುಗಳನ್ನು ತಯಾರಿಸುವೆಡೆ ಆರೋಗ್ಯ ಇಲಾಖೆಯವರು ತೀವ್ರ ನಿಗಾ ಇರಿಸಿ ಪ್ರಾಮಾಣಿಕ ಕೆಲಸ ಮಾಡಿದರೆ ಬಹುಶಃ ಉತ್ಪಾದಕರು ಮತ್ತು ಗ್ರಾಹಕರು ಇಬ್ಬರೂ ಉಳಿಯುತ್ತಾರೆ ಎಂಬುದು ನನ್ನ ಭಾವನೆಯಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ವಡ್ನಾಳ್ ರಾಜಣ್ಣ (ಚನ್ನಗಿರಿ) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ದೇಶದ ಸುಮಾರು 25 ರಾಜ್ಯಗಳಲ್ಲಿ ಗುಟ್ಕಾ ನಿಷೇಧಿಸಲಾಗಿದೆ. ಅದರಂತೆ ಕರ್ನಾಟಕದಲ್ಲೂ ಸಹ ಗುಟ್ಕಾ ನಿಷೇಧಿಸಿರುವುದು ಅಡಿಕೆ ಬೆಳೆಗಾರರಲ್ಲಿ ಆತಂಕ ಮೂಡಿಸಿದೆ. ಕರ್ನಾಟಕದಲ್ಲಿ ಸುಮಾರು 6 ಲಕ್ಷ ಹೆಕ್ಟೇರ್‌ಗಿಂತಲೂ ಹೆಚ್ಚಿನ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿದೆ. ಅಡಿಕೆ ಕೃಷಿಯಲ್ಲಿ 7 ರಿಂದ 8 ಲಕ್ಷ ಕುಟುಂಬಗಳು ತೊಡಗಿವೆ. ಇದೆಲ್ಲವನ್ನೂ ಲೆಕ್ಕ ಹಾಕಿದರೆ 60 ರಿಂದ 70 ಲಕ್ಷದಷ್ಟು ಜನಸಂಖ್ಯೆ ಅಡಿಕೆ ಕೃಷಿಯಲ್ಲಿ ತೊಡಗಿಕೊಂಡಿವೆ. ಈ ತಕ್ಷಣದಲ್ಲಿ ನಮಗೆ ಅಂದರೆ, ಅಡಿಕೆ ಬೆಳೆಗಾರರಿಗೆ ಏನು ಅನಿಸುತ್ತದೆಂದರೆ, ಬೇರೆ ರಾಜ್ಯಗಳಲ್ಲಿ ಗುಟ್ಕಾ ನಿಷೇಧಿಸಿರುವುದರಿಂದ ನಮಗೆ ಅದು ಅಷ್ಟು ಗಂಭೀರ ಸಮಸ್ಯೆಯಾಗಿ ಕಾಣುತ್ತಿಲ್ಲ. ಆದರೆ, ಕರ್ನಾಟಕದಲ್ಲಿ ಸುಮಾರು 15 ಜಿಲ್ಲೆಗಳಲ್ಲಿ ಅಡಿಕೆಯನ್ನು ಬೃಹತ್ ಪ್ರಮಾಣದಲ್ಲಿ ಬೆಳೆಯುತ್ತಿದ್ದೇವೆ. 80–90 ತಾಲ್ಲೂಕುಗಳಲ್ಲಿ ಅಡಿಕೆ ಬೆಳೆಗಾರರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಕರ್ನಾಟಕದಲ್ಲಿ ಗುಟ್ಕಾ ನಿಷೇಧಿಸಲಾಗುವುದೆಂದು ಸರ್ಕಾರವು ದಿಢೀರ್ ಘೋಷಣೆ ಮಾಡಿದೆ ಎನ್ನುವ ತಪ್ಪು ಕಲ್ಪನೆ ಇರುವುದರಿಂದ, ಗುಟ್ಕಾ ನಿಷೇಧ ಕುರಿತಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶ ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಎಲ್ಲಾ ರಾಜ್ಯಗಳಲ್ಲೂ ಗುಟ್ಕಾ ನಿಷೇಧಿಸಿದ್ದು, ಅದೇ ರೀತಿ ಕರ್ನಾಟಕದಲ್ಲೂ ಗುಟ್ಕಾ ನಿಷೇಧಿಸಲು ಕರ್ನಾಟಕ ಸರ್ಕಾರಕ್ಕೆ 4–5 ವಾರಗಳ ಸಮಯಾವಕಾಶ ನೀಡಿದ್ದು, ಅಷ್ಟರೊಳಗೆ ರಾಜ್ಯ ಸರ್ಕಾರವು ಗುಟ್ಕಾ ನಿಷೇಧಿಸಬೇಕೆಂಬ ಮಾಹಿತಿ ಆಧಾರದ ಮೇಲೆ ಕರ್ನಾಟಕದಲ್ಲಿ ಗುಟ್ಕಾ ನಿಷೇಧಿಸಲಾಗಿದೆ ಎನ್ನುವ ಮಾಹಿತಿ ನನಗೆ ಬಂದಿದೆ. ಹಾಗಾಗಿ, ಅಡಿಕೆ ಬೆಳೆಗಾರರಾದ ನಾವು ಸರ್ಕಾರದಿಂದ ಬಯಸುವುದೇನೆಂದರೆ, ಯಾವುದೇ ಸರ್ಕಾರ ಇರಬಹುದು, ಅಡಿಕೆ ಬೆಳೆಗಾರರ ಬಗ್ಗೆ ಚಿಂತನೆ ನಡೆಸುವಾಗ ನಾವು ರಾಜಕಾರಣ ಮಾಡದೆ ಅಡಿಕೆ ಬೆಳೆಗಾರರ ಹಿತಾಸಕ್ತಿ ಕಾಪಾಡುವ ಪ್ರಯತ್ನ ನಮ್ಮೆಲ್ಲರ ಕಡೆಯಿಂದ ಆಗಬೇಕು. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, 2000 ಇಸವಿಯಲ್ಲಿ ಪ್ರಥಮ ಬಾರಿಗೆ ಗುಟ್ಕಾ ನಿಷೇಧಿಸಲಾಗಿತ್ತು. ಗುಟ್ಕಾ ನಿಷೇಧಿಸುವ ಸಂದರ್ಭದಲ್ಲಿ ಕೇಂದ್ರದಲ್ಲಿ ಎನ್‌ಡಿಎ

ಸರ್ಕಾರ ಅಧಿಕಾರದಲ್ಲಿದ್ದರೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು. ಆ ಸಂದರ್ಭದಲ್ಲಿ ಏನೇನು ಪ್ರಯತ್ನಗಳನ್ನು ಮಾಡಬೇಕಾಗಿತ್ತೋ, ಆ ಪ್ರಯತ್ನವನ್ನು ಎಲ್ಲರೂ ಮಾಡಿದ್ದೇವೆ. ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದಾಗ ತಾವು (ಸಭಾಧ್ಯಕ್ಷರು) ಅಂದು ಶಿವಮೊಗ್ಗದಲ್ಲಿ ಜರುಗಿದ ಅಡಿಕೆ ಬೆಳೆಗಾರರ ಸಭೆಯಲ್ಲಿ ಭಾಗವಹಿಸಿದ್ದಿರಿ. ಅವತ್ತಿನ ದಿವಸ Food Actನಲ್ಲಿ ಅಡಿಕೆ ಪದಾರ್ಥವಿತ್ತು. ಅದನ್ನು ಸದರಿ ಕಾಯಿದೆಯಿಂದ ಹೊರಗಿರಿಸುವ ಪ್ರಯತ್ನ ಮಾಡಿದೆವು ಆದರೆ, ಅಂದು ಆ ಪ್ರಯತ್ನ ನೆರವೇರದೆ ವಿಫಲವಾಯಿತು. ಇಲ್ಲಿ ಬಂದಿರುವ ಸಮಸ್ಯೆ ಏನೆಂದರೆ, ಅಡಿಕೆಯನ್ನು Food Act ವ್ಯಾಪ್ತಿಯೊಳಗೆ ತಂದಿರುವುದರಿಂದ ಸಮಸ್ಯೆ ಉದ್ಭವವಾಗುತ್ತದೆ. ಗುಟ್ಕಾದಲ್ಲಿ ಶೇಕಡ 90ರಷ್ಟು ಅಡಿಕೆ ಉಪಯೋಗಿಸಲಾಗುತ್ತದೆ. ಅರಸೀಕೆರೆ ಮತಕ್ಷೇತ್ರದ ಮಾನ್ಯ ಶಾಸಕರು ಮಾತನಾಡುವ ಸಂದರ್ಭದಲ್ಲಿ ಗುಟ್ಕಾದಲ್ಲಿ ಎಷ್ಟು ಪ್ರಮಾಣದಲ್ಲಿ ಅಡಿಕೆ ಉಪಯೋಗಿಸಲಾಗುತ್ತಿದೆ ಎಂಬುದು ತಮಗೆ ಗೊತ್ತಿಲ್ಲವೆಂದರು. ಗುಟ್ಕಾದಲ್ಲಿ ಶೇಕಡ 90ರಿಂದ 95ರಷ್ಟು ಪ್ರಮಾಣದಲ್ಲಿ ಅಡಿಕೆಯನ್ನು ಉಪಯೋಗಿಸಲಾಗುತ್ತದೆ. ಗುಟ್ಕಾದಲ್ಲಿ ಇನ್ನಿತರ ಪದಾರ್ಥಗಳೇನಿವೆ, ಅವುಗಳನ್ನು ಶೇಕಡ 5 ರಿಂದ 10ರಷ್ಟು ಉಪಯೋಗಿಸಿಕೊಳ್ಳಬೇಕೇ ವಿನಾ ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಲು ಅವಕಾಶವಿಲ್ಲ. ಪರಿಸ್ಥಿತಿ ಹೀಗಿರುವಾಗ, ಅಡಿಕೆ ಬೆಳೆಗಾರರ ಒತ್ತಾಯ ಏನೆಂದರೆ, ಗುಟ್ಕಾದಲ್ಲಿರುವ ಹಾನಿಕಾರಕ ಪದಾರ್ಥವೇನಿದೆ. ಅದನ್ನು ಮೊದಲು ಕಂಡುಹಿಡಿಯಬೇಕು. ಹಾನಿಕಾರಕ ಪದಾರ್ಥ ಕಂಡುಹಿಡಿದ ಬಳಿಕ ಆರೋಗ್ಯಕ್ಕೆ ಮಾರಕವಾಗುವ ಅಂಶಗಳುಳ್ಳ ಪದಾರ್ಥಗಳನ್ನು ಹೊರತುಪಡಿಸಿದ ಗುಟ್ಕಾ ತಯಾರಿಸಬೇಕೆಂಬ ನಿರ್ದೇಶನವನ್ನು ಆಯಾ ಗುಟ್ಕಾ ಕಂಪನಿಗಳಿಗೆ ನೀಡಬೇಕೆಂದು ನಾವು ಒತ್ತಾಯ ಮಾಡುತ್ತಿದ್ದರೂ, ಇದುವರೆಗೂ ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕಾರ್ಯಗತವಾಗಿಲ್ಲ. ಇದೆಲ್ಲಕ್ಕೂ ಸರಿಯಾದ ಉತ್ತರ ಸಿಗಲು ಸಾಧ್ಯತೆಯಿದೆ. ಗುಟ್ಕಾ ನಿಷೇಧಿಸಲಾಗಿದೆ ಎಂದ ತಕ್ಷಣ ಇತ್ತ ಕಡೆ ಇರುವವರು (ಆಡಳಿತ ಪಕ್ಷ) ಒಂದು ತರಹ ಮಾತನಾಡಿ, ಇವರು ಅತ್ತ ಕಡೆ (ವಿರೋಧ ಪಕ್ಷ) ಹೋದ ತಕ್ಷಣ ಆಡುವ ಮಾತು ಬೇರೆಯಾಗುತ್ತದೆ! ಆ ರೀತಿ ಆಗಬಾರದು. ಇಲ್ಲಿರುವ ನಮ್ಮೆಲ್ಲರ ಚಿಂತನೆ ಹೇಗಿರಬೇಕೆಂದರೆ, ನಾವೆಲ್ಲರೂ ಅಡಿಕೆ ಬೆಳೆಯುವ ಪ್ರದೇಶದಿಂದ ಆಯ್ಕೆಯಾಗಿ ಬಂದಿದ್ದೇವೆ. ವಿರೋಧ ಪಕ್ಷ ಇರಬಹುದು, ಆಡಳಿತ ಪಕ್ಷ ಇರಬಹುದು, ನಾವು ಅಧಿಕಾರದಲ್ಲಿರಬಹುದು, ಇಲ್ಲದೇ ಇರಬಹುದು ಮತ್ತು ಕೇಂದ್ರದಲ್ಲಿ ಯಾವುದೇ ಸರ್ಕಾರ ಇರಬಹುದು. ಆದರೆ, ಯಾವುದೇ ಸರ್ಕಾರ ಇದ್ದರೂ ನಾವೆಲ್ಲರೂ ಚಿಂತನೆ

ಮಾಡಬೇಕಾಗಿರುವುದೇನೆಂದರೆ, ರಾಜ್ಯದ ಅಡಿಕೆ ಬೆಳೆಗಾರರ ಹಿತ ಕಾಪಾಡುವ ಪ್ರಾಮಾಣಿಕ ಪ್ರಯತ್ನ ಎಲ್ಲರಿಂದಲೂ ಆಗಬೇಕೆಂಬ ವಿನಂತಿಯನ್ನು ಮಾಡಿಕೊಳ್ಳಬಯಸುತ್ತೇನೆ. ಇದರ ಜೊತೆಗೆ, ಇವತ್ತು ಅಡಿಕೆ ಧಾರಣೆಯಲ್ಲಿ ಏರಿಳಿತ ಕಂಡುಬಂದಿದೆ. ಇವತ್ತು ಗುಟ್ಕಾ ನಿಷೇಧಿಸಲಾಗುತ್ತದೆ ಎಂದ ತಕ್ಷಣ ಕಳೆದ ತಿಂಗಳು 28ನೇ ತಾರೀಖಿನಲ್ಲಿ ಶಿವಮೊಗ್ಗದಲ್ಲಿ 18,000 ರೂ.ನಿಂದ 20,000 ರೂ.ವರೆಗೆ ಧಾರಣೆ ಇದ್ದ ಅಡಿಕೆ ಬೆಲೆ 30ನೇ ತಾರೀಖಿನಂದು ಒಂದೇ ದಿವಸದಲ್ಲಿ 4,000 ರೂಪಾಯಿಗಳಷ್ಟು ಕುಸಿತ ಕಂಡಿದೆ. ಇದು ಕಾಕತಾಳೀಯವೂ ಇರಬಹುದು. ಬೇರೆ ತರಹದ ವಾತಾವರಣ ನಿರ್ಮಾಣವಾಗಿದ್ದರೂ ಇರಬಹುದು. ಇದರಿಂದ ಒಂದು ರೀತಿಯಲ್ಲಿ ಗುಟ್ಕಾ ಬೆಳೆಗಾರರಿಗೆ ಆತಂಕವಾಗುತ್ತದೆ. ಗುಟ್ಕಾ ನಿಷೇಧವಾಗುತ್ತದೆಂದ ತಕ್ಷಣ ಅಡಿಕೆಯನ್ನು ಆದಷ್ಟು ಬೇಗ ಮಾರಾಟ ಮಾಡಬೇಕೆಂಬ ಆತಂಕ ಉಂಟಾಗುತ್ತದೆ. ಮತ್ತೊಂದೆಡೆ, 'ಗುಟ್ಕಾ ನಿಷೇಧವಾಯಿತು, ಇರುವ ಮಾಲನ್ನು ಏಕೆ ಖರ್ಚು ಮಾಡಬೇಕು? ಅಡಿಕೆ ತೆಗೆದುಕೊಂಡು ನಾವೇನು ಮಾಡಬೇಕು?' ಎಂದು ಆಲೋಚಿಸಿ ಅಡಿಕೆ ಖರೀದಿಸುವುದನ್ನು ನಿಧಾನ ಮಾಡುತ್ತಾರೆ. ಹಾಗಾಗಿ, ಅಡಿಕೆ ಧಾರಣೆಯಲ್ಲಿ ಏರುಪೇರುಂಟಾಗುತ್ತದೆ. ನಾನು ಸರ್ಕಾರಕ್ಕೆ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುವುದೇನೆಂದರೆ, ಒಂದೆಡೆ ಸುಪ್ರೀಂ ಕೋರ್ಟ್ ಆದೇಶದಂತೆ ಗುಟ್ಕಾ ನಿಷೇಧಿಸಿದರೂ ಇವತ್ತು ಕರ್ನಾಟಕದಲ್ಲಿರುವ ಅಡಿಕೆ ಬೆಳೆಗಾರರ ಹಿತ ಕಾಪಾಡುವ ಕೆಲಸ ಸರ್ಕಾರ ಮಾಡುತ್ತದೆ ಎನ್ನುವ ಒಂದು ಹೇಳಿಕೆ ಕೊಡಬೇಕು. ಇದರ ಜೊತೆಗೆ, ಸುಮಾರು 12 ವರ್ಷಗಳಿಂದಿರುವ ಈ ಗುಟ್ಕಾ ಸಮಸ್ಯೆಯು ಪ್ರತಿ ವರ್ಷವೂ ಒಂದಲ್ಲ ರಾಜ್ಯದಲ್ಲಿ ನಿಷೇಧಕ್ಕೊಳಗಾಗುತ್ತಿತ್ತು. ಗುಟ್ಕಾ ಆ ರೀತಿ ನಿಷೇಧಗೊಂಡ ತಕ್ಷಣ ಮಾರುಕಟ್ಟೆಯಲ್ಲಿ ಅಡಿಕೆ ಧಾರಣೆ ಕುಸಿತಗೊಳ್ಳುತ್ತಿತ್ತು. ಅಡಿಕೆ ಧಾರಣೆ ಪುನಃ ಚೇತರಿಸಿಕೊಳ್ಳಲು 2--3 ವರ್ಷಗಳಷ್ಟು ಸಮಯ ತೆಗೆದುಕೊಳ್ಳುತ್ತದೆ. ಹಾಗಾಗಿ, ಅಡಿಕೆ ಬೆಳೆಗಾರರು ಚಿಂತಿಸುತ್ತಿರುವುದೇನೆಂದರೆ, ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಅಡಿಕೆ ಬೆಳೆಗಾರರ ಸೊಸೈಟಿ–ಸಂಘಟನೆಗಳಿದ್ದು, ಅಡಿಕೆ ಬೆಳೆಗಾರರು ಮತ್ತು ಚುನಾಯಿತ ಪ್ರತಿನಿಧಿಗಳನ್ನು ಒಂದೆಡೆ ಸೇರಿಸಿ ಸಭೆಯೊಂದನ್ನು ನಡೆಸಿ, ಉನ್ನತವಾದ ಸಮಿತಿಯೊಂದನ್ನು ರಚಿಸಿ, ಆ ಸಮಿತಿ ಮೂಲಕ ಅಡಿಕೆ ಬೆಳೆಗಾರರ ಸಮಸ್ಯೆಗಳನ್ನು ಸ್ಪಷ್ಟವಾಗಿ ತಿಳಿದುಕೊಂಡು ಮುಂದಿನ ದಿನಗಳಲ್ಲಿ ಅವರಿಗೆ ಸೂಕ್ತ ಸಲಹೆ ನೀಡುವುದಲ್ಲದೆ, ಅವರುಗಳ ಹಿತ ಕಾಪಾಡಿ ಅವರನ್ನು ರಕ್ಷಿಸುವ ಜವಾಬ್ದಾರಿಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೊರಬೇಕು. ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಬೇಕೆಂದು ನಾನು

ಒತ್ತಾಯಪಡಿಸಬಯಸುತ್ತೇನೆ. ಮತ್ತೊಮ್ಮೆ ಸನ್ಮಾನ್ಯ ಅಧ್ಯಕ್ಷರೆ ಮೂಲಕ ಸರ್ಕಾರದಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಅಡಿಕೆ ಬೆಳೆಗಾರರು ಯಾವುದೇ ರೀತಿಯ ಆತಂಕಕ್ಕೊಳಗಾಗದಂತೆ ಮುಖ್ಯಮಂತ್ರಿಗಳು ಹೇಳಿಕೆ ಕೊಡುವುದರ ಮೂಲಕ ಅವರಲ್ಲಿ ಧೈರ್ಯ ತುಂಬುವ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತಾ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ರಾಜಣ್ಣನವರೆ, ನೀವು ಅಡಿಕೆ ಬೆಳೆಗಾರರು ಹೌದು, ವ್ಯಾಪಾರಸ್ಥರೂ ಹೌದು. ಆದುದರಿಂದ, ಗುಟ್ಕಾ ನಿಷೇಧಿಸಿದ್ದರಿಂದ ಏನೇನು ಸಮಸ್ಯೆಗಳುಂಟಾಗಿವೆ? ಅಡಿಕೆಯನ್ನು ಯಾವ್ಯಾವ ಉದ್ದೇಶಗಳಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿದೆ ಎಂಬುದರ ಕುರಿತು ತಮ್ಮಲ್ಲಿ ಮಾಹಿತಿ ಇದ್ದಲ್ಲಿ, ಆ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಬೇಕು.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರು ಕೇಳಿರುವ ಪ್ರಶ್ನೆ ಸರಿಯಾಗಿದೆ. ಯಾರಿಗೂ ಈ ಕುರಿತಂತೆ ಸರಿಯಾದ ಮಾಹಿತಿ ಇಲ್ಲದಿರುವ ಸಂದರ್ಭದಲ್ಲಿ ರಾಜ್ಯದಲ್ಲಿ ಗುಟ್ಕಾ ನಿಷೇಧಿಸಿದ್ದು ಸರಿಯಲ್ಲ. ಆದುದರಿಂದ, ಈ ಕುರಿತು ಸರ್ಕಾರ ಸಮೀಕ್ಷೆಯನ್ನು ಕೈಗೊಳ್ಳಲೇಬೇಕು. ಸಮೀಕ್ಷೆ ಕೈಗೊಳ್ಳುವ ತನಕವಾದರೂ ಸರ್ಕಾರ ಗುಟ್ಕಾ ನಿಷೇಧ ಕುರಿತಂತೆ ಹೊರಡಿಸಿರುವ ಅಧಿಸೂಚನೆಯನ್ನು ವಾಪಸ್ ತೆಗೆದುಕೊಂಡು ಅಡಿಕೆಯನ್ನು ಯಾವ್ಯಾವ ಉದ್ದೇಶಗಳಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ಉಪಯೋಗಿಸಲಾಗುತ್ತಿದೆ ಎಂಬುದರ ಕುರಿತು ಅಂಕಿ–ಅಂಶಗಳ ಸಮೇತ ವಿವರಗಳನ್ನು ನೀಡಬೇಕು.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಗುಟ್ಕಾ ತಯಾರಿಸಲು ಕರ್ನಾಟಕ ರಾಜ್ಯದಲ್ಲಿ ಅಡಿಕೆಯನ್ನು ಎಷ್ಟು ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿದೆ ಎಂಬುದರ ಕುರಿತು ತಾವು ಹೇಳಬೇಕು.

ಶ್ರೀ ವಡ್ನಾಳ್ ರಾಜಣ್ಣ : ಇಡೀ ದೇಶದಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಅಡಿಕೆ ಬೆಳೆಯುವುದು ಕರ್ನಾಟಕ ರಾಜ್ಯದಲ್ಲಿ ಮಾತ್ರ, ಶೇಕಡ 60ರಷ್ಟು ಪ್ರಮಾಣದಲ್ಲಿ ಅಡಿಕೆಯನ್ನು ರಾಜ್ಯದಲ್ಲಿ ಬೆಳೆಯಲಾಗುತ್ತಿದೆ. ರಾಜ್ಯ ಹೊರತುಪಡಿಸಿದರೆ ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಅಡಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಆದರೆ, ರಾಜ್ಯದಲ್ಲಿ ಬೆಳೆಯುವ ಅಡಿಕೆಯಲ್ಲಿ ಶೇಕಡ 90ರಷ್ಟನ್ನು ಗುಟ್ಕಾ ತಯಾರಿಸುವ ಉದ್ದೇಶಕ್ಕೋಸ್ಕರವೇ ಉಪಯೋಗಿಸಲಾಗುತ್ತಿದೆ. ಅಡಿಕೆಯನ್ನು ಗುಟ್ಕಾ ವಿನಾ ಇನ್ನಿತರ ಉದ್ದೇಶಕ್ಕೋಸ್ಕರ ಉಪಯೋಗಿಸಲು ಸಾಧ್ಯವಿಲ್ಲ. ತೀರ್ಥಹಳ್ಳಿಯಲ್ಲಿ ಬೆಳೆಯುವ ಅಡಿಕೆ ಹೊರತುಪಡಿಸಿದರೆ, ಕರ್ನಾಟಕದ ಇತರೆ ಭಾಗಗಳಲ್ಲಿ

ಬೆಳೆಯುವ ಅಡಿಕೆ ಬೆಳೆ ಏನಿದೆ, ಅದನ್ನು ಸಂಪೂರ್ಣವಾಗಿ ಗುಟ್ಕಾ ಉದ್ದೇಶಕ್ಕೋಸ್ಕರವೇ ಉಪಯೋಗಿಸಿಕೊಳ್ಳಲಾಗುತ್ತಿದೆ. ಮುಂಚೆ ಅಡಿಕೆ ಮತ್ತು ಹೊಗೆಸೊಪ್ಪು ತಿನ್ನುತ್ತಿದ್ದರು. ಈಗ ಆ ಪದ್ಧತಿ ಹೋಗಿದೆ. ಪರಿಸ್ಥಿತಿ ಹೀಗಿರುವುದರಿಂದ, ಈಗ ಕರ್ನಾಟಕವೂ ಸೇರಿದಂತೆ ತಮಿಳುನಾಡು, ಆಂಧ್ರ ಪ್ರದೇಶದ ಕೆಲವು ಭಾಗಗಳು, ಕೇರಳ, ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲೂ ಅಡಿಕೆ ಬೆಳೆಯಲಾಗುತ್ತಿದೆ. ಎಲ್ಲಾ ರಾಜ್ಯಗಳ ಅಡಿಕೆಗಳೂ ಸಹ ಗುಟ್ಕಾ ಕಂಪನಿಗೆ ಮಾತ್ರವೇ ಹೋಗುತ್ತಿವೆ. ಅಲ್ಲಿ ಮಾತ್ರವೇ ಇದು ಖರ್ಚಾಗಲಿಕ್ಕೆ ಸಾಧ್ಯತೆ ಉಂಟು. ಇಲ್ಲದೆ ಇದ್ದರೆ ನಾವು ಒಂದು ಚೀಲ ಅಡಿಕೆಯನ್ನೂ ಸಹ ಖರ್ಚು ಮಾಡಲಿಕ್ಕೆ ಸಾಧ್ಯವಿಲ್ಲದಿರುವ ಪರಿಸ್ಥಿತಿ ಇದೆ. ಯಾವುದೇ ಸರ್ಕಾರ ಇರಬಹುದು, ನಾವೆಲ್ಲರೂ ಚಿಂತೆ ಮಾಡಬೇಕಾಗಿರುವುದು, ಚರ್ಚೆ ಮಾಡಬೇಕಾಗಿರುವುದು, ಅಡಿಕೆ ಬೆಳೆಗಾರರ ಹಿತದೃಷ್ಟಿಯಿಂದ ಗುಟ್ಕಾದಲ್ಲಿ ಯಾವ್ಯಾವುದು ಆರೋಗ್ಯಕ್ಕೆ ಹಾನಿಕರವಾದಂತಹ ಪದಾರ್ಥಗಳನ್ನು ಹಾಕುತ್ತಿದ್ದಾರೆ ಎನ್ನುವುದನ್ನು ಮೊದಲು ಪತ್ತೆ ಹಚ್ಚಬೇಕು. ಅದನ್ನು ಪತ್ತೆ ಹಚ್ಚಿ, ಆರೋಗ್ಯಕ್ಕೆ ಹಾನಿಕರವಾದಂತಹ ಪದಾರ್ಥಗಳನ್ನು ಕಿತ್ತು ನೀವು ಗುಟ್ಕಾವನ್ನು ಮಾಡಿ ಎನ್ನತಕ್ಕಂಥ directions ಅನ್ನು ಆ ಗುಟ್ಕಾ factory ಗಳಿಗೆ ನೀವು ಕೊಟ್ಟರೆ, ಮುಂದೆ ಅಡಿಕೆ ಬೆಳೆಗಾರರಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಎಸ್.ಪ್ರಕಾಶ್ :– ಮಾನ್ಯ ಅಧ್ಯಕ್ಷರೆ, ಅಭ್ಯಾಸ ಬೆಳೆಸುವುದು ಸುಲಭ, ತಿನ್ನುವ ಅಭ್ಯಾಸ ಬಿಡಿಸುವುದು ಬಹಳ ಕಷ್ಟ. ನೀವು ಅನುಭವಸ್ಥರಲ್ಲ, ಕೆಲವು ವಿಷಯಗಳು ನಿಮಗೆ ಅರ್ಥವಾಗುತ್ತದೆ, ಕೆಲವು ಅರ್ಥವಾಗುವುದಿಲ್ಲ. ನೀವು ಬರೀ ಗುಟ್ಕಾ ತಿನ್ನಿಸುತ್ತೀರಿ ಅಷ್ಟೆ. ತಿನ್ನುವುದನ್ನು ಏನು ಕಲಿತಿರುತ್ತಾರೋ, ಅದನ್ನು sudden ಆಗಿ ಬಿಡಿಸುವುದು ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಅಡಿಕೆ ಮಾರಾಟಕ್ಕೆ ಬರುತ್ತಿಲ್ಲ, ನೀವು ಗುಟ್ಕಾ ಹಾಕಬೇಡಿ ಎನ್ನುತ್ತೀರಿ. ಗುಟ್ಕಾ ಇಲ್ಲದ ಅಡಿಕೆ ನನಗೆ ಏಕೆ ಬೇಕು? ಗುಟ್ಕಾದಲ್ಲಿ ಟೇಸ್ಟ್ ಇರುವುದರಿಂದಲೇ ನಾನು ಅಡಿಕೆಯನ್ನು ತಿನ್ನುತ್ತಿದ್ದೇನೆ. spirit ಇಲ್ಲದೆ ಯಾರಾದರೂ alcohol ಅನ್ನು ಕುಡಿಯಿರಿ ಎಂದರೆ, ಅದನ್ನು ಕುಡಿಯುತ್ತಾರೆಯೇ? Spirit melt ಆಗಿ, ಅನಂತರ ದರ ನಿಗದಿಯಾಗಿ ಅದು alcohol ಆಗುತ್ತದೆ. ಆ spirit ಇಲ್ಲದೆಯೇ alcohol ಹೇಗೆ ಆಗುತ್ತದೆ? ಆ ರೀತಿಯಲ್ಲಿ ಗುಟ್ಕಾ ಇಲ್ಲದೆ ಅಡಿಕೆ ತಿನ್ನು ಎಂದರೆ ಅದನ್ನು ಹೇಗೆ ತಿನ್ನುವುದಕ್ಕಾಗುತ್ತದೆ? ಗುಟ್ಕಾ ತಿಂದರೆಯೇ ಆತನಿಗೆ ಸಮಾಧಾನವಾಗುತ್ತದೆ.

ಅಧ್ಯಕ್ಷರು :– ನಿಮಗೆ supportive ಆಗಿ ನಾನೊಂದು ಮಾತನ್ನು ಹೇಳುತ್ತಿದ್ದೇನೆ. ನಮ್ಮ ಶಿರಸಿಯಲ್ಲಿ ತೋಟಗಾರಿಕಾ ಸೊಸೈಟಿಯೊಂದು ಇದೆ. ಅಲ್ಲಿ ಅವರೊಂದು ರೀತಿಯ ಗುಟ್ಕಾವನ್ನು ತಯಾರು ಮಾಡುತ್ತಿದ್ದಾರೆ. ಹೌದಲ್ಲವೇ?

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ : ಅಲ್ಲಿ ಗುಟ್ಕಾ ತಯಾರಿಸುವುದಿಲ್ಲ.

ಅಧ್ಯಕ್ಷರು :– ಅದು ಗುಟ್ಕಾ ಅಲ್ಲ, ಅದಕ್ಕೆ ಬೇರೆ ಏನೋ ಹೆಸರು ಕೊಟ್ಟಿದ್ದಾರೆ. ಅದಕ್ಕೆ ಸಿಹಿ ಸುಪಾರಿ ಎಂದು ಹೆಸರು ಕೊಟ್ಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :– ಅದನ್ನು ಕ್ಯಾಂಪ್ಕೋದವರು ಮಾಡುತ್ತಿದ್ದಾರೆ.

ಅಧ್ಯಕ್ಷರು :– ಅವರಿಗೆ ಎಷ್ಟೊಂದು demand ಇದೆ ಎಂದರೆ, ನಮಗೆ ಅದನ್ನು supply ಮಾಡಲು ಆಗುತ್ತಿಲ್ಲವೆಂದು ಅವರು ಹೇಳುತ್ತಿದ್ದರು.

ಶ್ರೀ ಹೆಚ್.ಎಸ್.ಪ್ರಕಾಶ್ :– ಅದಕ್ಕೇ ಇವರಿಗೆ ಅನುಭವ ಇಲ್ಲವೆಂದು ನಾನು ಹೇಳುತ್ತಿದ್ದೇನೆ. ಗುಟ್ಕಾ ಹಾಕದಿದ್ದರೆ, ಯಾರೂ ಅಡಿಕೆಯನ್ನು ತಿನ್ನುವುದಿಲ್ಲ. ಅಡಿಕೆ ಪ್ಯಾಕೆಟ್ ಸಿಗುತ್ತದೆ, ಅದನ್ನು ಯಾರೂ ತಿನ್ನುವುದಿಲ್ಲ. ಗುಟ್ಕಾ mix ಆಗಿದ್ದರೆ ಮಾತ್ರ ಅದನ್ನು ತಿನ್ನುತ್ತಾರೆ. ಆದ್ದರಿಂದ, ಗುಟ್ಕಾ ಇಲ್ಲದೆ ಅಡಿಕೆ ತಿನ್ನು ಎಂದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ, ದಯಮಾಡಿ ಒಮ್ಮೆ ಅಭ್ಯಾಸ ಮಾಡಿಕೊಳ್ಳಿ. ಆಮೇಲೆ ನೀವು ವ್ಯಾಪಾರಗಾರರಿಗೆ ಥರ್ಟಿಯೋ, ಫಿಫ್ಟಿಯೋ, ಎಯ್ಟಿಯೋ ಎಂದು ಮಾಡಿ. ನಾವು ಹೇಳಿದ್ದು ಮಾನ್ಯ ಶಿವಲಿಂಗೇಗೌಡರಿಗೆ ಅರ್ಥವಾಗುತ್ತಿಲ್ಲ. ಅವರಿಗೆ 30 ಯಾವುದು, 50 ಯಾವುದು ಅಥವಾ 80 ಯಾವುದು ಎಂದು ಅರ್ಥವಾಗುತ್ತಿಲ್ಲ. ಅವರಿಗೆ 30.60 ಅಥವಾ 90 ಎಂದರೂ ಸಹ ಗೊತ್ತಿಲ್ಲ. ಅವರಿಗೆ alcohol ಎಂದರೂ ಗೊತ್ತಿಲ್ಲ, spirit ಎಂದರೂ ಗೊತ್ತಿಲ್ಲ, ಸುಮ್ಮನೆ ಭಾಷಣ ಮಾಡಲು ಬರುತ್ತಾರೆ. ಅದರಿಂದ ಪ್ರಯೋಜನವಿಲ್ಲ!

ಅಧ್ಯಕ್ಷರು :– ಈ ಕಡೆಯಿಂದ ಮಾನ್ಯ ಸದಸ್ಯರು ಯಾರಾದರೂ ಮಾತನಾಡುವವರು ಇದ್ದಾರೆಯೇ?

ಮಾನ್ಯ ಸದಸ್ಯರಿಂದ ಭಾಷಣವು ಪರಿಷ್ಕರಿಸಲ್ಪಟ್ಟಿದೆ.

ಶ್ರೀ ವೈ.ಎನ್.ರುದ್ರೇಶ್ ಗೌಡ (ಬೇಲೂರು) :– ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುತ್ತೇನೆ. ನಮಗೆ ಗೊತ್ತಿರುವ ಹಾಗೆ ಅಡಿಕೆಯನ್ನು ಬೆಳೆಯುವವರ ಸಂಖ್ಯೆ ಜಾಸ್ತಿಯಾಗಿದೆ. ಬೆಳೆಗಾರರು ಮೊದಲು ಈ ಪ್ರಮಾಣದಲ್ಲಿ ಇರಲಿಲ್ಲ. ಈಗ ಎಲ್ಲಾ ಕಡೆಯಲ್ಲಿ, ಎಲ್ಲಾ ಜಿಲ್ಲೆಗಳಲ್ಲೂ ಸಹ ಅಡಿಕೆಯನ್ನು ಬೆಳೆಯುತ್ತಿದ್ದಾರೆ. ಕಾರಣ ಏಕೆಂದರೆ, ಅಡಿಕೆಗೆ ಒಳ್ಳೆಯ rate ಇದೆ ಎನ್ನುವ

ದೃಷ್ಟಿಯಿಂದ, ಅದು ಲಾಭದಾಯಕ ಎನ್ನುವ ದೃಷ್ಟಿಯಿಂದ ಅಡಿಕೆಯನ್ನು ಎಲ್ಲರೂ ಸಹ ಬೆಳೆಯುತ್ತಿದ್ದಾರೆ. – ಮಲೆನಾಡು ಪ್ರದೇಶದಲ್ಲೂ ಸಹ ಅಡಿಕೆಯನ್ನು ಬೆಳೆಯುತ್ತಿದ್ದಾರೆ. ಅಡಿಕೆ ಲಾಭದಾಯಕ ಎನ್ನುವ ಏಕೈಕ ಉದ್ದೇಶದಿಂದಲೇ ಎಲ್ಲರೂ ಅದನ್ನು ಬೆಳೆಯುತ್ತಿದ್ದಾರೆ. ಹಾಗಾಗಿ ಈ ಗುಟ್ಕಾ ನಿಷೇಧದಿಂದ ಬೆಳೆಗಾರರಿಗೆ ತೊಂದರೆಯಾಗಿರುತ್ತದೆ. ಆದ್ದರಿಂದ, ಬೆಳೆಗಾರರನ್ನು ಉಳಿಸತಕ್ಕಂಥ ಕೆಲಸ ನಮ್ಮಿಂದ ಆಗಬೇಕು. ಬೆಳೆಗಾರರಿಗೆ ರಕ್ಷಣೆಯನ್ನು ಕೊಟ್ಟು, ಗುಟ್ಕಾವನ್ನು ನಿಷೇಧ ಮಾಡಬೇಕೇ ಹೊರತು ಬೆಳೆಗಾರರನ್ನು ಇಕ್ಕಟ್ಟಿಗೆ ಸಿಕ್ಕಿ ಹಾಕಿಸುವುದು ಬೇಡ. ಕಾರಣವೇನೆಂದರೆ, ಬೆಳೆಗಾರರು 14 ವರ್ಷ ಕಾದಿರುತ್ತಾರೆ. Correct ಆಗಿ ಅಡಿಕೆ ಬರಲು ಹತ್ತು ವರ್ಷಗಳ ಕಾಲ ನಾವು ಕಾಯಬೇಕಾಗುತ್ತದೆ. 10 ವರ್ಷಗಳ ಕಾಲ ಕಾದು ಅಡಿಕೆಯನ್ನು ತೆಗೆಯಬೇಕಾಗುತ್ತದೆ. ಕರ್ನಾಟಕದಲ್ಲಿ ನನಗೆ ಗೊತ್ತಿರುವ ಹಾಗೆ, 17--18 ಜಿಲ್ಲೆಗಳಲ್ಲಿ ಅಡಿಕೆಯನ್ನು ಬೆಳೆಯುತ್ತಿದ್ದಾರೆ. ಅಡಿಕೆ ರೈತರಿಗೆ ಒಳ್ಳೆಯ ಲಾಭದಾಯಕ ಬೆಳೆಯಾಗಿದೆ. ಗುಟ್ಕಾ ನಿಷೇಧಿಸಿದಲ್ಲಿ ರೈತರು ನಷ್ಟಕ್ಕೆ ಒಳಗಾಗುತ್ತಾರೆ, ತೊಂದರೆಗೆ ಒಳಗಾಗುತ್ತಾರೆ. ಹಾಗಾಗಿ ಅದನ್ನು ಬೇರೆ ರೀತಿಯಲ್ಲಿ ಮಾಡಬೇಕು. ಗುಟ್ಕಾವನ್ನು ನಿಷೇಧ ಮಾಡಿದರೂ ಸಹ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕೇ ಹೊರತು ರೈತರನ್ನು ಸಂಕಷ್ಟಕ್ಕೆ ಸಿಕ್ಕಿ ಹಾಕಿಸುವುದು ಬೇಡ ಎನ್ನುವುದೇ ನಮ್ಮ ಉದ್ದೇಶವಾಗಿದೆ. ರೈತರನ್ನು ರಕ್ಷಣೆ ಮಾಡಿಕೊಂಡು, ಕ್ರಮವನ್ನು ಮುಂದುವರೆಸಲಿ ಎನ್ನುವುದೇ ನಮ್ಮ ಅಂಶ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಸ್ವಲ್ಪ ರೀತಿಯಲ್ಲಿ ಬದಲಿಸಬೇಕು. ಏಕೆಂದರೆ ಬೆಳೆಗಾರರನ್ನು ರಕ್ಷಣೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ನಮ್ಮ manifesto ದಲ್ಲಿ ಬೆಳೆಗಾರರನ್ನು ರಕ್ಷಣೆ ಮಾಡುತ್ತೇವೆ ಎಂಬ ಉದ್ದೇಶವನ್ನು ಹೇಳಿದ್ದೇವೆ. ಗುಟ್ಕಾ ನಿಷೇಧವನ್ನು ಮಾಡಿದ್ದರೂ ಸಹ ಬೆಳೆಗಾರರಿಗೆ ತೊಂದರೆಯಾಗದ ರೀತಿಯಲ್ಲಿ, ಬೆಳೆಗಾರರಿಗೆ ಯಾವ ರೀತಿಯಲ್ಲಿ ರಕ್ಷಣೆಯನ್ನು ಮಾಡಬೇಕು ಎನ್ನುವ ಅಂಶವನ್ನೂ ಸಹ ಇದರಲ್ಲಿ ಹೇಳಬೇಕಾಗುತ್ತದೆ. ಈ ವಿಚಾರವನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ (ಯಲ್ಲಾಪುರ) :– ಮಾನ್ಯ ಅಧ್ಯಕ್ಷರೆ, ಗುಟ್ಕಾ ನಿಷೇಧ ಮಾಡಿದ ಮೇಲೆ ನಮ್ಮ ಇಡೀ ಜಿಲ್ಲೆಯೊಳಗೆ ಹಾಗೂ ರಾಜ್ಯದಲ್ಲಿ ಅಡಿಕೆ ಬೆಳೆಗಾರರಿಗೆ ತುಂಬಾ ತೊಂದರೆಯಾಗಿದೆ. ಆ

ತೊಂದರೆಯನ್ನು ನಿವಾರಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ನಾನು ಮತ್ತು ಮಾನ್ಯ ರಾಜಣ್ಣನವರೂ ಕೂಡ ಪಕ್ಷದ ಶಾಸಕಾಂಗ ಸಭೆಯಲ್ಲಿ ಒತ್ತಾಯ ಮಾಡಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳೂ ಕೂಡ ಆ ವಿಚಾರವನ್ನು ಒಪ್ಪಿಕೊಂಡಿದ್ದಾರೆ. ಇವತ್ತು ಸುಪ್ರೀಂ ಕೋರ್ಟ್‌ನ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರ ತೆಗೆದುಕೊಂಡಿರತಕ್ಕ ನಿರ್ಣಯದಿಂದಾಗಿ ರೈತರು ತುಂಬಾ ತೊಂದರೆಗೆ ಒಳಗಾಗಿದ್ದಾರೆ. ಸನ್ಮಾನ್ಯ ಕಾಗೇರಿಯವರು ಮಾತನಾಡುವಾಗ ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಆಸಾಮಿ ಖಾತೆ ಸಾಲ 300 ಕೋಟಿ ರೂ.ಗಳಿಗಿಂತಲೂ ಹೆಚ್ಚು ನಮ್ಮ ಜಿಲ್ಲೆಯಲ್ಲಿದೆ. ಈ ಒಂದು ಘಟನೆಯ ಆಧಾರದ ಮೇಲೆ, ರೈತರಿಗೆ ಮತ್ತೊಂದು ಪೆಟ್ಟು ಬೀಳುತ್ತದೆ. ಕಳೆದ ಸರ್ಕಾರದಲ್ಲಿ ಮಾನ್ಯ ಕಾಗೇರಿಯವರು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ, ನಮ್ಮ ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಿಂದ ಅವರಿಗೆ ತುಂಬಾ ವಿನಂತಿಯನ್ನು ಮಾಡಿಕೊಂಡಿದ್ದೆವು. ಏನಾದರೂ ಮಾಡಿ ಒಂದೂವರೆ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಬೇಕು. ಇಲ್ಲವಾದರೆ ಆ ಸಾಲವನ್ನು ಕೃಷಿ ಸಾಲವನ್ನಾಗಿ ಪರಿವರ್ತನೆಯನ್ನಾಗಿ ಮಾಡಿಕೊಡಬೇಕೆಂದು ಕೇಳಿದ್ದೆವು. ಆ ಹಿನ್ನೆಲೆಯಲ್ಲಿ ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಅಡಿಕೆ ಬೆಳೆಗಾರರ ಸಮಸ್ಯೆಗೆ, ಗುಟ್ಕಾ ನಿಷೇಧದಿಂದ ಆಗತಕ್ಕಂಥ ಪರಿಣಾಮಗಳ ಹಿನ್ನೆಲೆಯಲ್ಲಿ, ಎಲ್ಲಾ ಬೆಳೆಗಾರ ಸಂಸ್ಥೆಗಳವರನ್ನು ಕರೆದು, ಪರ್ಯಾಯವಾಗಿ ರೈತರಿಗೆ ಸಹಕಾರಿ ಆಗತಕ್ಕಂಥ, ಸಾಲದ ಬಿಕ್ಕಟ್ಟಿನಿಂದ ಹೊರಬರತಕ್ಕಂಥ ಇನ್ನೂ ಅನೇಕ ಹೊಸ ಹೊಸ ಯೋಜನೆಗಳನ್ನು ಕೊಟ್ಟು, ರೈತರನ್ನು ಬದುಕಿಸಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು :– ಮಾನ್ಯ ಸದಸ್ಯರೆ, ಈಗ ತಾವು ಮಾತನಾಡಿದ ಸೀಟು ತಮ್ಮದಲ್ಲ. ಯಾವಾಗಲೂ ತಾವು ತಮ್ಮ ಸೀಟಿನಿಂದಲೇ ಮಾತನಾಡಬೇಕು. ಇನ್ನೊಮ್ಮೆ ಈ ರೀತಿ ತಪ್ಪು ಮಾಡಬೇಡಿ.

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ :– ಮೊದಲ ಬಾರಿ ಗೊತ್ತಾಗಲಿಲ್ಲ.

ಶ್ರೀ ಜಿ.ಟಿ.ದೇವೇಗೌಡ (ಚಾಮುಂಡೇಶ್ವರಿ) :– ಮಾನ್ಯ ಅಧ್ಯಕ್ಷರೆ, ಗುಟ್ಕಾ ನಿಷೇಧದ ಬಗ್ಗೆ...

ಅಧ್ಯಕ್ಷರು :– ಒಂದು ನಿಮಿಷ, ತಾವು ಕುಳಿತುಕೊಳ್ಳಿ. ಹಿಂದೆ ಕುಳಿತಿರುವ ಮಾನ್ಯ ಸದಸ್ಯರೊಬ್ಬರು ಮಾತನಾಡಲು ಬಯಸಿದ್ದಾರೆ. ಮೊದಲು ಅವರು ಮಾತನಾಡಲಿ. ಹಿಂದೆ ಕುಳಿತಿರುವವರಿಗೆ ಮೊದಲು ಅವಕಾಶ ಸಿಗಲಿ.

ಶ್ರೀ ಪಿ.ಆರ್.ಸುಧಾಕರಲಾಲ್ (ಕೊರಟಗೆರೆ) :- ಸನ್ಮಾನ್ಯ ಅಧ್ಯಕ್ಷರೆ, ತಾವು ಇವತ್ತು ಮೊದಲನೇ ಬಾರಿಗೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ರೈತರ ಸಮಸ್ಯೆ ಬಗ್ಗೆ ಮಾತನಾಡಲಿಕ್ಕೆ ನನಗೆ ಅವಕಾಶ ಸಿಕ್ಕಿರುವುದು ನನ್ನ ಸುದೈವವೆಂದು ಹೇಳುತ್ತೇನೆ. ಸುಮಾರು 16-17 ಜಿಲ್ಲೆಗಳಲ್ಲಿ ಇವತ್ತು ರೈತರು ಅಡಿಕೆಯನ್ನು ಬೆಳೆಯುತ್ತಿದ್ದಾರೆ. ಸುಮಾರು 8-10 ವರ್ಷಗಳ ಕಾಲ ಅಡಿಕೆ ಬೆಳೆಯನ್ನು ತೆಗೆಯಬೇಕು ಎನ್ನುವಂತಹ ನಿಟ್ಟಿನಲ್ಲಿ ಇವತ್ತು ಸಾಲವನ್ನು ಮಾಡಿ, ಬಹಳ ಸಂಕಷ್ಟದಿಂದ ಇವತ್ತೇನು ರೈತ ಬೆಳೆಯನ್ನು ಬೆಳೆಯಲಿಕ್ಕೆ ಹೊರಟಿದ್ದಾರೆ, ಈ ಸಂದರ್ಭದಲ್ಲಿ ನಾನಾದರೂ ಕೂಡ ಈ ಸಭೆಯ ಮುಖಾಂತರವಾಗಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನಮ್ಮ ರೈತರೇನಿದ್ದಾರೆ, ಅವರು ಅಡಿಕೆ ಬೆಳೆಯನ್ನು ಬೆಳೆಯುತ್ತಿದ್ದಾರೆ, ಅವರ ಪರವಾಗಿ ಕೇಂದ್ರದಲ್ಲಿ ಇರತಕ್ಕ ಕಾಂಗ್ರೆಸ್ ಸರ್ಕಾರ ಗೋರಖ್‌ಸಿಂಗ್ ವರದಿಯನ್ನು ಏನು ತಯಾರು ಮಾಡಿದೆ, ಆ ಒಂದು ವರದಿಯನ್ನು ಯಥಾವತ್ತಾಗಿ ಜಾರಿ ಮಾಡತಕ್ಕ ಅವಶ್ಯಕತೆ ಇವತ್ತು ಇದೆ ಎಂದು ನಾನಾದರೂ ಕೂಡ ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇವತ್ತು ಆ ಗೋರಖ್‌ಸಿಂಗ್ ವರದಿಯನ್ನು ಏಕೆ ಅನುಷ್ಠಾನಗೊಳಿಸಿಲ್ಲ ಎಂದು ಇವತ್ತು ಹೈಕೋರ್ಟ್ ಕೂಡ ಸರ್ಕಾರವನ್ನು ಕೇಳಿದೆ ಎನ್ನತಕ್ಕಂಥ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಉಲ್ಲೇಖಿಸಲಿಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಇವತ್ತು ಎರಡು ವಿಚಾರಗಳನ್ನು ನಾವು ಆಲೋಚನೆ ಮಾಡಬೇಕಾಗಿದೆ. ಆರೋಗ್ಯದ ದೃಷ್ಟಿಯಿಂದ ನಾವೇನಾದರೂ ಗುಟ್ಕಾವನ್ನು ನಿಷೇಧ ಮಾಡುತ್ತೇವೆ ಎನ್ನುವಂತಹ ನಿರ್ಣಯವನ್ನೇನಾದರೂ ಕೈಗೊಂಡಿದ್ದರೆ, ಬಹುಶಃ ಗುಟ್ಕಾವೊಂದರಿಂದಲೇ ನಮ್ಮ ಜನರ ಆರೋಗ್ಯ ಕೆಡುತ್ತಿಲ್ಲ. ಬೀಡಿಯಿಂದ ಆರೋಗ್ಯ ಕೆಡುತ್ತಿದೆ, ಸಿಗರೇಟಿಂದ ಆರೋಗ್ಯ ಕೆಡುತ್ತಿದೆ. ಇವತ್ತು ಕಿದ್ವಾಯ್ ಹಾಸ್ಪಿಟಲ್‌ಗೆ ಹೋದರೆ ಬಹಳಷ್ಟು ಜನ lung cancer ಮತ್ತು ಗಂಟಲಿನ ಕ್ಯಾನ್ಸರ್‌ನಿಂದ ಬಳಲುತ್ತಿರುವುದನ್ನು ನಾವು ನೋಡಬಹುದು. ಅದೇ ರೀತಿ ಮದ್ಯಪಾನದಿಂದ ಕೂಡ ಜನರ ಆರೋಗ್ಯದ ಜೊತೆಗೆ, ಅವರ ಸಂಬಂಧಗಳು, ಅವರ ಸ್ವಾಸ್ಥ್ಯ, ಅವರ ಮನೆಯ ವಾತಾವರಣ ಕೂಡ ಕಲುಷಿತವಾಗಿರತಕ್ಕದ್ದನ್ನು ನಾವು ನೋಡುತ್ತಿದ್ದೇವೆ. ಇವತ್ತು ಮೂರು ಜಿಲ್ಲೆಗಳಲ್ಲಿರುವ ರೈತರಿಗೆ ಸಂಬಂಧಪಟ್ಟಂತೆ ಉಲ್ಲೇಖ ಮಾಡಿ ಗೋರಖ್‌ಸಿಂಗ್ ವರದಿಯನ್ನು ಕೊಡಲಾಗಿದೆ. ಅದನ್ನು ಇವತ್ತು 16-17 ಜಿಲ್ಲೆಗಳಲ್ಲಿ ನಾವೇನು ಅಡಿಕೆಯನ್ನು ಬೆಳೆಯುತ್ತಿದ್ದೇವೆಯೋ, ಅವರ ಪರವಾಗಿ ಕೂಡ ಆ ವರದಿಯನ್ನು ಅನುಷ್ಠಾನಗೊಳಿಸಬೇಕೆಂದು ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ರೈತರು ನಮ್ಮ ಜೀವನಾಡಿ

ಎಂದು ಇವತ್ತು ಇಡೀ ರಾಷ್ಟ್ರ ಏನು ಹೇಳುತ್ತಿದೆ, ಅವರ ಪರವಾಗಿ ನಿಲ್ಲುವಂಥ ಕೆಲಸವನ್ನು ಇವತ್ತು ಸರ್ಕಾರ ಮಾಡುತ್ತದೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ಟಿ.ದೇವೇಗೌಡ : (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರೆ, ಅಡಿಕೆ ಬೆಳೆ ರೈತರ ಬಗ್ಗೆ ಬಹಳಷ್ಟು ಕಾಳಜಿಯನ್ನು ವಹಿಸಿ ಬಹಳ ಸುದೀರ್ಘವಾಗಿ ಚರ್ಚೆ ನಡೆಯುತ್ತಿದೆ. ಗುಟ್ಕಾ ನಿಷೇಧದ ಬಗ್ಗೆ ಬಹಳಷ್ಟು ಚರ್ಚೆಯನ್ನು ಏನು ಮಾಡುತ್ತಿದ್ದೇವೆ, ಈಗಾಗಲೇ ಸರ್ಕಾರ ಘೋಷಣೆ ಮಾಡಿದೆ. ರೈತರ ಕಷ್ಟ ತಮಗೆ ಗೊತ್ತಿದೆ, ನಾನು ಕೂಡ ಅಡಿಕೆ-ತೆಂಗನ್ನು ಬೆಳೆದಿದ್ದೇನೆ, ಈಗಾಗಲೇ ಒಂದು ಸಾವಿರ ಅಡಿಕೆ ಗಿಡವನ್ನು ತರಿಸಿ ಹಾಕಿದ್ದೇವೆ, ಅಡಿಕೆಗೆ ಹಳದಿ ರೋಗ ಬಂದಿದೆ. ಹಳದಿ ರೋಗದಿಂದ ಅಡಿಕೆ ಇಳುವರಿ ಕಡಿಮೆಯಾಗಿದೆ, ಅಡಿಕೆ ಬೆಳೆಗೆ ಎಲ್ಲಾ ಕಡೆ ಹಳದಿ ರೋಗ, ತೆಂಗಿನ ಬೆಳೆಗೆ ನುಸಿ ರೋಗ ಬಂದು ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ನಮ್ಮೆಲ್ಲರ ಅಭಿಪ್ರಾಯವೇನೆಂದರೆ, ಒಂದು ಕಡೆ ಗುಟ್ಕಾ ನಿಷೇಧ ಮಾಡಿದ್ದಾರೆ, ಮತ್ತೊಂದು ಕಡೆ ಬೆಳೆಯುವ ಅಡಿಕೆಗೆ ಇಳುವರಿ ಕಡಿಮೆಯಾಗಿರುವ ಈ ಸಂದರ್ಭದಲ್ಲಿ ಸರ್ಕಾರ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು. ಮತ್ತೊಂದು, ತೋಟಗಾರಿಕೆ ಬೆಳೆ ಬೆಳೆಯುವಲ್ಲಿ, ತೋಟಗಾರಿಕೆ ಇಲಾಖೆ scientific ಆಗಿ ಅವರಿಗೆ ಸಹಾಯ ಮಾಡುತ್ತಿಲ್ಲ. ಎಲ್ಲಿ ಹಳದಿ ರೋಗ ಬಂದಿದೆ, ಆ ರೈತರ ಸಾಲ ಮನ್ನಾ ಮಾಡುವುದು. ಬೇರೆ ಬೇರೆ ಯಾವ್ಯಾವುದೋ ಸಾಲ ಮನ್ನಾ ಮಾಡುತ್ತೇವೆ, ರೈತ ಇಷ್ಟು ವರ್ಷ ಬೆಳೆ ಬೆಳೆದಿದ್ದಾನೆ, ಅದರ ಕೆಳಗಡೆ ಯಾವ ಬೆಳೆಯನ್ನೂ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಅಡಿಕೆ ಬೆಳೆಗೆ ಸಂಪೂರ್ಣ ಹಳದಿ ರೋಗ ಬಂದಿರುವ ರೈತರ ಸಾಲ ಮನ್ನಾ ಮಾಡುವುದು, ಆ ಬೆಳೆಗಾರನನ್ನು ಉಳಿಸುವುದಕ್ಕೆ, ಆ ಸಸ್ಯ ಸಂರಕ್ಷಣೆ ಮಾಡುವುದಕ್ಕೆ, ಗೊಬ್ಬರ ಔಷಧಿಗಳನ್ನು ಸಬ್ಸಿಡಿ ದರದಲ್ಲಿ ಅವರಿಗೆ ಕೊಟ್ಟು ನೆರವಾಗದೆ ಹೋದರೆ ತೋಟಗಾರಿಕೆ ಇಲಾಖೆಯೇ ಉಳಿಯುವುದಿಲ್ಲ. ತೆಂಗಿನ ಮರಗಳೂ ಕೂಡ ನಿಷ್ಪ್ರಯೋಜಕ, ಎಲ್ಲಾ ನುಸಿ ರೋಗ ಬಂದಿದೆ. ನೀವು ಎಲ್ಲಿಯವರೆಗೆ ನೋಡಿ, ತೆಂಗಿನ ಮರವನ್ನು ತರಿಯುತ್ತಿದ್ದಾರೆ, ಅಡಿಕೆ ಮರವನ್ನು ತರಿಯುತ್ತಿದ್ದಾರೆ. ಅಡಿಕೆ-ತೆಂಗು ಬೆಳೆಗಾರರು ಕಷ್ಟದಿಂದ ಬಹಳಷ್ಟು ಆತಂಕಕ್ಕೆ ಈಡಾಗಿದ್ದಾರೆ. ಆದುದರಿಂದ ಸರ್ಕಾರ ಕೂಡಲೆ ಸಬ್ಸಿಡಿ ಮೂಲಕ ಗೊಬ್ಬರ, ಬಿತ್ತನೆ ಬೀಜ, ಸಸ್ಯ ಸಂರಕ್ಷಣೆ ಮಾಡುವ ಔಷಧಿಗಳನ್ನು ಆ ತೋಟಗಾರಿಕೆ ಇಲಾಖೆಗೆ ಹೆಚ್ಚು ಹಣ ಕೊಡುವುದರ ಮೂಲಕ ತೋಟಗಾರಿಕೆಯನ್ನು ಉಳಿಸಬೇಕು. ಅಡಿಕೆ ಬೆಳೆದಿರುವ ಬೆಳೆಗಾರರಿಗೆ ಬೆಂಬಲ ಬೆಲೆಯನ್ನು

ಘೋಷಣೆ ಮಾಡಬೇಕೆಂದು ಹೇಳುತ್ತೇನೆ. ಮುಖ್ಯಮಂತ್ರಿಗಳದ್ದು ಕೂಡ ತೋಟವಿದೆ, ಅದರ ಅನುಭವವಿದೆ, ಅವರು ಕೂಡಲೆ ಈ ಬಗ್ಗೆ ನಿರ್ಧಾರವನ್ನು ಕೈಗೊಂಡು ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಮನವಿ ಮಾಡುತ್ತೇನೆ.

ಶ್ರೀ ವೈ.ಎಸ್.ವಿ.ದತ್ತ (ಕಡೂರು) : ಮಾನ್ಯ ಅಧ್ಯಕ್ಷರೆ, ತೆಂಗು-ಅಡಿಕೆ ತೋಟಗಾರಿಕೆ ಬೆಳೆಯ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ನಾನು ಚಿಕ್ಕಮಗಳೂರು ಜಿಲ್ಲೆಯವನು, ಆದರೆ ಬರುವುದು ಬಯಲು ಸೀಮೆಯಲ್ಲಿ. ಹಾಗಾಗಿ ಅಡಿಕೆ ಮತ್ತು ತೆಂಗಿನ ಬೆಳೆಯ ಹೆಚ್ಚು ತಾಪತ್ರಯಕ್ಕೆ ಒಳಗಾಗಿರುವವರಲ್ಲಿ ನನ್ನ ಜಿಲ್ಲೆಯವರು ತೆಂಗು ಬೆಳೆಗಾರರು. ಆದರೆ ಅಡಿಕೆ ಬೆಳೆಗಾರರೂ ಇದ್ದಾರೆ. ಆದರೆ ಅಡಿಕೆದು- ಸಾರ್ವತ್ರಿಕವಾಗಿರುವ ಒಂದು ಸಮಸ್ಯೆ, ಬರಿ ಮಲೆನಾಡು ಎಂದಲ್ಲ, ಈಗ ಎಲ್ಲಾ ಕಡೆಗಳಲ್ಲೂ ಇದೊಂದು ದೊಡ್ಡ ಸಮಸ್ಯೆಯಾಗಿದೆ. ಗುಟ್ಕಾ ನಿಷೇಧ ಮಾಡಿರುವ ಸರ್ಕಾರದ ತೀರ್ಮಾನ ಒಂದು ಸಮರ್ಥನೀಯ. ನಾನು ಅದರ ಬಗ್ಗೆ, ಸರ್ಕಾರಕ್ಕೆ ಏನೋ ದುರುದ್ದೇಶವಿದೆ, ಬೇಕೆಂದು ದಿಢೀರ್ಮಾಡಿದರು, ಅವಸರದ ತೀರ್ಮಾನವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. 20 ರಾಜ್ಯಗಳಲ್ಲಾಗಿತ್ತು, ಸುಪ್ರೀಂ ಕೋರ್ಟಿನ ಡೈರೆಕ್ಷನ್ ಇತ್ತು, ತೀರ್ಪಿತ್ತು, ಇವತ್ತಲ್ಲ ನಾಳೆ ಆ ಜಾಗಕ್ಕೆ ಯಾರಾದರು ಬಂದಿದ್ದರೂ ಅದನ್ನು ಮಾಡಬೇಕಾಗಿತ್ತು ಹಾಗಾಗಿ ನಾವು ಈ ಕೆಲಸವನ್ನು ಮಾಡಿದ್ದೇವೆಂದು ಸರ್ಕಾರ ಹೇಳಿ ಕೈ ತೊಳೆದುಕೊಳ್ಳಬಹುದು. ಆದರೆ ಪ್ರಶ್ನೆ, ಬರೀ ಸರ್ಕಾರ ಗುಟ್ಕಾ ನಿಷೇಧ ಮಾಡಿದಾಕ್ಷಣವೇ ಸರ್ಕಾರ ಕೈ ತೊಳೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೆ ಜವಾಬ್ದಾರಿನೂ ಇದೆ, ಬೆಳೆಗಾರರ ರಕ್ಷಣೆ ಕೂಡ ಸರ್ಕಾರ ಜವಾಬ್ದಾರಿಯಾಗಿದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ಇವತ್ತು ಕಾಂಗ್ರೆಸಿನ ಅನೇಕ ಜನ ಶಾಸಕರು ಕುಳಿತಿದ್ದಾರೆ, ಅಡಿಕೆ ಬೆಳೆ ಬೆಳೆಯುವಂಥ ಜಿಲ್ಲೆಗಳಿಂದ ಬಂದಂಥ ಶಾಸಕರಿದ್ದಾರೆ, particularly, ಶಿವಮೊಗ್ಗ, ಉತ್ತರ ಕನ್ನಡ ಮತ್ತು ಚಿಕ್ಕಮಗಳೂರಿನ ಮಲೆನಾಡಿನ ಅಡಿಕೆ ಬೆಳೆಗಾರರು ಯಾರಿದ್ದಾರೆ ಅವರು ಒಂದು ದೊಡ್ಡ ಸಮಾವೇಶ ಮಾಡಿದರು. ಆರ್.ವಿ.ದೇಶಪಾಂಡೆಯವರು ಇದ್ದಿದ್ದರೆ ಚೆನ್ನಾಗಿತ್ತು, ಆದರೆ ಯಲ್ಲಾಪುರ ಕ್ಷೇತ್ರದಿಂದ ಬಂದಿರುವ ಕಾಂಗ್ರೆಸ್ ಶಾಸಕರಾದ ಹೆಬ್ಬಾರ್ ಅವರಿದ್ದಾರೆ, ಈ ಕಡೆ ವಿಶ್ವೇಶ್ವರ ಹೆಗಡೆ ಕಾಗೇರಿಯವರಿದ್ದಾರೆ, ಆ ಕಡೆ ಬಿ.ಎಲ್.ಶಂಕರ್ ಅವರು ಈ ಸಾರಿ ಸದನಕ್ಕೆ ಬಂದಿಲ್ಲ. ಆದರೆ, ನನಗೆ ಜ್ಞಾಪಕವಿದೆ, ಅಡಿಕೆ ಬೆಳೆಗಾರರ ಸಮಸ್ಯೆಗೆ ಸರ್ವಪಕ್ಷ ದೊಡ್ಡ ಸಮಾವೇಶ ಸಿರ್ಸಿಯಲ್ಲಿ ಏರ್ಪಾಟಾಗಿತ್ತು. ನಾನು ಕಂಡಿರುವ ಹಾಗೆ ಇತ್ತೀಚಿನ ದಿವಸಗಳಲ್ಲಿ

ನಡೆದಂಥ ರೈತರ, ಬೆಳೆಗಾರರ ಅತ್ಯಂತ ದೊಡ್ಡ ಸಮಾವೇಶ ಅದಾಗಿತ್ತು, ಪುಟ್ಟಣ್ಣಯ್ಯನವರು ಆ ಸಮಾವೇಶಕ್ಕೆ ಬಂದಿದ್ದರು, ನಮ್ಮ ಪಕ್ಷದ ಪ್ರತಿನಿಧಿಯಾಗಿ ನಾನು ಹೋಗಿದ್ದೆ. ಆಗ ಕಾಂಗ್ರೆಸಿನ ಶಾಸಕರು ಸೇರಿದಂತೆ ಭಾಗವಹಿಸಿದಂಥ ಎಲ್ಲರು ಒಂದೇ ಧ್ವನಿನಲ್ಲಿ ಈ ಗುಟ್ಕಾ ನಿಷೇಧಕ್ಕೆ ಮುಂಚೆ, ಅಡಿಕೆ ಬೆಳೆಗಾರರಿಗೆ ಪರ್ಯಾಯ ಕ್ರಮಗಳನ್ನು ಸರ್ಕಾರ ಮಾಡಿಕೊಟ್ಟು, ಅವರಿಗೆ ಭದ್ರತೆ ಒದಗಿಸಿಕೊಟ್ಟು, ಆಮೇಲಷ್ಟೆ ಮಾಡುತ್ತೇವೆ, ಕೇಂದ್ರ ಸರ್ಕಾರ ನಮ್ಮದಿದೆ, ಅದನ್ನು ಮನವೊಲಿಸಿಕೊಡುತ್ತೇವೆಂದು ಹೇಳಿದರು. ಹಾಗಾಗಿ ನಾನು ಹೇಳುವುದೇನೆಂದರೆ, point No.1, ಮೊದಲನೆಯದಾಗಿ ಗುಟ್ಕಾವನ್ನು ಅಡಿಕೆ ಎಂದು ನಿಷೇಧ ಮಾಡುತ್ತಿದ್ದೀರೋ, ಗುಟ್ಕಾ ಒಳಗಡೆ ಇರುವ ingredients ಹಾನಿಕಾರಕವೆಂದು ನಿಷೇಧ ಮಾಡುತ್ತಿದ್ದೀರೋ ಎನ್ನುವುದು ಸ್ಪಷ್ಟವಾಗಬೇಕು. ಇವತ್ತಿನವರೆಗೆ ನಾವು ಹುತ್ತವನ್ನು ಬಡಿಯುತ್ತಿದ್ದೇವೆ, ಹುತ್ತದಲ್ಲಿರುವ ಹಾವನ್ನು ಬಡಿಯುತ್ತಿಲ್ಲ. ಹಾಗಾಗಿ ಗುಟ್ಕಾದಲ್ಲಿರುವ ingredients ಬಗ್ಗೆ ಮೊದಲು ವರದಿಯನ್ನು ತೆಗೆದುಕೊಳ್ಳುವುದನ್ನು ನಾವು ಮಾಡಬೇಕಾಗುತ್ತದೆ. ingredients ಹಾನಿಕಾರಕವಾಗಿದ್ದರೆ ಮಾಡಿ, ನಾವು ingredientsಗೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಗುಟ್ಕಾ ಎಂದಾಕ್ಷಣ ಅಡಿಕೆ ಸೇರಿಸಿಕೊಂಡು ಹೇಳುವುದು ಸರಿಯಾದದ್ದಲ್ಲ. ಎರಡನೆಯದಾಗಿ, ಸರ್ಕಾರ ಕಾನೂನು ತಜ್ಞರ ಜೊತೆಯೂ ಸಮಾಲೋಚನೆ ಮಾಡಬೇಕಾಗುತ್ತದೆ. ಸುಪ್ರೀಂ ಕೋರ್ಟ್‌ನಲ್ಲಿ ಇವತ್ತಿನವರೆವಿಗೂ ಕೂಡ ಅಡಿಕೆ ಆಹಾರ ಪದಾರ್ಥನೋ ಅಥವಾ ವಾಣಿಜ್ಯ ಬೆಳೆನೋ, ಏಲಕ್ಕಿ, ಸಾಂಬಾರ, ಲವಂಗ ತರಹವೋ, ಎನ್ನುವುದೂ ಕೂಡ ಸ್ಪಷ್ಟವಾದ ಒಂದು assertion ಗೆ ಬಂದಿಲ್ಲ. ಹಾಗಾಗಿ ನಾವು, ಸರ್ಕಾರವೂ ಕೂಡ ಕಾನೂನು ತಜ್ಞರ ಜೊತೆ ಸಮಾಲೋಚನೆ ಮಾಡಬೇಕಾಗುತ್ತದೆ. ಅಡಿಕೆಯನ್ನು ಯಾವ ಕ್ಯಾಟಗರಿ ಒಳಗಡೆ ವರ್ಗೀಕರಣ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆನ್ನುವುದು ಇರಬೇಕು ಕಾನೂನು ತಜ್ಞರ ಜೊತೆ ಸಮಾಲೋಚನೆ ಮಾಡಬೇಕು. point No.2. point No3, ಗೋರಖ್‌ಸಿಂಗ್ ವರದಿಯಲ್ಲಿ ಉಡುಪಿ-ಚಿಕ್ಕಮಗಳೂರು ಲೋಕಸಭೆ ಉಪ ಚುನಾವಣೆನಲ್ಲಿ, ನನಗೆ ಕಿವಿ ಒಳಗಡೆ ಗುಂಯ್‌ಗುಟ್ಟುತ್ತಿದೆ, 15 ದಿವಸಗಳಲ್ಲಿ ಗೋರಖ್ ಸಿಂಗ್ ಸಮಿತಿಯ ವರದಿಯನ್ನು ಸೆಂಟ್ರಲ್ ಗೌರ್ನಮೆಂಟ್ ಒಪ್ಪಿಕೊಳ್ಳುತ್ತದೆಂದು ವೀರಪ್ಪ ಮೊಯ್ಲಿಯವರು ಹೇಳಿದರು ರೂ.1400 ಕೋಟಿ ಪ್ಯಾಕೇಜ್, ಇವತ್ತಿನವರೆಗೆ ಸೊಲ್ಲಿಲ್ಲ. ನಮಗೆ ಹಿಂದೆಲ್ಲ ಒಂದಿತ್ತು ದುರಾದೃಷ್ಟ ಇಲ್ಲೊಂದು ಸರ್ಕಾರ, ಅಲ್ಲೊಂದು ಸರ್ಕಾರ ಏನು ಮಾಡೋಣ? ನಮ್ಮದಲ್ಲ ಸರ್ಕಾರವೆಂದು

ಹೇಳಿಕೊಳ್ಳಬಹುದಿತ್ತು. ನಾವು ಕೊಡುತ್ತೇವೆ, ಆದರೆ ಇಲ್ಲಿ ಬೇರೆ ಪಕ್ಷದ ಸರ್ಕಾರವಿದೆ, ಎಂದು ಹೇಳಬಹುದಿತ್ತು. ಈಗ ಅದೃಷ್ಟ, ಇಲ್ಲೂ ಅವರೇ, ಅಲ್ಲೂ ಅವರೇ, ಸಮಸ್ಯೆನೇ ಇಲ್ಲ. ಕುಂಟುನೆಪ ಹೇಳುವುದಕ್ಕೆ ದಾರಿ ಇಲ್ಲ ಸಬೂಬು ಹೇಳುವುದಕ್ಕೆ ಕಾರಣವಿಲ್ಲ ಈಗಲೂ ಇವರು ಮಾಡಲಿಲ್ಲವೆಂದರೆ, ಇವರು ಸ್ಪಷ್ಟವಾಗಿ ಬೆಳೆಗಾರರ ವಿರೋಧಿಗಳೆನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆ ಕಾರಣಕ್ಕೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ರೈತರ ಪರವಾದ ತೀರ್ಮಾನಗಳನ್ನು ಹಿಂದಿನ ಬಜೆಟ್‌ಗಳಲ್ಲಿ, ಈಗಿನ ಬಜೆಟ್ ಗೊತ್ತಿಲ್ಲ, ನಮ್ಮ ಪರಿವಾರದಲ್ಲಿದಂಥ ಎಲ್ಲಾ ಬಜೆಟ್ ಹಾಗೆ ಇತ್ತು, ಚೆನ್ನಾಗಿತ್ತು, ಖುಷಿಪಡುತ್ತಿದ್ದೆವು. ಹಾಗಾಗಿ ಆ ತರಹದಲ್ಲಿ ಈಗ ಅವರು ಅಡಿಕೆ ಬೆಳೆಗಾರರ ದೃಷ್ಟಿಯಿಂದ ಗೋರಖ್ ಸಿಂಗ್ ಸಮಿತಿಯ ವರದಿಯನ್ನು ಕೂಡಲೇ ಕೇಂದ್ರ ಸರ್ಕಾರ ಒಪ್ಪಿಕೊಳ್ಳುವುದಕ್ಕೆ ಅದರ ಮೇಲೆ ಎಷ್ಟರಮಟ್ಟಿಗೆ ಒತ್ತಡ ತರುತ್ತಾರೆ? ಈಗ ಸಬೂಬು ಹೇಳಿದರೆ ಕೇಳುವುದಕ್ಕೆ ನಾವು ತಯಾರಿಲ್ಲ. ಸರ್ಕಾರ ಬೇರೆ ಇದೆ ಎಂದು ಹಿಂದೆಲ್ಲಾ ಹೇಳುತ್ತಿದ್ದರೆ, ರಾಜಕೀಯ ಬಣ್ಣ ಇರಬಹುದೇನಪ್ಪ ಎಂದು ಹೇಳಬಹುದಿತ್ತು, ಈಗ ಅದಾಗಬೇಕು, ಒಂದು. ಎರಡನೆಯದು, ನಮ್ಮ ಭಾಗದ ಸಮಸ್ಯೆ ತೆಂಗಿನದು, ನಮ್ಮ ಭಾಗದಲ್ಲಿ ಇವತ್ತು ಕೊಬ್ಬರಿ ಧಾರಣೆ ಕುಸಿದು ಹೋಗಿದೆ. ರೈತರು ಅಕ್ಷರಶಃ ಬೀದಿಗೆ ಬಿದ್ದಿದ್ದಾರೆ. ಹಿಂದೆ ಬಿಜೆಪಿ ಸರ್ಕಾರವಿದ್ದಾಗ ದೊಡ್ಡ ಗಲಾಟೆ ಮಾಡಿ ಹಾಗೂ ಹೀಗೂ ರೂ.600 ಬೆಲೆ ಕೊಡಿಸಿದ್ದೆವು, ಅದು ಕೂಡ ಈಗ ಸ್ಥಗಿತವಾಗಿದೆ. ಬೆಲೆ ಎಷ್ಟು ಕುಸಿದಿದೆ ಎಂದರೆ, ಇವತ್ತು ಸರ್ಕಾರ, ನೀವು ತಕ್ಷಣ ಧಾವಿಸಿ ಬಾರದೆ ಹೋದರೆ ಕೊಬ್ಬರಿಗೆ ಕನಿಷ್ಠ ರೂ.1000 ಬೆಂಬಲ ಬೆಲೆಯನ್ನು ಕೊಡದೆ ಹೋದರೆ, ಗ್ಯಾರಂಟಿ-ಅನೇಕ ರೈತ ಕುಟುಂಬಗಳು ಆತ್ಮಹತ್ಯೆ ದಾರಿಯನ್ನು ಹಿಡಿಯುತ್ತವೆ. ಸರ್ಕಾರ ಬಂದ ಹೊಸದರಲ್ಲೇ ಹಾಗೆಲ್ಲಾ ಆಗಬಾರದು, ಅಪಶಕುನ ನುಡಿಯಬಾರದೆಂದು ನಾನು ನುಂಗಿಕೊಂಡು ಹೇಳುತ್ತಿದ್ದೇನೆ. ಆ ಕಾರಣಕ್ಕೆ ನಾನು ಹೇಳುವುದೇನೆಂದರೆ ರೂ.1000 ಬೆಂಬಲ ಬೆಲೆಯನ್ನು ಸರ್ಕಾರ ಘೋಷಣೆ ಮಾಡಬೇಕು.

ಅಧ್ಯಕ್ಷರು : ಅಡಿಕೆ ಬೆಳೆ ಬಗ್ಗೆ ಮಾತನಾಡಿ.

ಶ್ರೀ ವೈ.ಎಸ್.ವಿ.ದತ್ತ : ತೋಟಗಾರಿಕೆ ಬೆಳೆಯಲ್ಲಿ ಅದನ್ನು ಸೇರಿಸಿಕೊಂಡು ಮಾತನಾಡಿದ್ದೇನೆ ನಾಳೆ ಕೊಬ್ಬರಿಯ ಬಗ್ಗೆ ಬೇಕಾದರೆ ವಿಸ್ತೃತವಾದ figuresನ್ನೇ ಮುಖ್ಯಮಂತ್ರಿಗಳ ಮುಂದೆ ತಂದು ಇಟ್ಟುಬಿಡುತ್ತೇನೆ. ಆ ಕಾರಣಕ್ಕೆ ದಯವಿಟ್ಟು ಅಡಿಕೆ ಬಗ್ಗೆ ನಾನು ಮೂರು ಅಂಶಗಳನ್ನು ಹೇಳಿದ್ದೇನೆ,

(1) ಗುಟ್ಕಾ ನಿಷೇಧಕ್ಕೆ ಮೊದಲು ingredients, (2) ಗುಟ್ಕಾ ನಿಷೇಧಕ್ಕೆ ಮುಂಚೆ ಅಡಿಕೆ ಬೆಳೆಗಾರರೆ; ಕಂಗೆಡಬೇಡಿ ಎಂದು ಮುಖ್ಯಮಂತ್ರಿಗಳು ಬಹಳ ಧೈರ್ಯ ಕೊಟ್ಟಿದ್ದಾರೆ. ಬರೀ ಬಾಯಿಯಲ್ಲಿ ನೀವು ಧೈರ್ಯವಾಗಿ ಇರಿ ನಾವು ಇದ್ದೇವೆಂದು ಹೇಳುವುದಲ್ಲ. What are the specific agenda, programmes? ನೀವು ಯಾವ ರೀತಿ ಅವರಿಗೆ ಧೈರ್ಯ ತುಂಬುತ್ತೀರಿ? ಯಾವ ರೀತಿ ಅವರ ನೆರವಿಗೆ ಬರುತ್ತೀರಿ ಎಂದು ಸರ್ಕಾರ ಘೋಷಣೆ ಮಾಡಬೇಕಾಗುತ್ತದೆ. (3) ಕೇಂದ್ರ ಸರ್ಕಾರ ಗೋರಖ್ ಸಿಂಗ್ ಕಮಿಟಿ ವರದಿಯನ್ನು immediate implement ಮಾಡಬೇಕು. ಇಲ್ಲವೆಂದರೆ, last option ರೈತರು ಹತಾಶರಾಗಿ ಹೇಳುವ ಮಾತನ್ನು ನಾನು ನಿಮ್ಮ ಮೂಲಕ ಹೇಳುತ್ತಿದ್ದೇನೆ. ಹಳದಿ ಎಲೆ ರೋಗಕ್ಕೆ ಮಾಡಬಾರದ ಚಿಕಿತ್ಸೆ ಮಾಡಿದ್ದಾರೆ. ಆಯುರ್ವೇದಿಕ್ ಚಿಕಿತ್ಸೆ, ಹೋಮಿಯೋಪತಿ ಚಿಕಿತ್ಸೆ ನಾಟಿ ಔಷಧಿ ಎಲ್ಲಾ ತರಹದ್ದೂ ಮಾಡಿ ಕೈ ಬಿಟ್ಟಿದ್ದಾರೆ. ಯಾವುದೂ ಆಗಿಲ್ಲ. ಆದರೆ ನಾನೇನು ಹೇಳುವುದೇನೆಂದರೆ, ಅವರು ಹತಾಶರಾಗಿ ಒಂದು ಮಾತನ್ನು ಹೇಳಿದ್ದಾರೆ. ನಾವು ಎಲ್ಲಾ ಅಡಿಕೆ ಮರಗಳನ್ನೂ ಕಿತ್ತು ಹಾಕಿ ಬೇರೆ ಪರ್ಯಾಯ ಬೆಳೆ ಬೆಳೆದುಕೊಳ್ಳುತ್ತೇವೆ ಅದಕ್ಕಾದರೂ ನಮಗೆ ಸಹಾಯ ಮಾಡಿ ಎಂದು ಕೇಳುತ್ತಿದ್ದಾರೆ. ಹಾಗಾಗಿ ಸರ್ಕಾರಕ್ಕೆ ಕೊನೆಯ option ಇರುವುದು ಎಂದರೆ, ಅಡಿಕೆ ಬೆಳೆಗಾರರ ಅಡಿಕೆ ಮರಗಳನ್ನು ಕಿತ್ತು ಹಾಕಿ ನಿಮಗೆ ಬೇರೆ ಪರ್ಯಾಯ ಮಾಡಿಕೊಡುತ್ತೇವೆಂದು ಆ ಪ್ಯಾಕೇಜ್ ಆದರೂ ಘೋಷಣೆ ಮಾಡಿ ಎಂದು ಕೇಳಿಕೊಳ್ಳುತ್ತೇವೆ. ಇಷ್ಟು ನನ್ನ ಆಗ್ರಹಪೂರ್ವಕವಾದ ಒತ್ತಾಯ. ವಿನಮ್ರಪೂರ್ವಕವಾದ ವಿನಂತಿಯೂ ಅದರೊಳಗಡೆ ಇದೆ.

ಶ್ರೀ ಪಿ.ಎಂ.ನರೇಂದ್ರಸ್ವಾಮಿ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ನಾವು ನಮ್ಮ ಭಾಗದಲ್ಲಿ ಅಡಿಕೆ ಬೆಳೆ ಹೆಚ್ಚಾಗಿ ಬೆಳೆಯುವವರು ಅಲ್ಲ. ಅಲ್ಲಲ್ಲಿ ಸ್ವಲ್ಪ ಸ್ವಲ್ಪ ಇತ್ತೀಚೆಗೆ ಬೆಳೆದಿರುವುದು. ಆದರೆ ಸದನದಲ್ಲಿ ಚರ್ಚೆಯಾಗಬೇಕಾದರೆ ನಾನು ಒಂದು ಅಂಶ ಗಮನಿಸಿದೆ. ಈ ಚರ್ಚೆಯಲ್ಲಿ ಒಂದು ತಪ್ಪು ಮಾಹಿತಿ ಏನು ಹೇಳುತ್ತಿದ್ದಾರೆ, ಅದನ್ನು ಸರಿ ಮಾಡುವುದಕ್ಕಾಗಿ ನಾನು ಮಾತನಾಡುತ್ತಿದ್ದೇನೆ. ಮಾನ್ಯ ರಾಜಣ್ಣರವರು ಮಾತನಾಡಬೇಕಾದರೆ 90% ಅಡಿಕೆ ನಾವು ಗುಟ್ಕಾ ತಯಾರಿಕೆಗೆ ಸಪ್ಲೈ ಮಾಡುತ್ತಿದ್ದೇವೆ ಎನ್ನುವಂತಹ ಮಾತನ್ನು ಹೇಳಿದರು. ಅವರು ಅಡಿಕೆ ಬೆಳೆಗಾರರು, ನಾನು ಅಡಿಕೆ ಬೆಳೆಗಾರ ಅಲ್ಲ. ಅಷ್ಟೇ ವ್ಯತ್ಯಾಸ. ಆದರೂ ಅಧಿಕಾರಿಗಳು ಹಾಗೂ ವ್ಯಾಪಾರಿಗಳಿಂದ ನಾವೂ ತಿಳಿದುಕೊಂಡಿರುವುದು. ಪಾನ್ ಮಸಾಲ, ಗುಟ್ಕಾ, ಸುಪಾರಿ ಹಾಗೂ ನಾನಾ

ರೀತಿಯಲ್ಲಿ ಅಡಿಕೆ ತಯಾರಾಗುತ್ತಿದೆ. ಗುಟ್ಕಾಗೆ 90 ಭಾಗ ಅಡಿಕೆ ಇವತ್ತು ಹೋಗುತ್ತಿಲ್ಲ. ಅದರ ಜೊತೆಗೆ ಬರೀ ಕರ್ನಾಟಕದ ಅಡಿಕೆ ಮಾತ್ರ ಗುಟ್ಕಾ ತಯಾರಿಕೆಗೆ ಹೋಗುತ್ತಿದೆ ಎನ್ನುವುದೂ ತಪ್ಪು. ಇದಕ್ಕೆ ಹೊರದೇಶದಿಂದ ಇಂಪೋರ್ಟ್ ಆಗುತ್ತಿದ್ದಂತಹ ಅಡಿಕೆ ಹೆಚ್ಚಿನ ಅಂಶ ಗುಟ್ಕಾಗೆ ಸಪ್ಲೈ ಆಗುತ್ತಿದೆ ಎನ್ನುವುದು ನನಗಿರತಕ್ಕಂತಹ ಮಾಹಿತಿ. ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ಹಾಗೂ ಸರ್ಕಾರವನ್ನು ನಾನು ಕೇಳುವುದು ಇಷ್ಟೆ. ಈ ಸದನದ ಮೂಲಕ ರಾಜ್ಯದ ರೈತರಿಗೆ ತಪ್ಪು ಸಂದೇಶ ಹೋಗಬಾರದು. ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಈ ಸಂಪೂರ್ಣ ಮಾಹಿತಿಯನ್ನು ಗುಟ್ಕಾ ತಯಾರಿಕೆಗೆ ಎಷ್ಟು ಪರ್ಸೆಂಟ್ ಅಡಿಕೆ ಹೋಗುತ್ತಿದೆ, ಪಾನ್ ಮಸಾಲಾಗೆ ಎಷ್ಟು ಪ್ರಮಾಣದ ಅಡಿಕೆ ಹೋಗುತ್ತಿದೆ, ಸುಪಾರಿಗೆ ಎಷ್ಟು ಹೋಗುತ್ತಿದೆ, ರೈತರಿಗೆ ಇದರಿಂದ ಸಮಸ್ಯೆ ಉಂಟಾದಾಗ ನಮ್ಮ ಸರ್ಕಾರ ಯಾವ ನೆರವಿನಲ್ಲಿದೆ ಎನ್ನುವುದನ್ನು ಸ್ಪಷ್ಟಪಡಿಸಬೇಕಾದರೆ ಈ ಮಾಹಿತಿಗಳು ಒಳಗೊಂಡಿರಲಿ ಎನ್ನುವುದನ್ನು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ಧನ್ಯವಾದಗಳು.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಸಲಹೆ ಅಷ್ಟೆ. ಇವತ್ತು ಈ ಮನೆಗೆ ಸುಮಾರು 67ಕ್ಕೂ ಹೆಚ್ಚು ಜನ ಹೊಸ ಶಾಸಕರು ಆಯ್ಕೆಯಾಗಿ ಬಂದಿದ್ದಾರೆ. ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಚರ್ಚೆ ಪ್ರಾರಂಭವಾದರೆ, ಬಹಳಷ್ಟು ಜನ ಶಾಸಕರು ಅವರವರ ಕ್ಷೇತ್ರದ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಹಾಗೂ ನೋವುಗಳನ್ನು ಹೇಳಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಏಳನೇ ತಾರೀಕು ಶುಕ್ರವಾರ ಮಧ್ಯಾಹ್ನ ಸದನ ಮುಗಿಯುತ್ತಿದೆ. ಕೇವಲ ಆರನೇ ತಾರೀಖು ಹಾಗೂ ಏಳನೇ ತಾರೀಖು ಎರಡನೇ ದಿವಸ ಚರ್ಚೆಗೆ ಅವಕಾಶ ಇರುವಂಥದ್ದು. ಎಲ್ಲಾ ಹೊಸ ಸದಸ್ಯರುಗಳಿಗೆ ಅವಕಾಶ ಸಿಗಬೇಕೆಂದರೆ ತಕ್ಷಣ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆ ಪ್ರಾರಂಭವಾದರೆ ಎಲ್ಲರಿಗೂ ಅವಕಾಶ ಸಿಗುತ್ತದೆ. ಅಡಿಕೆ ಗುಟ್ಕಾ ವಿಷಯದ ಮೇಲೆ reply ಮಾಡಿಸಿ ಆ ವಿಷಯವನ್ನು ತೆಗೆದುಕೊಳ್ಳಬೇಕೆಂದು ನಾನು ಎಲ್ಲಾ ಹೊಸ ಶಾಸಕರ ಪರವಾಗಿ ವಿನಂತಿ ಮಾಡುತ್ತೇನೆ.

ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ,...

ದಿನಾಂಕ: 30-05-2013ರಂದು ರಾಜ್ಯಾದ್ಯಂತ ತಂಬಾಕು ಅಥವಾ ನಿಕೋಟಿನ್‌ಯುಕ್ತ ಗುಟ್ಕಾ ಮತ್ತು ಪಾನ್ ಮಸಾಲಗಳನ್ನು ಒಳಗೊಂಡ

ತಂಬಾಕು ಉತ್ಪನ್ನಗಳನ್ನು ಉತ್ಪಾದಿಸಿ, ಶೇಖರಿಸಿ, ಮಾರಾಟ ಅಥವಾ ವಿತರಿಸುವುದನ್ನು ನಿಷೇಧಿಸಗೊಳಿಸಲಾಗಿದೆ. ಈ ರೀತಿ ಗುಟ್ಕಾ ಮತ್ತು ಪಾನ್ ಮಸಾಲಗಳನ್ನು ನಿಷೇಧಿಸುವುದಕ್ಕೆ ಈ ಕೆಳಕಂಡ ಅಂಶಗಳು ಕಾರಣಗಳಾಗಿವೆ:

ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ವಿಶೇಷ ಕಾರ್ಯದರ್ಶಿಯವರ ದಿನಾಂಕ:25-04-2012ರ ಅರೆ ಸರ್ಕಾರಿ ಪತ್ರದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2011ರ ಸೆಕ್ಷನ್ 2.3.4ರ ಅನ್ವಯ ಯಾವುದೇ ಆಹಾರ ಪದಾರ್ಥದಲ್ಲಿ ನಿಕೋಟಿನ್ ಮತ್ತು ತಂಬಾಕು ಮಿಶ್ರಣವಾಗಿದ್ದಲ್ಲಿ, ಅದನ್ನು ನಿಷೇಧಿಸಲು ಆಸ್ಪದ ಕಲ್ಪಿಸಲಾಗಿದ್ದು ಅದರನ್ವಯ ರಾಜ್ಯ ಸರ್ಕಾರವು ಅಗತ್ಯ ಕ್ರಮ ವಹಿಸಲು ತಿಳಿಸಿರುತ್ತಾರೆ. ಕ್ಯಾನ್ಸರ್ ಪೇಷೆಂಟ್ಸ್ ಏಡ್ ಅಸೋಷಿಯೇಷನ್, ಮುಂಬೈ ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ:23661/2012ನ್ನು ದಾಖಲಿಸಿ ಸಾರ್ವಜನಿಕ ಹಿತಾಸಕ್ತಿಯನ್ವಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಅಡಿಯಲ್ಲಿ ತಂಬಾಕು ಮಿಶ್ರಿತ ಮತ್ತು ನಿಕೋಟಿನ್ ಯುಕ್ತ ಗುಟ್ಕಾ ಮತ್ತು ಪಾನ್ ಮಸಾಲಗಳನ್ನು ನಿಷೇಧಿಸುವಂತೆ ಕೋರಿದ್ದರು. ಶ್ರೀ ಎಸ್.ವಿಜಯ ಶಂಕರ್, ಅಂದಿನ ಅಡ್ವೊಕೇಟ್ ಜನರಲ್‌ರವರು ದಿನಾಂಕ:30-01-2013ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಬರೆದಿರುವ ಪತ್ರದಲ್ಲಿ ರಾಜ್ಯದಲ್ಲಿ ಗುಟ್ಕಾವನ್ನು ನಿಷೇಧಿಸುವ ಬಗ್ಗೆ ಅಂತಿಮ ತೀರ್ಮಾನವನ್ನು ವಿಳಂಬವಿಲ್ಲದೆ ತೆಗೆದುಕೊಳ್ಳುವಂತೆ ತಿಳಿಸಿರುತ್ತಾರೆ. ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಅಂಕೂರ್ ಗುಟ್ಕಾ ಮತ್ತಿರರು ಸಲ್ಲಿಸಿರುವ ಎಸ್.ಎಲ್.ಪಿ. ಅರ್ಜಿಗಳ ಸಂಖ್ಯೆ:16308/2007, 16314/2007 ಹಾಗೂ ಇತರೆ ಅರ್ಜಿಗಳ ಕುರಿತ ದಿನಾಂಕ:03-05-2013ರ ಆದೇಶದಲ್ಲಿ ಗುಟ್ಕಾ ಮತ್ತು ಪಾನ್ ಮಸಾಲಗಳನ್ನು ತಯಾರಿಸುವುದು ಮತ್ತು ಮಾರಾಟ ಮಾಡುವುದನ್ನು ನಿಷೇಧಗೊಳಿಸುವ ಕುರಿತು ರಾಜ್ಯ ಸರ್ಕಾರವು ಆದೇಶ ಹೊರಡಿಸಿ ದಿನಾಂಕ:25-06-2013ರೊಳಗೆ ಆದೇಶದ ಪ್ರತಿಯನ್ನು ಒದಗಿಸುವಂತೆ ನಿರ್ದೇಶನ ನೀಡಿರುತ್ತದೆ. ರಾಜ್ಯದಲ್ಲಿ ತಂಬಾಕು ಉತ್ಪನ್ನಗಳನ್ನು ನಿಷೇಧಿಸುವ ಕುರಿತು ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್, ಬೆಂಗಳೂರು ಇವರು ಕರ್ನಾಟಕ ವಿಧಾನ ಸಭೆಯ ಅರ್ಜಿ ಸಮಿತಿಗೆ ಸಲ್ಲಿಸಿದ ಅರ್ಜಿಯ ಬಗ್ಗೆ, ಶ್ರೀ ಯೋಗಿಶ್ ಭಟ್, ಮಾಜಿ ಶಾಸಕರು ಹಾಗೂ ಅಂದಿನ ವಿಧಾನ ಸಭಾ ಅರ್ಜಿ ಸಮಿತಿಯ ಅಧ್ಯಕ್ಷರು ಪ್ರಸ್ತುತ ವಿಷಯದ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿ ತಂಬಾಕು ಉತ್ಪನ್ನಗಳನ್ನು

ನಿಷೇಧಿಸುವುದರಿಂದ ಉಂಟಾಗುವ ಸಾಧಕ-ಬಾಧಕಗಳ ಬಗ್ಗೆ ವರದಿ ಸಲ್ಲಿಸುವಂತೆ ಶಿಫಾರಸ್ಸು ಮಾಡಿದ್ದರು. ಅದರಂತೆ, ದಿನಾಂಕ:07-03-2013ರ ಸರ್ಕಾರಿ ಆದೇಶದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ದಿನಾಂಕ:21-05-2013ರಂದು ಸಭೆ ನಡೆಸಿತು. ಸಭೆಯಲ್ಲಿ ತಂಬಾಕು ಉತ್ಪನ್ನವಾದ ಗುಟ್ಕಾ ಮತ್ತು ಪಾನ್ ಮಸಾಲಗಳನ್ನು ರಾಜ್ಯದಲ್ಲಿ ತಯಾರಿಸಿ ಮಾರಾಟ ಮಾಡುವ ಪ್ರಕ್ರಿಯೆಯನ್ನು ನಿಷೇಧಗೊಳಿಸಿದಲ್ಲಿ, ಅಡಿಕೆ ಬೆಳೆಗಾರರಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ, ಏಕೆಂದರೆ ಸದರಿ ಉತ್ಪನ್ನಗಳ ತಯಾರಿಕಾ ಸಂಸ್ಥೆಗಳು ಕಡಿಮೆ ದರ್ಜೆಯ ಅಡಿಕೆಯನ್ನು ವಿದೇಶಗಳಿಂದ ಆಮದು ಮಾಡಿಕೊಂಡು ಉಪಯೋಗಿಸುತ್ತಾರೆ ಎಂಬ ಅಂಶವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ಇವರು ಸಮಿತಿಗೆ ಖಚಿತಪಡಿಸಿರುತ್ತಾರೆ. ಈ ಅಂಶವನ್ನು ಪರಿಗಣಿಸಿ ಹಾಗೂ ಅಂತಿಮವಾಗಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ದಿನಾಂಕ:03-05-2013ರ ನಿರ್ದೇಶನದನ್ವಯ ರಾಜ್ಯದಲ್ಲಿ ಗುಟ್ಕಾ ಮತ್ತು ಪಾನ್ ಮಸಾಲಗಳನ್ನು ಒಳಗೊಂಡ ತಂಬಾಕು ಉತ್ಪನ್ನಗಳನ್ನು ತಯಾರಿಸಿ, ಮಾರಾಟ ಮಾಡುವ ಪ್ರಕ್ರಿಯೆಗೆ ನಿಷೇಧಿಸುವುದು ಅನಿವಾರ್ಯವಾಗಿದ್ದು, ಈ ಸಂಬಂಧ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಸೂಕ್ತ ಆದೇಶ ಹೊರಡಿಸಿ ಮಾನ್ಯ ನ್ಯಾಯಾಲಯಕ್ಕೆ ಪ್ರಮಾಣಪತ್ರವನ್ನು ಸಲ್ಲಿಸುವಂತೆ ಉನ್ನತ ಮಟ್ಟದ ಸಮಿತಿಯು ನಿರ್ಣಯಿಸಿತು. ಈಗಾಗಲೇ ಕೆಳಕಂಡ ರಾಜ್ಯಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಗುಟ್ಕಾ ಮತ್ತು ಪಾನ್ ಮಸಾಲದಂತಹ ತಂಬಾಕು ಉತ್ಪನ್ನಗಳನ್ನು ನಿಷೇಧಿಸಲಾಗಿದೆ. ಮದ್ಯಪ್ರದೇಶ, ಕೇರಳ, ಬಿಹಾರ್, ಮಹಾರಾಷ್ಟ್ರ, ಹಿಮಾಚಲಪ್ರದೇಶ, ರಾಜಾಸ್ಥಾನ, ಹರಿಯಾಣ, ಜಾರ್‌ಖಂಡ್, ಛತ್ತಿಸ್‌ಘಡ್, ಗುಜರಾತ್, ಪಂಜಾಬ್, ಉತ್ತರಖಂಡ, ಮಿಜೋರಾಮ್, ದೆಹಲಿ, ಸಿಕ್ಕಿಂ, ಆಂಧ್ರ ಪ್ರದೇಶ್, ಓಡಿಸ್ಸಾ, ನಾಗಲ್ಯಾಂಡ್, ಅರುಣಾಚಲ ಪ್ರದೇಶ್, ಮಣಿಪುರ, ಅಸ್ಸಾಂ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ತಮಿಳುನಾಡು ಹಾಗೂ ಕೇಂದ್ರಾಡಳಿತ ಪ್ರದೇಶಗಳಾದ, ಚಂಡೀಗಡ್, ದಾದರ್ ನಗರ್ ಹವೇಲಿ, ಡೀಯು-ಡಾಮನ್, ಅಂಡೋಮನ್ ನಿಕೋಬಾರ್. ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ಸಾರ್ವಜನಿಕರ ಆರೋಗ್ಯ ಹಿತಾಸಕ್ತಿಯನ್ನು ಪರಿಗಣಿಸಿ, ಅನಿವಾರ್ಯವಾಗಿ ಗುಟ್ಕಾ ಮತ್ತು ಪಾನ್ ಮಸಾಲದಂತಹ ತಂಬಾಕು ಉತ್ಪನ್ನಗಳನ್ನು ನಿಷೇಧಿಸಿ ದಿನಾಂಕ:30-05-2013ರಂದು ಆದೇಶವನ್ನು ಹೊರಡಿಸಿದೆ. ಬಹುಶಃ ಇವತ್ತು ಈ ಆದೇಶವನ್ನು ಹೊರಡಿಸುವುದರ ಮೂಲಕ ಗುಟ್ಕಾವನ್ನು

ನಿಷೇಧಿಸುವುದರಿಂದ ಅಡಿಕೆ ಬೆಳೆಗಾರರಿಗೆ ಯಾವುದೇ ತೊಂದರೆ ಇಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮ ಜನಸಾಮಾನ್ಯರೆಲ್ಲಾ ಅರ್ಥ ಮಾಡಿಕೊಳ್ಳಬೇಕು. ನಾವು ನಿಷೇಧ ಹೇರಿರುವುದು ನಿಕೋಟಿನ್ ಮೇಲೆ, ಇದರಿಂದಾಗಿ ವರ್ಷಕ್ಕೆ ಲಕ್ಷಾಂತರ ಯುವಕರು ಜೀವವನ್ನು ಕಳೆದುಕೊಳ್ಳುತ್ತಿದ್ದಾರೆ. ಕ್ಯಾನ್ಸರ್ ಹಾಗೂ ಇನ್ನಿತರೆ ರೋಗಗಳು ಬಂದು ಅವರು ಸಾವನ್ನಪ್ಪುವ ಸಂದರ್ಭದಲ್ಲಿ ಇದಕ್ಕೆ ಕಾರಣಕರ್ತವಾದ ಟೊಬ್ಯಾಕೋ ಮತ್ತು ನಿಕೋಟಿನ್‌ಗೆ ಮಾತ್ರ ನಿಷೇಧ ಮಾಡಿದ್ದು ಅಡಿಕೆಗೂ ನಿಷೇಧಕ್ಕೂ ಯಾವುದೇ ಸಂಬಂಧ ಇಲ್ಲವೆಂದು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಯಾವ ಒಂದು ಕಳಂಕ ಈ ಹಿಂದೆ ಇತ್ತೋ, ಯಾವುದೆಂದರೆ ಬಹುಶಃ ಅಡಿಕೆಯಲ್ಲಿ ವಿಷಪೂರಿತವಾದದ್ದನ್ನು ತಿಂದು ನಮ್ಮ ಯುವಕರು ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ ಎನ್ನುವ ಅಡಿಕೆಗೆ ಇದ್ದ ಕಳಂಕವನ್ನು ನಮ್ಮ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ಕಿತ್ತೊಗೆದು ಬಹುಶಃ ಮುಂದಿನ ದಿನಗಳಲ್ಲಿ ವಿಷಪೂರಿತವಲ್ಲದ, ಅತ್ಯುತ್ತಮವಾದ, ಆರೋಗ್ಯಕ್ಕೆ ಪೂರಕವಾದ ಅಡಿಕೆಯು, ಸ್ವೀಟ್ ಸುಪಾರಿ ಮತ್ತು ಇನ್ನಿತರ ಅಡಿಕೆಯ ಸ್ವೀಟ್ ಸುಪಾರಿ ಬರುವಂಥದ್ದಕ್ಕೆ ಅವಕಾಶ ಮಾಡಿಕೊಡುತ್ತಾರೆ ಎಂದು ನಾನು ಹೇಳಬಯಸುತ್ತೇನೆ. ಇವತ್ತು ಚರ್ಚೆ ಮಾಡುವಂಥ ಸಂದರ್ಭದಲ್ಲಿ ನನಗೆ ಚೆನ್ನಾಗಿ ಗೊತ್ತಿದೆ, ಬಹುಶಃ ಸರ್ಕಾರ ಇವತ್ತು ಅಡಿಕೆ ಬೆಳೆಗಾರರಿಗೆ, ಇವತ್ತು ಬೇರೆ ಬೆಳೆಗಾರರಿಗೆ ಯಾವ ರೀತಿಯಲ್ಲಿ ರಕ್ಷಣೆಯನ್ನು ಕೊಡುತ್ತದೆಯೋ ಅದೇ ರೀತಿ ಅಡಿಕೆ ಬೆಳೆಗಾರರಿಗೂ ಕೂಡ ರಕ್ಷಣೆ ಕೊಡುವುದಕ್ಕೆ ನಮ್ಮ ಕಾಂಗ್ರೆಸ್ ಸರ್ಕಾರ ಬದ್ಧವಾಗಿದೆಯೆಂದು ಹೇಳಬಯಸುತ್ತೇನೆ. ಇವತ್ತು ನಮಗೆ ಮತ್ತು ಸದನದ ಎಲ್ಲಾ ಸದಸ್ಯರಿಗೂ ಕೂಡ ಆ ಕಮಿಟ್‌ಮೆಂಟ್ ಇದೆಯೆಂದು ನಾನು ಅರ್ಥಮಾಡಿಕೊಳ್ಳುತ್ತೇನೆ. ಬಹುಶಃ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಬೇರೆ ಬೇರೆ ಸಂಶಯಗಳು ಬಂದಿವೆ. ಸಂಶಯಗಳು ಬರುವುದು ಸ್ವಾಭಾವಿಕ. ಆ ಸಂಶಯವನ್ನು ಬಗೆಹರಿಸಬೇಕಾದದ್ದು ನಮ್ಮ ಕರ್ತವ್ಯ. ಸದನದಲ್ಲಿ ಹಲವಾರು ಸದಸ್ಯರುಗಳು ಅವರವರ ಸಂಶಯವನ್ನು ವ್ಯಕ್ತಮಾಡಿದ್ದಾರೆ. ಬಹುಶಃ ಅವರ ಸಂಶಯವನ್ನು ದೂರ ಮಾಡುವ ಮೂಲಕ ಅಡಿಕೆ ಬೆಳೆಗಾರರ ಸಂಶಯವನ್ನೂ ಕೂಡ ದೂರ ಮಾಡುವುದಕ್ಕೆ ನಾವು ಬಯಸುತ್ತೇವೆ. ಇಷ್ಟು ಆತುರವಾಗಿ ಏಕೆ ಈ ನಿರ್ಧಾರವನ್ನು ತೆಗೆದುಕೊಂಡಿರಿ ಎನ್ನುವ ಪ್ರಶ್ನೆ ಸದಸ್ಯರಿಂದ ಬಂತು. ಇದರಲ್ಲಿ ಯಾವುದೇ ಆತುರವಿಲ್ಲ. 2007 ರಿಂದ ಇದು ಜಾರಿಗೆ ಬಂದಂಥದ್ದು, 2011 ರಿಂದ strict ಆಗಿ ಆಗಾಗ ಆದೇಶ ಬರುತ್ತಿತ್ತು, ಅಂದು ಇದ್ದಂಥ ಸರ್ಕಾರದಲ್ಲಿ, Advocate General ರವರಿಗೆ ಆದೇಶ ಬಂದಮೇಲೆ ಅವತ್ತು

ಬರೆದಿದ್ದರು. ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಂಡಿರಲಿಲ್ಲ. ಆದಕಾರಣ ಈಗ ಅಂತಿಮವಾಗಿ ಡೈರೆಕ್ಷನ್ ಸರ್ಕಾರಕ್ಕೆ ಬಂದ ಕಾರಣ ಮತ್ತು ಇದು ಆರೋಗ್ಯಕ್ಕೆ ಸಂಬಂಧಪಟ್ಟ ವಿಚಾರವಾದ್ದರಿಂದ ಸರ್ಕಾರ ಈ ಒಂದು ತೀರ್ಮಾನವನ್ನು ತೆಗೆದುಕೊಂಡಿದೆಯೇ ಹೊರತು ಯಾವುದೇ ಒಂದು ಆತುರದ ತೀರ್ಮಾನವಲ್ಲವೆಂದು ತಮಗೆ ಮನದಟ್ಟು ಮಾಡಬಯಸುತ್ತೇನೆ. ಅದೇ ರೀತಿಯಲ್ಲಿ ಬಹುಶಃ ಇವತ್ತು ಅಡಿಕೆಗೆ ರೇಟ್ ಕಡಿಮೆಯಾಗುತ್ತದೆ ಎನ್ನುವ ಮಾತನ್ನು ಸದಸ್ಯರುಗಳು ಹೇಳಿದ್ದಾರೆ. ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅಡಿಕೆ ಬೆಳೆಗಾರರು ಯಾರೂ ಕೂಡ ಎದೆಗುಂದಬಾರದು ಎಂದು ಹೇಳುತ್ತೇನೆ. ಇದನ್ನು ನಾನು ಮಾತ್ರ ಹೇಳುತ್ತಿಲ್ಲ. ಇವತ್ತು ಕ್ಯಾಂಪ್ಕೋದ ಛೇರ್ಮನ್, ಅಡಿಕೆಗೆ ಸಂಬಂಧಪಟ್ಟಂತೆ ಯಾವ ಒಂದು ಸಂಸ್ಥೆಯಿದೆಯೋ ಅದರ ಛೇರ್ಮನ್ ಮರುದಿವಸವೇ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಕರ್ನಾಟಕದಲ್ಲಿ ಗುಟ್ಕಾ ನಿಷೇಧದಿಂದ ಅಡಿಕೆ ಬೆಳೆಗಾರರಿಗೆ ಯಾವುದೇ ಪರಿಣಾಮ ಬೀರುವುದಿಲ್ಲ, ಆದರೆ ತಾತ್ಕಾಲಿಕವಾಗಿ ಏರುಪೇರು ಆಗಬಹುದು ಎಂದು ಕ್ಯಾಂಪ್ಕೋ ಅಧ್ಯಕ್ಷರು ಹೇಳುತ್ತಾ, ಇವತ್ತು ಆರೋಗ್ಯದ ಮೇಲೆ ಪರಿಣಾಮ ಬೀರುವ ಗುಟ್ಕಾ ನಿಷೇಧ ಮಾಡಿದ್ದು ಒಳ್ಳೆಯದು, ಇದರಿಂದಾಗಿ ಅಡಿಕೆ ಬೆಳೆಗಾರರಿಗೆ ಏನು ತೊಂದರೆಯಿದೆ ಎಂದು ಹೇಳುತ್ತಿದ್ದಾರೆ ಅವರಿಗೂ ಕೂಡ ಇವರು ಧೈರ್ಯ ತುಂಬುವಂಥ ಕೆಲಸವನ್ನು ಮಾಡಿದ್ದಾರೆ. ಜನಪ್ರತಿನಿಧಿಯಲ್ಲದವರು ಧೈರ್ಯ ತುಂಬುವಂಥ ಕೆಲಸವನ್ನು ಮಾಡುತ್ತಿರುವಂಥ ಸಂದರ್ಭದಲ್ಲಿ ನಮ್ಮ ಜವಾಬ್ದಾರಿ ಅವರಿಗಿಂತಲೂ ಜಾಸ್ತಿ ಇರುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀ ವೈ.ಎಸ್.ವಿ. ದತ್ತ :– ಮಾನ್ಯ ಅಧ್ಯಕ್ಷರು, ಇವರು ಹೇಳುತ್ತಿರುವುದು,,,

(ಗೊಂದಲ)

ಅಧ್ಯಕ್ಷರು :– ಮಾನ್ಯ ಸಚಿವರು ಮೊದಲು ಉತ್ತರ ಸಂಪೂರ್ಣವಾಗಿ ಕೊಡಲಿ.

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :– ಈಗಾಗಲೇ ನೀವು ಮಾತನಾಡಿದ್ದನ್ನು ಕೇಳಿದ್ದೇನೆ. ಈಗ ನಾನು ಮಾತನಾಡುವುದನ್ನು ಸ್ವಲ್ಪ ಕೇಳಿ. ಇವತ್ತು ಬಹುಶಃ ಕ್ಯಾಂಪ್ಕೋ ಅಧ್ಯಕ್ಷರು ಇಷ್ಟೊಂದು ಧೈರ್ಯ ತುಂಬುವಂಥ ಕೆಲಸವನ್ನು ಮಾಡಿದ್ದಾರೆ ಮತ್ತು ಅಡಿಕೆಗೆ ಸಂಬಂಧಪಟ್ಟಂಥ ಎಲ್ಲಾ ಆಗುಹೋಗುಗಳನ್ನು ನಮಗಿಂತಲೂ ಬಹಳಷ್ಟು ಚೆನ್ನಾಗಿ ಅರ್ಥಮಾಡಿಕೊಂಡವರು ಮತ್ತು ನಮಗಿಂತಲೂ ಚೆನ್ನಾಗಿ

ಪರಿಣಿತರಾದಂಥವರು ಭವಿಷ್ಯದಲ್ಲಿ ಬರಬಹುದಾದ ರೇಟ್ ಬಗ್ಗೆ ಆಲೋಚನೆ ಮಾಡಲು ಶಕ್ತಿ ಹೊಂದಿದಂಥವರು ಇಂಥದ್ದೊಂದು ಧೈರ್ಯವನ್ನು ಅಡಿಕೆ ಬೆಳೆಗಾರರಿಗೆ ಕೊಡುವಂಥ ಸಂದರ್ಭದಲ್ಲಿ, ನಮ್ಮ ಜವಾಬ್ದಾರಿ ಅವರಿಗಿಂತಲೂ ಜಾಸ್ತಿ ಇರಬೇಕಾಗುತ್ತದೆ ಮತ್ತು ಅಡಿಕೆ ಬೆಳೆಗಾರರಿಗೆ ವಿಶ್ವಾಸ ಕೊಡುವಂಥ ಕೆಲಸವನ್ನು ನಾವುಗಳೆಲ್ಲರೂ ಈ ಸದನದ ಮೂಲಕ ಕೊಡಬೇಕಾಗುತ್ತದೆಂದು ಆ ಬೆಳೆಗಾರರ ಪರವಾಗಿ ನಾನು ಇಲ್ಲಿ ಹೇಳಬಯಸುತ್ತೇನೆ. ಬಹುಶಃ ನಾವು ಇವತ್ತು ಬೇರೆ ಬೇರೆ ಚರ್ಚೆ ಮಾಡುವ ಮೂಲಕ ಹೋದರೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ, ಅಡಿಕೆ ಬೆಳೆಗಾರರಿಗೆ ತೊಂದರೆ ಹೊರತು ಬೇರೇನೂ ಆಗುವುದಿಲ್ಲವೆಂದು ನಾನು ಹೇಳಬಯಸುತ್ತೇನೆ. ಏಕೆಂದರೆ ಇಂಥ ಚರ್ಚೆಗಳಿಂದ ಅವರಿಗೆ ಗೊಂದಲವಾಗಿ ಅನೇಕ ರೀತಿಯ ಗೊಂದಲಗಳು ಮತ್ತೆ ಸೃಷ್ಟಿಯಾಗುತ್ತದೆ. ಆದಕಾರಣ ನಾವು ಸದನದಿಂದ ಅಡಿಕೆ ಬೆಳೆಗಾರರ ಹಿತದೃಷ್ಟಿಯಿಂದ ಲಕ್ಷ್ಯ ಕೊಡಬೇಕಾದದ್ದು ನಮ್ಮ ಮತ್ತು ನಿಮ್ಮೆಲ್ಲರ ಬದ್ಧತೆಯಾಗಿರಬೇಕಾಗುತ್ತದೆ. ನಾವೆಲ್ಲರೂ ಒಗ್ಗಟ್ಟಿನಿಂದ ಇದರ ಬಗ್ಗೆ ರಾಜಕೀಯವನ್ನು ತರದೆ ರಾಜಕೀಯವನ್ನು ಬದಿಗಿಟ್ಟು ಬಹುಶಃ ಅವರಿಗೆ ಆತ್ಮವಿಶ್ವಾಸವನ್ನು ಮೂಡಿಸುವಂಥ ಕೆಲಸವನ್ನು ಈ ಸದನದಿಂದ ಮಾಡಬೇಕೆಂದು ಸೋದರನಾಗಿ ನಾನು ಕಳಕಳಿಯಿಂದ ಹೇಳಬಯಸುತ್ತೇನೆ. ಅದರ ಜೊತೆಯಲ್ಲಿ ಬಹುಶಃ ಇವತ್ತು ಯಾವ ಸಂಶಯವಿತ್ತು ಎಂದು ಹೇಳುವುದಾದರೆ, ನಮ್ಮ ಈ Food Safety Act ನಲ್ಲಿ ಏಕೆ ಅಡಿಕೆಯನ್ನು ಸೇರಿಸಬೇಕಿತ್ತು, ಅದನ್ನು ತೆಗೆಸಬೇಕಿತ್ತು ಎಂದು ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಹೇಳಿದರು. ಯಾರೂ ಬೇಡವೆಂದು ಹೇಳಲಿಲ್ಲ. ಪಾರ್ಲಿಮೆಂಟಿನಲ್ಲಿ ಅವರ ಪಕ್ಷದವರೆ ಎಂ.ಪಿ.ಗಳಿದ್ದರು, ಅವರುಗಳು ಅವತ್ತು ಪಾರ್ಲಿಮೆಂಟಿನಲ್ಲಿ ಮಾತನಾಡಬೇಕಿತ್ತು, ಪಾರ್ಲಿಮೆಂಟಿನಲ್ಲಿ ಅವರು ಮಾತನಾಡದೆ ಸುಮ್ಮನೆ ಕುಳಿತುಕೊಂಡು ಬಂದು ಈಗ ನಾವು ಇಲ್ಲಿ ಇವರಿಗೆ ಉತ್ತರ ಕೊಡತಕ್ಕಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇವತ್ತು Food Safety Act ಪಾರ್ಲಿಮೆಂಟಿನಲ್ಲಿ ಪಾಸ್ ಆಗಿ ಬಂದಿರುವುದರಿಂದ ಮತ್ತು ಸುಪ್ರೀಂ ಕೋರ್ಟ್ ತೀರ್ಮಾನ ಕೊಡುವಂಥದ್ದು ಆಗಿ ಈಗ ನಮಗೆ ಡೈರೆಕ್ಷನ್ ಬಂದ ಕಾರಣ ಮತ್ತು ಆರೋಗ್ಯದ ದೃಷ್ಟಿಯಿಂದಲೂ ಕೂಡ ಪ್ರಯೋಜನವಾಗುವುದರಿಂದ ಇದನ್ನು ಜಾರಿಗೆ ತಂದಿದ್ದೇವೆಯೇ ಹೊರತು ಬೇರೆ ಯಾವುದೇ ಒಂದು ಉದ್ದೇಶವಿಲ್ಲ. ಇವತ್ತು ಬಹಳಷ್ಟು ಸದಸ್ಯರ ಕೋರಿಕೆ ಏನಿದೆಯೆಂದರೆ, ನಮಗೆ ನೀವು ಟೈಂ ಕೊಡಿ, ಒಂದು ತಿಂಗಳು ಟೈಂ ಕೊಡಿ,

ಎರಡು ತಿಂಗಳು ಟೈಂ ಕೊಡಿ ಮತ್ತು ಚರ್ಚೆ ಮಾಡಿ ಎಂದು ಕೇಳಿದ್ದಾರೆ. ಈ ರೀತಿ ಟೈಂ ಕೊಡುವುದರಿಂದ ಬೇರೆ ಏನೂ ಆಗುವುದಿಲ್ಲ, ಏಕೆಂದರೆ ಇವತ್ತಲ್ಲ ನಾಳೆಯಾದರೂ ಇದು ಅನುಷ್ಠಾನವಾಗಲೇಬೇಕು. ಒಂದು ವೇಳೆ ಟೈಂ ಕೊಟ್ಟರೂ ಅಡಿಕೆ ಬೆಳೆಗಾರರಾದ ರೈತರಿಗೆ ಯಾವ ಲಾಭವೂ ಆಗುವುದಿಲ್ಲ, ಲಾಭವಾಗುವುದು ಬಹುಶಃ ಈ ಗುಟ್ಕಾ ಲಾಬಿಗೆ, ಏಕೆಂದರೆ ಅವರಲ್ಲಿರುವಂಥ ಸರಕನ್ನು ಮಾರಾಟ ಮಾಡಬೇಕು, ಮತ್ತೆ ಸಮಾಜದಲ್ಲಿ ಕ್ಯಾನ್ಸರ್ ರೋಗವನ್ನು ಹಲವಾರು ಯುವಕರಿಗೆ ಬರುವಂತೆ ಮಾಡಿ ಅವರನ್ನು ಕಳೆದುಕೊಳ್ಳುವಂಥ ಪರಿಸ್ಥಿತಿ ನಿರ್ಮಾಣ ಮಾಡುತ್ತಾರೆಯೇ ಹೊರತು ಈ ಟೈಂ ಕೊಡುವುದರಿಂದ ಯಾವ ಉತ್ತಮ ಪ್ರಯೋಜನವೂ ಆಗುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಿಮಗೆ ಮನದಟ್ಟು ಮಾಡಲು ಬಯಸುತ್ತೇನೆ. ಆದಕಾರಣ ಈ ವಿಚಾರದ ಬಗ್ಗೆ ಬೇರೆ ಬೇರೆ ರೀತಿಯಲ್ಲಿ ಬಹಳಷ್ಟು ಚರ್ಚೆಯಾಗಿದೆ. ಚರ್ಚೆಯಾದಂಥ ಸಂದರ್ಭದಲ್ಲಿ ಆಕಾಶವೇ ಭೂಮಿ ಮೇಲೆ ಬೀಳುತ್ತದೆಯೇನೋ ಎನ್ನುವಂತೆ ಕೆಲವರು ಅಭಿಪ್ರಾಯ ವ್ಯಕ್ತಮಾಡಿ ಚರ್ಚೆ ಮಾಡಿದ್ದಾರೆ. ಬಹುಶಃ ನಾವೆಲ್ಲರೂ ಪ್ರಾಸ್ತಾವಿಕವಾಗಿ ಅರ್ಥಮಾಡಿಕೊಳ್ಳಬೇಕು. ಗುಟ್ಕಾ ನಿಷೇಧ ಮಾಡುವ ಮುಂಚೆ ಅಡಿಕೆಗೆ ಯಾವ ರೇಟ್ ಇತ್ತು ಮತ್ತು ಇವತ್ತು ಯಾವ ರೇಟ್ ಇದೆ ಎಂಬ ಬಗ್ಗೆ ಚರ್ಚೆ ಮಾಡಿ ಆ ರೇಟ್‌ನ್ನು ಯಾವ ರೀತಿಯಲ್ಲಿ ಮೇಲಕ್ಕೆ ತರಬಹುದು ಎಂಬ ಬಗ್ಗೆ ಚರ್ಚೆ ಮಾಡಿ ಸಲಹೆ ಕೊಡುವಂಥ ಕೆಲಸ ಮಾಡಬಹುದು. ಆದರೆ ಅದನ್ನೊಂದನ್ನು ಬಿಟ್ಟು ಬೇರೆಲ್ಲವನ್ನೂ ನಾವಿಲ್ಲಿ ಚರ್ಚೆ ಮಾಡಿದ್ದೇವೆ. ಇವತ್ತು ಅಲ್ಲಿ ಎ.ಪಿ.ಎಂ.ಸಿ. ಯಾರ್ಡ್ ಏನಿದೆ ಆ ಎ.ಪಿ.ಎಂ.ಸಿ.ಯಾರ್ಡ್‌ನಿಂದ ರೇಟ್‌ಗಳ ಬಗ್ಗೆ ವಿವರಗಳನ್ನು ತರಬೇಕಾಗುತ್ತದೆ. ಇವತ್ತು ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಯಾವ ಯಾವ ರೇಟ್ ಇದೆ ಎಂಬ ಬಗ್ಗೆ ವಿವರಗಳನ್ನು ನಮ್ಮ ಅಧಿಕಾರಿಗಳು ನಮಗೆ ಕೊಟ್ಟಿದ್ದಾರೆ. ಗುಟ್ಕಾ ನಿಷೇಧ ಮಾಡುವ ಮುಂಚೆ 27 ನೇ ತಾರೀಖಿಗೆ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಅಡಿಕೆಗೆ ಮ್ಯಾಕ್ಸಿಮಮ್ ರೇಟ್ 26 ಸಾವಿರವಿತ್ತು. ನಿನ್ನೆಯ ರೇಟ್ ಅಂದರೆ ಮೂರನೇ ತಾರೀಖಿಗೆ ಮತ್ತು ಬಹುಶಃ ಇವತ್ತು 25 ಸಾವಿರ ರೂ.ಗಳ ರೇಟ್ ಇದೆ. ಇದು ನಾನು ಹೇಳುತ್ತಿರುವ ರೇಟ್ ಅಲ್ಲ, ಎ.ಪಿ.ಎಂ.ಸಿ. ಯಿಂದ ಅಧಿಕಾರಿಗಳು ಕೊಟ್ಟಿರುವ ಮಾಹಿತಿಯನ್ನು ನಿಮಗೆ ಹೇಳುತ್ತಿದ್ದೇನೆ. ಆದುದರಿಂದ ಈ ರೇಟ್ ಬಗ್ಗೆ ನಾವು ಚರ್ಚೆ ಮಾಡೋಣ. ಇವತ್ತು ನಾವು ಮತ್ತು ನೀವೆಲ್ಲರೂ ಒಪ್ಪಿಕೊಳ್ಳಬೇಕು, ನಿಕೋಟಿನ್ ಮತ್ತು ಟೊಬ್ಯಾಕೊ ಇರುವಂಥ ಗುಟ್ಕಾಗಳಿಗೆ ನಾವುಗಳೆಲ್ಲರೂ ಅವಕಾಶ ಮಾಡಿಕೊಡಬಾರದು. ಕೆಲವರು ಹೇಳುತ್ತಾರೆ, ಬಹುಶಃ ಸ್ವೀಟ್ ಇಲ್ಲದೆ ಕುಡಿದರೆ ಏನು ಪ್ರಯೋಜನ? ಗುಟ್ಕಾ ಇಲ್ಲದೆ ತಿಂದರೂ ಏನು ಪ್ರಯೋಜನವಾಗುತ್ತದೆ

ಎಂದು ಹೇಳಬಹುದು. ಬಹುಶಃ ಎಲ್ಲರೂ ಅರ್ಥ ಮಾಡಿಕೊಳ್ಳಬೇಕು, ನಿಮ್ಮ ಮಕ್ಕಳು, ನಿಮ್ಮ ಸೋದರರು ಅಥವಾ ನಮ್ಮ ಸೋದರರು, ನಮ್ಮ ಮಕ್ಕಳು ಇದನ್ನು ತಿಂದರೆ ಯಾವ ಪರಿಣಾಮವಾಗುತ್ತದೆ ಎಂದು ಕಿದ್ವಾಯಿ ಮತ್ತು ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಒಮ್ಮೆ ನೀವು ಹೋಗಿ ನೋಡಿ, ಆಗ ನಿಮ್ಮ ಕಣ್ಣಲ್ಲಿ ನೀರು ಬರುತ್ತದೆ ಎಂದು ನಾನು ಇವತ್ತು ಹೇಳಬಯಸುತ್ತೇನೆ. ಇದನ್ನು ನೀವು ಅರ್ಥ ಮಾಡಿಕೊಳ್ಳಿ. ನೀವು ಇವತ್ತು ಬದುಕಿಸುವಂಥ ಕೆಲಸವನ್ನು ಮಾಡಿ. ಇವತ್ತು ರೇಟ್ ಬಗ್ಗೆ ಮತ್ತು ಆರ್ಥಿಕವಾಗಿ ಇವತ್ತಲ್ಲ ನಾಳೆ ನಾವು ಸಬಲರಾಗಬಹುದು. ನಾವು ನಮ್ಮ ಸಮಾಜ ಮತ್ತು ನಮ್ಮ ರಾಜ್ಯದಿಂದ ಕಳೆದುಕೊಂಡ ಸೋದರ ಸೋದರಿಯರನ್ನು ಮತ್ತೆ ನಾವು ಪಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆನ್ನುವುದನ್ನು ಅರ್ಥ ಮಾಡಿಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ. ಯಾರಾದರೂ ತಂದೆ ತಾಯಿಯವರು ಕಷ್ಟಪಟ್ಟು ಮಕ್ಕಳನ್ನು ಬೆಳೆಸಿ ಮೇಲಕ್ಕೆ ತಂದಮೇಲೆ ಅಂಥ ಮಕ್ಕಳು ಇಂಥ ಗುಟ್ಕಾ ಸೇವನೆಯಿಂದ ಏನಾದರೂ ತೀರಿಹೋದರೆ ಆ ತಂದೆ ತಾಯಿಗೆ ಆದ ನಷ್ಟವನ್ನು ಯಾರೂ ಕೂಡ ಭರಿಸುವುದಕ್ಕೆ ಸಾಧ್ಯವಿಲ್ಲ. ಅಡಿಕೆ ಬೆಳೆಗಾರರಿಗೆ ನಷ್ಟವಾದರೆ,,,

ಶ್ರೀ **ಆರ್.ಅಶೋಕ್** :- ಕಿದ್ವಾಯಿಯಲ್ಲಿ ಇರುವವರೆಲ್ಲರೂ ಕೇವಲ ಗುಟ್ಕಾ ತಿಂದು ರೋಗಿಗಳಾಗಿದ್ದಾರೆಯೇ?

(ಗೊಂದಲ)

ಅಧ್ಯಕ್ಷರು :- ಎಲ್ಲರೂ ಹೀಗೆ ಒಟ್ಟಿಗೆ ಮಾತನಾಡಬೇಡಿ. ಮಾನ್ಯ ಸಚಿವರು ಹೇಳುವುದನ್ನೆಲ್ಲ ಹೇಳಿ ಪೂರ್ಣ ಮಾಡಲಿ. ತದನಂತರ ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ **ವಿಶ್ವೇಶ್ವರ ಹೆಗಡೆ, ಕಾಗೇರಿ** :- ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ತಪ್ಪು ಮಾಹಿತಿಯನ್ನು ಹೇಳುತ್ತಿದ್ದಾರೆ. ಐ.ಟಿ.ಸಿ. ಲಾಬಿಗೆ ಸರ್ಕಾರ ಮಣಿದಿದೆ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು :- ಮಾನ್ಯ ಕಾಗೇರಿಯವರೆ, ಮೊದಲು ಮಾನ್ಯ ಸಚಿವರು ಉತ್ತರ ಪೂರ್ಣ ಮಾಡಲಿ. ಆಮೇಲೆನೀವು ಕ್ಲಾರಿಫಿಕೇಶನ್ ಕೇಳಿ.

ಶ್ರೀ **ಬಸವರಾಜ ಬೊಮ್ಮಾಯಿ** :- ಕಿದ್ವಾಯಿಯಲ್ಲಿ ಇರುವ ರೋಗಿಗಳಲ್ಲಿ 50 ಪರ್ಸೆಂಟ್ ಮಹಿಳೆಯರಿಗೆ ಕ್ಯಾನ್ಸರ್ ಬಂದಿದೆ. ಅವರೆಲ್ಲರೂ ಗುಟ್ಕಾ ತಿನ್ನುತ್ತಾರೆಯೆ?

ಅಧ್ಯಕ್ಷರು :- ಮೊದಲು ಮಾನ್ಯ ಸಚಿವರು ಉತ್ತರ ಪೂರ್ಣ ಮಾಡಲಿ. ಆಮೇಲೆ ನೀವು ಕ್ಲಾರಿಫಿಕೇಶನ್ ಕೇಳಿ;.

ಶ್ರೀ ಬಸವರಾಜ ಬೊಮ್ಮಾಯಿ :– ತಪ್ಪು ಮಾಹಿತಿಯನ್ನು ಹೇಳಿ ಮಾನ್ಯ ಸಚಿವರು ಸದನದ ದಾರಿ ತಪ್ಪಿಸುತ್ತಿದ್ದಾರೆ.

ಅಧ್ಯಕ್ಷರು :– ನೋಡಿ ನೀವೆಲ್ಲರೂ ಇದುವರೆಗೆ ಹೇಳಿದ್ದನ್ನು ನಾನು ಕೇಳಿದ್ದೇನೆ. ಈಗ ಮಾನ್ಯ ಸಚಿವರು ಹೇಳುವುದನ್ನು ನೀವು ಕೇಳಿ. ಆಮೇಲೆ ಕ್ಲಾರಿಫಿಕೇಶನ್ ಕೇಳುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ :– ಗುಟ್ಕಾ ಬ್ಯಾನ್ ಮಾಡಿದರೂ ಕೂಡ ಮಾರ್ಕೆಟ್‌ನಲ್ಲಿ ಗುಟ್ಕಾ ಸಿಗುತ್ತಿದೆ. ಅದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಹೇಳಿ.

ಅಧ್ಯಕ್ಷರು :– ಅದನ್ನು ನೀವು ಆಮೇಲೆ ಕೇಳಿ.

ಶ್ರೀ ಬಸವರಾಜ ಬೊಮ್ಮಾಯಿ :– ಇವತ್ತೂ ಕೂಡ ಮಾರ್ಕೆಟ್‌ನಲ್ಲಿ ಗುಟ್ಕಾ ಸಿಗುತ್ತಿದೆ. ನಾನು ನಿಮಗೆ ಕೊಡಿಸುತ್ತೇನೆ ಬನ್ನಿ. ಗುಟ್ಕಾ ಬ್ಯಾನ್ ಮಾಡಿದರೂ ಕೂಡ ಮಾರ್ಕೆಟ್‌ನಲ್ಲಿ ಗುಟ್ಕಾ ಸಿಗುತ್ತಿದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ.

ಅಧ್ಯಕ್ಷರು :– ಬೊಮ್ಮಾಯಿಯವರೆ, ಇದನ್ನೆಲ್ಲ ಆಮೇಲೆ ಕೇಳಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ :– ಮೂಲೆ ಮೂಲೆಗಳ ಅಂಗಡಿಗಳಲ್ಲಿ ಗುಟ್ಕಾ ಇವತ್ತಿಗೂ ಸಿಗುತ್ತಿದೆ. ಅದರ ಬಗ್ಗೆ ಏನು ಮಾಡುತ್ತೀರಿ?

ಅಧ್ಯಕ್ಷರು :– ಬೊಮ್ಮಾಯಿಯವರೆ ಪ್ಲೀಸ್, ನೀವು ಆಮೇಲೆ ಇದರ ಬಗ್ಗೆ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಕೊಡುವಂತಹ ಸಂದರ್ಭದಲ್ಲಿ ತಾಳ್ಮೆಯಿಲ್ಲದವರು ಮಾತನಾಡುವುದು ಸ್ವಾಭಾವಿಕ! ಅದಕ್ಕೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ನಾನು ಹೇಳುವುದಿಷ್ಟೇ, ಜವಾಬ್ದಾರಿ ಸದಸ್ಯರಾಗಿದ್ದುಕೊಂಡು ಎರಡು ಲಕ್ಷ ಜನರನ್ನು ನಿಭಾಯಿಸುವಂತಹವರು. ಬಹಳಷ್ಟು ತಾಳ್ಮೆಯಿಂದ ಒಬ್ಬರು ಹೇಳಿದ್ದನ್ನು ಕೇಳುವಂತಹ ಸಂಸ್ಕೃತಿಯನ್ನು ಇಟ್ಟುಕೊಳ್ಳಬೇಕೆಂದು ಹೇಳುವುದಕ್ಕೆ ನಾನು ಇಚ್ಛಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ನೀವು ಸೀನಿಯರ್ ಮೆಂಬರ್, ದಯವಿಟ್ಟು ತಾವು ಆಮೇಲೆ ಕೇಳಿ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, 33 ವರ್ಷದ ಹಿಂದೆ ಗುಟ್ಕಾ ಬಂತು, ಆಗ ಕ್ಯಾನ್ಸರ್ ಬರುತ್ತದೆಂದು ಗೊತ್ತಿರಲಿಲ್ಲವೇ? Chain smoke

ಮಾಡುವವರಿಗೆ Heart attack ಆಗುತ್ತದೆಂದು ಹೇಳುತ್ತಾರೆ. ಹಾಗಿದ್ದ ಮೇಲೆ ಏಕೆ ಸಿಗರೇಟ್ ನಿಷೇಧ ಮಾಡುವುದಿಲ್ಲ? ಸಾರಾಯಿ ಕುಡಿಯುವವರಿಗೆಲ್ಲ Liver cancer ಬರುತ್ತದೆ, ಸಾರಾಯಿ, Brandy, whisky ಏಕೆ ನಿಷೇಧ ಮಾಡುವುದಿಲ್ಲ?

ಅಧ್ಯಕ್ಷರು : ಲಿಂಬಾವಳಿಯವರೆ, ದಯವಿಟ್ಟು ಅವರು ಹೇಳಲಿ, ನೀವು ಆಮೇಲೆ ಕೇಳಿ. ನೀವು Senior Member ಇದ್ದೀರಿ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಅಭಿನಂದಿಸುತ್ತೇನೆ. ಆದರೆ ಇಲ್ಲಿ ತಪ್ಪು ಮಾಹಿತಿ ಕೊಡಬಾರದು.

ಅಧ್ಯಕ್ಷರು : ನೀವು ಆಮೇಲೆ ಕೇಳಿ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ನಾನು ತಪ್ಪು ಮಾಹಿತಿ ಕೊಟ್ಟೆ ಎಂದು ನಮ್ಮ ಸದಸ್ಯರಿಗೆ ಸಂಶಯವಿದೆ. ಇವತ್ತು ನಾನು ಹೇಳಿದಂತಹ ಸಂದರ್ಭದಲ್ಲಿ ನಾನು ತಪ್ಪು ಮಾಹಿತಿ ಕೊಡಲಿಲ್ಲ. ಹಿಂದಿನ Petitions Committee ಅಧ್ಯಕ್ಷರು, ಈ ರಾಜ್ಯದ ವಿಧಾನ ಸಭೆಯ ಉಪಾಧ್ಯಕ್ಷರಾಗಿದ್ದಂತಹ ಸನ್ಮಾನ್ಯ ಯೋಗೀಶ್‌ಭಟ್‌ರವರ ರಿಪೋರ್ಟ್ ನನ್ನ ಕೈಯಲ್ಲಿ ಇದೆ. ಈ ವರದಿಯಲ್ಲಿ ಅವರು ಏನು ಹೇಳಿದ್ದಾರೆಂದರೆ, ಪ್ರತಿ ಆರು ಸೆಕೆಂಡಿಗೆ ಒಬ್ಬರಂತೆ ನಮ್ಮ ದೇಶದಲ್ಲಿ ಸಾವನ್ನಪ್ಪುವಂತಹ ಪರಿಸ್ಥಿತಿಯಾಗಿದೆ. ಇದು ಗುಟ್ಕಾಗೆ ಮತ್ತು ತಂಬಾಕಿಗೆ ಸಂಬಂಧಪಟ್ಟಂತಹ ವರದಿ. ನಾನು ಹೇಳುವುದಿಷ್ಟೇ, ಆರು ಅಲ್ಲ ಕನಿಷ್ಠ ಒಂದನ್ನಾದರೂ ಕೂಡ ನಾವು ಕಳೆಯದಂತೆ ಕರ್ನಾಟಕವನ್ನು ಆರೋಗ್ಯವಂತ ಸಮಾಜವನ್ನಾಗಿ ನಿರ್ಮಾಣ ಮಾಡುವಂಥದ್ದು ನಮ್ಮ ರಾಜ್ಯದ ಕಾಂಗ್ರೆಸ್ ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ನಮಗೆ ಗುಟ್ಕಾ ನಿಷೇಧದಿಂದ ಅಡಿಕೆ ಬೆಲೆಯಲ್ಲಿ ನಷ್ಟವಾಗುತ್ತಿದೆ ಎಂದು ಏನು ಸಂಶಯವಿದೆ, ನಾನು ನನ್ನ ಅನಿಸಿಕೆಯನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಗುಟ್ಕಾ ಬರುವುದಕ್ಕೆ ಮುಂಚೆ ಕೂಡ ಈ ದೇಶದಲ್ಲಿ ಅಡಿಕೆ ಇತ್ತು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ರೆಕಾರ್ಡ್‌ನಲ್ಲಿ ತಪ್ಪು ಹೋಗಬಾರದು. ಮಾನ್ಯ ಆರೋಗ್ಯ ಮಂತ್ರಿಗಳು ಮಾನ್ಯ ಯೋಗೀಶ್ ಭಟ್‌ರವರ ಅಧ್ಯಕ್ಷತೆಯಲ್ಲಿದ್ದಂತಹ ಕಮಿಟಿ ಬಗ್ಗೆ ಹೇಳುತ್ತಿದ್ದಾರೆ. ಅದು ಯಾವುದಕ್ಕೆ ಕಮಿಟಿ ಮಾಡಿದ್ದರು? ತಂಬಾಕು ಉತ್ಪನ್ನಗಳ ನಿಷೇಧ ಎಂದರೆ ಎಲ್ಲಾ Product ಬಂತು, ಸಿಗರೇಟು ಕೂಡ ಬಂತು. ಅದರ ಬಗ್ಗೆ ಅವರು

ವರದಿ ಕೊಟ್ಟಿದ್ದನ್ನು ತೆಗೆದುಕೊಂಡು ಇವರು ಕೇವಲ ಗುಟ್ಕಾಗೆ ಮಾತ್ರ ಸೀಮಿತವಾಗಿ ಹೇಳಿ ತಪ್ಪು ಮಾಹಿತಿ ಕೊಡುತ್ತಿದ್ದಾರೆ.

ಅಧ್ಯಕ್ಷರು : ಅದನ್ನು mention ಮಾಡಿ, ಅದರಲ್ಲಿರುವ relevant portion ಓದಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಅವರ ಉತ್ತರದಲ್ಲಿ ತಂಬಾಕು ಉತ್ಪನ್ನಗಳನ್ನು ನಿಷೇಧಿಸುವ ಕುರಿತು ಎಂದು ಇದೆ. ಸುಮ್ಮನೆ ಏನೋ ಒಂದು refer ಮಾಡಿ, general issue ಮಾಡಿ ಆರೋಗ್ಯ ಮಂತ್ರಿಗಳು ಸದನಕ್ಕೆ ತಪ್ಪು ಮಾಹಿತಿ ಕೊಡುವುದು ಸರಿಯಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಹಾಗಾದರೆ ಸಿಗರೇಟ್ ನಿಷೇಧ ಮಾಡಿ.

ಅಧ್ಯಕ್ಷರು : ಜಗದೀಶ್ ಶೆಟ್ಟರ್‌ರವರೇ, ಅವರು ಹೇಳುವುದನ್ನೆಲ್ಲ ಹೇಳಲಿ, ಆಮೇಲೆ ಅದನ್ನೇ ಕೇಳಿ.

ಶ್ರೀ ಜಗದೀಶ್ ಶೆಟ್ಟರ್ : ಅದು ರೆಕಾರ್ಡ್‌ಗೆ ಹೋಗಿಬಿಡುತ್ತದೆ.

(ಗೊಂದಲ)

ಅಧ್ಯಕ್ಷರು : Meaningful debate ಇರಬೇಕು. ಅವರು ಮೊದಲು ಹೇಳಲಿ. ಆಮೇಲೆ ಕೇಳಿ. ಅದಕ್ಕೆ ಉತ್ತರ ಹೇಳುತ್ತಾರೆ.

ಶ್ರೀ ವೈ.ಎಸ್.ವಿ.ದತ್ತ : ಉತ್ತರ ಆಗಿಲ್ಲವೇ?

ಅಧ್ಯಕ್ಷರು : ಇಲ್ಲ, ಆಗಿಲ್ಲ.

ಶ್ರೀ ಅರವಿಂದ ಲಿಂಬಾವಳಿ : ಉತ್ತರ ಮುಗಿದಿದೆ.

ಶ್ರೀ ವೈ.ಎಸ್.ವಿ.ದತ್ತ : ಉತ್ತರ ಮುಗಿಯಿತ್ತೇ? ಅಥವಾ ಇನ್ನೂ ಇದೆಯೇ?

ಅಧ್ಯಕ್ಷರು : ಇಲ್ಲ. ಉತ್ತರ ಮುಗಿದಿಲ್ಲ. ಅವರು complete ಮಾಡಲಿ.

ಶ್ರೀ ಅರವಿಂದ ಲಿಂಬಾವಳಿ : ನಮಗೆ ಕೊಟ್ಟಿರುವಂತಹ ಉತ್ತರವನ್ನು ಮಾನ್ಯ ಆರೋಗ್ಯ ಸಚಿವರು ಓದಿದ್ದಾರೆ.

ಅಧ್ಯಕ್ಷರು : ನೀವು senior member ಇದ್ದೀರಿ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಈಗ ಅವರು ಏನು ಉತ್ತರ ಕೊಟ್ಟಿದ್ದಾರೆ, ಅದನ್ನು ಓದಿದ್ದಾರೆ. ನಮಗೆ clarification ಕೇಳಿದರೆ ಕೊಟ್ಟು, ಆಮೇಲೆ ಅವರು ಉತ್ತರ ಅಥವಾ ಭಾಷಣ ಮಾಡಿದರೆ ಅಭ್ಯಂತರವಿಲ್ಲ.

ಅಧ್ಯಕ್ಷರು : ನೀವು clarification ಆಮೇಲೆ ಕೇಳಿ.

ಶ್ರೀ ಅರವಿಂದ ಲಿಂಬಾವಳಿ : ಜಯದೇವ ಆಸ್ಪತ್ರೆಯಲ್ಲಿರುವವರೆಲ್ಲ cancer patients ಕಿದ್ವಾಯ್‌ನಲ್ಲಿರುವವರೂ ಕೂಡ ಇದೇ patient ಗಳೇ ಎಂದು ಉತ್ತರ ಹೇಳಿದರೆ ನಾವ್ಯಾರೂ ಕೂಡ ಆ ರೀತಿ ಉತ್ತರವನ್ನು ಮಾನ್ಯ ಆರೋಗ್ಯ ಸಚಿವರಿಂದ ನಿರೀಕ್ಷೆ ಮಾಡಿಲ್ಲ.

ಅಧ್ಯಕ್ಷರು : ಅವರು ಹೇಳಿದ್ದೆಲ್ಲ ಒಪ್ಪಬೇಕೆಂದು ಇಲ್ಲ, ನೀವು ಏನು clarification ಬೇಕೋ ಕೇಳಿ, ನೀವು ಹೇಳಿದಂತೆ ಉತ್ತರ ಕೊಡುವುದಕ್ಕೆ ಬರುವುದಿಲ್ಲ. ಅವರು ಏನು ಉತ್ತರ ಕೊಡಬೇಕೋ ಕೊಡುತ್ತಾರೆ. ನೀವು ಸಮಾಧಾನವಾಗಿ clarification ಕೇಳಿರಿ.

ಶ್ರೀ ಅರವಿಂದ ಲಿಂಬಾವಳಿ : ಇಲ್ಲ, ಉತ್ತರ ಮುಗಿದಿದೆ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ಅವರು writing ನಲ್ಲಿ ಕೇಳಿದಂತಹ ಪ್ರಶ್ನೆಗೆ ನಾವು writingನಲ್ಲಿ ಉತ್ತರ ಕೊಟ್ಟಿದ್ದೇವೆ. ಅದರ ಬಗ್ಗೆ ಚರ್ಚೆ ಮಾಡುವಾಗ ಬಹಳಷ್ಟು ಸಂಶಯವಿತ್ತು, ಅದನ್ನು ಬಗೆಹರಿಸುವುದಕ್ಕೆ ತಮ್ಮ permission ಕೇಳಿ ನಾನು ಹೇಳುತ್ತೇನೆ. ಇವತ್ತು ಚರ್ಚೆ ಏನಿದೆ ಎಂದರೆ ಗುಟ್ಕಾ ರದ್ದು ಮಾಡುತ್ತಿರುವುದರಿಂದ ಅಡಿಕೆ ದರ ಬಹಳಷ್ಟು ಕಡಿಮೆಯಾಗುತ್ತಿದೆ, ಅದರಿಂದ ರೈತರು ಕಂಗಾಲಾಗುತ್ತಿದ್ದಾರೆಂದು ಹೇಳಿದರು. ಗುಟ್ಕಾ ಇಲ್ಲದಂತಹ ಸಂದರ್ಭದಲ್ಲಿ ಕೂಡ ಅಡಿಕೆ ರೇಟ್ ಇತ್ತು. ಗುಟ್ಕಾ ಬಂದನಂತರ ಕೂಡ ಅಡಿಕೆ ಜಾಸ್ತಿ ರೇಟ್ ಇರಲಿಲ್ಲ. ಅಡಿಕೆ ರೇಟ್ ಇಲ್ಲದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗ ಹೋಗಿ ಶ್ರೀಮತಿ ಸೋನಿಯಾ ಗಾಂಧಿ ಮತ್ತು ಶ್ರೀ ಮನಮೋಹನ್ ಸಿಂಗ್‌ರವರನ್ನು ಭೇರಿಯಾದಾಗ, ಶ್ರೀ ಮನಮೋಹನ್ ಸಿಂಗ್ ಸರ್ಕಾರ 70% ಇದ್ದಂತಹ import tax ಅನ್ನು 120% ಎಂದು ಮಾಡಿದ ಕಾರಣದಿಂದ ಇವತ್ತು ಅಡಿಕೆ ರೇಟ್ ಜಾಸ್ತಿಯಾಯಿತೇ ಹೊರತು ಗುಟ್ಕಾ ಬಂದ ಕಾರಣದಿಂದ ಅಲ್ಲವೆಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಹಾಗಾಗಿ ನಾಳೇ ಏನಾದರೂ ಹೆಚ್ಚುಕಡಿಮೆಯಾದರೂ ಕೂಡ ಬೆಳೆಗಾರರ ರಕ್ಷಣೆಗೆ ಸರ್ಕಾರ ಬಂದು ನಿಲ್ಲುತ್ತದೆ. ಅವರು ಮಾತನಾಡುವಾಗ ಕೇವಲ ಸುಪ್ರೀಂ ಕೋರ್ಟ್ ಕಡೆ ಕೈ ತೋರಿಸಿ ಸರ್ಕಾರ ಕೈಬಿಟ್ಟರೆ ಆಗುವುದಿಲ್ಲವೆಂದು ಹೇಳಿದರು. ನಮಗೆ ವಿಶ್ವಾಸವಿದೆ. ಈ ರಾಜ್ಯದ ಮುಖ್ಯಮಂತ್ರಿಯಾದಂತಹ ಶ್ರೀಮಾನ್ ಸಿದ್ದರಾಮಯ್ಯ ಮತ್ತು ಈ ಸರ್ಕಾರ ಖಂಡಿತವಾಗಿ ಕೈ ಬಿಡುವುದಕ್ಕೆ ಹೋಗುವುದಿಲ್ಲ. ಅಡಿಕೆ ಬೆಳೆಗಾರರಿಗೆ ಏನಾದರೂ ತೊಂದರೆಯಾದರೆ ಅವರ

ಕೈಯನ್ನು ಹಿಡಿದು ಮತ್ತೆ ಮೇಲೆತ್ತುವಂತಹ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತದೆಂದು ಸ್ಪಷ್ಟವಾದ ಮಾತನ್ನು ಇವತ್ತು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, ಈ ಉತ್ತರ ಆರೋಗ್ಯ ಮಂತ್ರಿಗಳು ಹೇಳುವುದಲ್ಲ. ಇದು ಆರೋಗ್ಯ ಮಂತ್ರಿಗಳಿಗೆ ಸಂಬಂಧಪಟ್ಟಿದ್ದಲ್ಲ. ಆರೋಗ್ಯ ಮಂತ್ರಿಗಳಿಂದ ನಾವು ಈ ಉಪದೇಶ ಕೇಳಲ್ಲ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಅವರು ಉತ್ತರ ಮುಗಿಸಲಿ.

ಶ್ರೀ ವೈ.ಎಸ್.ವಿ.ದತ್ತ : ಒಂದು ನಿಮಿಷ ಅವರು yield ಆಗಲಿ.

ಅಧ್ಯಕ್ಷರು : ದತ್ತರವರೇ, ದಯವಿಟ್ಟು ಅವರು ಪೂರ್ತಿ ಮಾಡಲಿ, ನಿಮಗೆ ಏಕೆ? Time ಇದೆ. ನಿಮಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ಅಡಿಕೆ ಬೆಳೆಗಾರರಿಗೆ ಏನಾದರೂ ತೊಂದರೆಯಾದರೆ, ಇದರಲ್ಲಿ ಏನಾದರೂ ಏರುಪೇರಾದರೆ, ಬಹುಶಃ ಸ್ವಾಭಾವಿಕವಾಗಿ ಈ ರೀತಿ ಏರುಪೇರು ಒಂದು ವಾರ ಅಥವಾ ಒಂದು ತಿಂಗಳು ಆಗಬಹುದು. ಅದರ ನಂತರ ಗುಟ್ಕಾ ನಿಷೇಧದಿಂದ ಏರುಪೇರಾದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಅಡಿಕೆ ಬೆಳೆಗಾರರ ರಕ್ಷಣೆಗೆ ಸರ್ಕಾರ ಬಂದು ನಿಲ್ಲುತ್ತದೆ. ಏನಾದರೂ ಹೆಚ್ಚು ಕಡಿಮೆ ಆದಂತಹ ಸಂದರ್ಭದಲ್ಲಿ ಆ ಪ್ರದೇಶಕ್ಕೆ ಸಂಬಂಧಪಟ್ಟ ಜವಾಬ್ದಾರಿಯುತ ಪ್ರತಿನಿಧಿಗಳನ್ನು, ಅಡಿಕೆ ಬೆಳೆಗಾರರ ಮುಖಂಡರನ್ನು ಕರೆದು ಚರ್ಚೆ ಮಾಡಿ ಮತ್ತೆ ಉತ್ತಮ ರೀತಿಯಲ್ಲಿ ಬೆಲೆ ಬರುವಂತೆ ಮಾಡುವ ಬಗ್ಗೆ ಮಾನ್ಯ ಸಿದ್ಧರಾಮಯ್ಯನವರು ಮಾಡುತ್ತಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ದತ್ತರವರೇ ಕೇಳಿ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಒಂದು clarification ಇದೆ, ಕೇಳುತ್ತೇನೆ. ನಾನು ಒಂದು ಅಂಶ ಹೇಳಿದ್ದೆ. ಯಾವ್ಯಾವ ವಸ್ತುಗಳಲ್ಲಿ ವಿಷಕಾರಕ ಅಂಶಗಳಿವೆ ಎಂದು ಸರ್ಕಾರ ಪಟ್ಟಿ ಮಾಡಿದೆಯೇ ಎಂದು ಕೇಳಿದ್ದೆ. ಯಾವ್ಯಾವ ಆಹಾರ ಪದಾರ್ಥಗಳಲ್ಲಿ ವಿಷಕಾರಕ ಅಂಶ ಸೇರ್ಪಡೆಯಾಗುತ್ತಿದೆ, ಅದನ್ನೆಲ್ಲ ಜನರ ಆರೋಗ್ಯ ದೃಷ್ಟಿಯಿಂದ ನಿಷೇಧ ಮಾಡುವಂತಹ ಕೆಲಸವನ್ನು ಆರೋಗ್ಯ ಸಚಿವರು ಮಾಡಬೇಕು. ಅವರ ಮಾತಿನಲ್ಲಿ ಪ್ರಾಮಾಣಿಕತೆ ಇದೆ, ನಾನು ಅವರಿಗೆ ಅಭಿನಂದಿಸುತ್ತೇನೆ. ಆ ಪ್ರಾಮಾಣಿಕತೆ ಕೇವಲ ಗುಟ್ಕಾ ನಿಷೇಧಕ್ಕೆ ಮಾತ್ರ ಸೀಮಿತವಾಗಬಾರದು. ಯಾವ್ಯಾವ ವಸ್ತುವಿನಿಂದ ಆರೋಗ್ಯಕ್ಕೆ ಹಾನಿಯಾಗುತ್ತಿದೆ,

ಅವೆಲ್ಲದರ ಮೇಲೆ ಪ್ರಯೋಗವಾಗಬೇಕು. ಆ ರೀತಿ ಪ್ರಯೋಗವಾದಾಗ ಮಾತ್ರ ಆ ಪ್ರಾಮಾಣಿಕತೆಗೆ ಪರಿಪೂರ್ಣತೆ ಬರುತ್ತದೆ.

(ಗೊಂದಲ)

ಅಧ್ಯಕ್ಷರು: ಪೂಜಾರ್‌ರವರೆ, ನೀವು ಮಾತನಾಡಬೇಡಿ, ಕುಳಿತುಕೊಳ್ಳಿರಿ.

(ಗೊಂದಲ)

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೇ, ಈಗ ಸುಪ್ರೀಂ ಕೋರ್ಟ್ ನಮ್ಮನ್ನು ಎಚ್ಚರಿಸಬೇಕೆಂದರೆ ನಾವೆಲ್ಲ ಎಚ್ಚರ ತಪ್ಪಿದ್ದೇವೆಂದು ಆಗಿಬಿಡುತ್ತದೆ. ಈಗ ಪ್ರತಿಯೊಂದು ವಿಚಾರದಲ್ಲೂ ಸುಪ್ರೀಂ ಕೋರ್ಟ್ ಎಚ್ಚರಿಸಬೇಕೆಂದರೆ ಇಲ್ಲಿ ಕುಳಿತಿರುವವರೆಲ್ಲರೂ ನಾವು ಕುಂಭಕರ್ಣ ನಿದ್ದೆಯಲ್ಲಿದ್ದೇವೆ ಅಥವಾ ಎಚ್ಚರ ತಪ್ಪಿದ್ದೇವೆನ್ನುವ ಭಾವನೆ ಬರಬಾರದು. Junk food ನಲ್ಲಿ ವಿಷಕಾರಕ ಅಂಶವಾದ ನಿಕೋಟಿನ್ ಇದೆ. ಇದರ ಹಾವಳಿ ಬೆಳೆಯುವ ಮಕ್ಕಳು ಮತ್ತು ಯುವ ಜನಾಂಗದ ಮೇಲೆ ಪರಿಣಾಮ ಬೀರುತ್ತಿರುವುದು ನಮಗೆಲ್ಲ ಗೊತ್ತಿದೆ. pepsi, cola ಆರೋಗ್ಯದ ಮೇಲೆ ಎಷ್ಟು ಪರಿಣಾಮ ಬೀರುತ್ತದೆಂದು ಒಂದು ದೊಡ್ಡ ಚರ್ಚೆಯಾಗಿದೆ ಮತ್ತು ವಾಸ್ತವಿಕವಾಗಿ ದೃಢಪಟ್ಟಿದೆ. ಅದನ್ನು ನಿಷೇಧ ಮಾಡುವಂತಹ ಕ್ರಮವನ್ನು ಇವತ್ತಿನವರೆಗೂ ಕೈಗೊಳ್ಳಲಿಲ್ಲ. ಇದೇ ರೀತಿ ಸಿಗರೇಟ್ ಏನಿದೆ, ಅದರ pack ಮೇಲೆ label ಅಂಟಿಸಿಬಿಟ್ಟರೆ ಸಾಕೇ? ಹಾಗಾಗಿ ಇವೆಲ್ಲದರ ಬಗ್ಗೆ ಜನರ ಆರೋಗ್ಯ ದೃಷ್ಟಿಯಿಂದ ತಮ್ಮ ಪ್ರಾಮಾಣಿಕತೆಯನ್ನು ಪರಿಪೂರ್ಣವಾಗುವ ರೀತಿಯಲ್ಲಿ ನಿಷೇಧ ಹೊರಡಿಸಲಿ ಎಂದು ವಿನಂತಿ ಮಾಡುತ್ತೇನೆ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ನಮ್ಮ ಜನರ ಆರೋಗ್ಯದ ಬಗ್ಗೆ ಇಟ್ಟುಕೊಂಡಿರುವಂಥ ಕಾಳಜಿ, ಆ ದೃಷ್ಟಿಯಲ್ಲಿ ಸಹಜವಾಗಿ ಅವರು ಆರೋಗ್ಯ ಸಚಿವರಾಗಿರುವುದರಿಂದ ನಾನು ಅವರನ್ನು ಅಭಿನಂದಿಸುತ್ತೇನೆ. ಅವರು ಸ್ವಚ್ಛವಾದ ಕನ್ನಡದಲ್ಲಿ ಚೆನ್ನಾಗಿ ಸರಿಯಾಗಿ ಮಾತನಾಡಿದರು. ಆರೋಗ್ಯ ಸಚಿವರ ಉತ್ತರ ಆರೋಗ್ಯ ಖಾತೆಗೆ ಸರಿಯಾಗಿಯೇ ಇದೆ. ಅವರು correct ಆಗಿ ಮಾತನಾಡಿದ್ದಾರೆ, ನಾನು ಇಲ್ಲವೆಂದು ಹೇಳುವುದಿಲ್ಲ. ಅವರಿಗೆ ಒಂದೇ ಒಂದು ಕಿವಿ ಮಾತು ಏನೆಂದರೆ, ಈ ಸದನದಲ್ಲಿ ನಾಳೆ ಏನಾದರೂ ಒಂದು ವೇಳೆ ಇದೇ ಸದನದಲ್ಲಿ ಅಗ್ಗದ ಮದ್ಯದ ಬಗ್ಗೆ ಚರ್ಚೆಗೆ ಬಂದರೆ, ಇದೇ ಕಾಳಜಿ ಇರಬೇಕೇ ಹೊರತು ರಾಜಿ ಮಾಡಿಕೊಳ್ಳಬಾರದೆಂದು ಹೇಳಿ ಮಾನ್ಯ ಆರೋಗ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, ಎರಡನೆಯದಾಗಿ.. ..

ಅಧ್ಯಕ್ಷರು : ತಾವು clarification ಕೇಳಿ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, clarification ಎಂದರೆ, ಮಾನ್ಯ ಆರೋಗ್ಯ ಸಚಿವರು ಅಡಿಕೆ ಬೆಳೆಗಾರರಿಗೆ ಧೈರ್ಯ ಕೊಡುತ್ತೇವೆಂದು ಉತ್ತರ ಹೇಳುವಂಥದ್ದೆ ಅಪ್ರಕೃತ, ಅಪ್ರಸ್ತುತ, ಅದು ಅವರ ವ್ಯಾಪ್ತಿಗೆ ಮೀರಿದಂಥದ್ದು.

ಅಧ್ಯಕ್ಷರು : ಇದು clarification ಅಲ್ಲ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, ನಾನು clarification ಅನ್ನೇ ಕೇಳುತ್ತಿದ್ದೇನೆ. ಆ ಕಾರಣಕ್ಕೆ ನಾನು ಕೇಳುವಂಥದ್ದು ಏನೆಂದರೆ, ಇವತ್ತು ಸರ್ಕಾರ ಅಡಿಕೆ ಬೆಳೆಗಾರರಿಗೆ ತಕ್ಷಣಕ್ಕೆ ಧೈರ್ಯ ಹೇಳುವಂಥ ವಿಚಾರವಾಗಿ ಸರ್ಕಾರದಿಂದ clarification ಕೇಳುವಂಥದ್ದು ಏನು ಇದೆ. ಇದಕ್ಕೆ ಸ್ಪಷ್ಟೀಕರಣವನ್ನು ಮಾನ್ಯ ಆರೋಗ್ಯ ಮಂತ್ರಿಯವರು ಕೊಡುವಂಥದ್ದು ಅಲ್ಲ. ನಮಗೆ ಸರ್ಕಾರ ಕೊಡಬೇಕು, ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಭರವಸೆ ಕೊಡಬೇಕು.

ಅಧ್ಯಕ್ಷರು : ಮಾನ್ಯ ಮಂತ್ರಿಯವರು ಸರ್ಕಾರದ ಭಾಗವಲ್ಲವೇ?

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, ಅವರು ಹೇಳುವುದಲ್ಲ. ಇದು ಆರೋಗ್ಯ ಖಾತೆಗೆ ಸಂಬಂಧಪಟ್ಟಿದಲ್ಲ.

ಅಧ್ಯಕ್ಷರು : No, no...

ಶ್ರೀ ವೈ.ಎಸ್.ವಿ.ದತ್ತ : ಅಡಿಕೆ ಬೆಳೆಗಾರರಿಗೆ ಸಂಬಂಧಪಟ್ಟ ಗೋರಖ್-ಸಿಂಗ್ report ಅದರ ಬಗ್ಗೆ ಉತ್ತರ ಹೇಳಬೇಕು.

ಅಧ್ಯಕ್ಷರು : ಆಯಿತು, ಉತ್ತರ ಹೇಳುತ್ತಾರೆ ಬಿಡಿ. ಇಲ್ಲಿ ಗೋರಖ್‌ಸಿಂಗ್ ಪ್ರಶ್ನೆ ಇಲ್ಲ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಏಕೆಂದರೆ, ಲೋಕಸಭೆ ಚುನಾವಣೆ ಹತ್ತಿರ ಬರುತ್ತಿದೆ. ಅವರು ಉಪ ಚುನಾವಣೆಯಲ್ಲಿ ಹೇಳಿದ್ದರು.

ಅಧ್ಯಕ್ಷರು : ಅದು ಬೇರೆಯಾಗಿ ಇನ್ನೊಂದು ಸಂದರ್ಭದಲ್ಲಿ ಕೇಳಿ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, ನಾನು ಕಿವಿ ಮಾತು ಹೇಳುತ್ತಿದ್ದೇನೆ.

ಅಧ್ಯಕ್ಷರು : ಇಲ್ಲಿ ಕಿವಿ ಮಾತು ಬೇಡ.

ಶ್ರೀ ವೈ.ಎಸ್.ವಿ.ದತ್ತ : ಇದರಿಂದ ಗಂಟು ಉಳಿಯುತ್ತದೆ, ನಂಟು ಉಳಿಯುತ್ತದೆ. ಗೋರಖ್‌ಸಿಂಗ್ report ಜಾರಿಗೆ ತರುತ್ತೇವೆಂದು ಹೇಳಿಬಿಟ್ಟರೆ ಅವರನ್ನು ನಾವು ಅಭಿನಂದಿಸುತ್ತೇವೆ.

ಅಧ್ಯಕ್ಷರು : ಈಗ ಆ ಪ್ರಶ್ನೆ ಇಲ್ಲ, ಅದಕ್ಕೆ ತಾವು ಪ್ರತ್ಯೇಕ question ಕೊಡಿ, ಚರ್ಚೆಗೆ ಅವಕಾಶ ಕೊಡೋಣ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, ಅಡಿಕೆ ವಿಷಯವಾಗಿ ಗೋರಖ್‌ಸಿಂಗ್ ಕಮಿಟಿ ರಿಪೋರ್ಟ್ ಇದೆ.

ಅಧ್ಯಕ್ಷರು : ಮಾನ್ಯ ದತ್ತರವರೆ, ದಯಮಾಡಿ ಪ್ರತ್ಯೇಕವಾಗಿ ಪ್ರಶ್ನೆ ಕೊಡಿ, ಅವಕಾಶ ಕೊಡುತ್ತೇನೆ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರರೆ, ಆರೋಗ್ಯದ ಜೊತೆಗೆ ಅಡಿಕೆ ಬೆಳೆಗಾರರ ವಿಷಯವೂ ಇದೆ. ಹಾಗಾಗಿ ಅಡಿಕೆ ವಿಷಯವಾಗಿಯೂ ಸರ್ಕಾರದಿಂದ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನಾನು ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಇಲ್ಲಿ basic ಆಗಿ issue raise ಮಾಡಿರುವಂಥದ್ದು ಗುಟ್ಕಾ ನಿಷೇಧ ಮಾಡಬೇಕೆನ್ನುವಂಥದ್ದು. ಅದಕ್ಕೆ ಮೂಲವಾಗಿ ನಮ್ಮ ವಿರೋಧವಲ್ಲ. ಇದಕ್ಕೆ ಸುಪ್ರೀಂ ಕೋರ್ಟ್ order ಇದೆ. ಆದರೆ ನಾನು ಇಲ್ಲಿ ಬೆಳಿಗ್ಗೆ ಪ್ರಶ್ನೆ ಪ್ರಸ್ತಾಪ ಮಾಡಿರುವಂಥದ್ದು ಏನೆಂದರೆ, ನಿಷೇಧ ಮಾಡುವಂಥ ನಿರ್ಣಯವನ್ನು 30ನೇ ತಾರೀಖಿನಂದು ಕೈಗೊಂಡಿದ್ದೀರಿ. ಇವತ್ತು ಇಲ್ಲಿ ಈ ವಿಷಯವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಆರೋಗ್ಯ ಮಂತ್ರಿಯವರು ಉತ್ತರದಲ್ಲಿ, ಜೂನ್ ತಿಂಗಳ 25ನೇ ತಾರೀಖಿನೊಳಗಾಗಿ, ಇದನ್ನು ನಿಷೇಧ ಮಾಡಿ ಆ ಕಾಗದ ಪತ್ರಗಳನ್ನು ಸುಪ್ರೀಂ ಕೋರ್ಟ್‌ಗೆ ಕೊಡಬೇಕೆಂದು ಹೇಳಿದರು. ಇನ್ನೂ 25ನೇ ತಾರೀಖಿಗೆ time ಇದೆ. ಆದರೆ ತಾವು ಮೇ 30ನೇ ತಾರೀಖಿಗೆ ನಿಷೇಧ ಹೇರುತ್ತೀರಿ. ಇಲ್ಲಿ ಸೆಷನ್ಸ್ ನಡೆಯುತ್ತಿದೆ, ನಾನು ಅದನ್ನೇ basic ಆಗಿ ಹೇಳಿದ್ದೇನೆ. ತಾವು ಇದನ್ನು ಸದನದಲ್ಲಿ ಪ್ರಕಟ ಮಾಡಬೇಕಾಗಿತ್ತು.

ಅಧ್ಯಕ್ಷರು : okay, ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಹೊಸ ಸರ್ಕಾರದವರು ಆ ಸಂಪ್ರದಾಯ-ವನ್ನು ಮುರಿದರು. ಮಾನ್ಯ ಸಿದ್ದರಾಮಯ್ಯನವರು ಬಹಳ urgent ನಲ್ಲಿದ್ದಾರೆ.

ಅಧ್ಯಕ್ಷರು: ತಾವೇ ತೀರ್ಮಾನವನ್ನು ಕೊಟ್ಟು ಬಿಟ್ಟರೆ. ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈ ಸದನ ನಡೆಯುವ ಸಂದರ್ಭದಲ್ಲಿ ಎಲ್ಲಾ ಭಾಗದ ಶಾಸಕರು ಇಲ್ಲಿದ್ದಾರೆ ಇವರೆಲ್ಲರನ್ನು ಕರೆದೂ ಮಾತನಾಡಿ. ಯಾವುದಾದರೂ public issues ಬಂದಾಗ.. ..

ಅಧ್ಯಕ್ಷರು : ಮಾತನಾಡುತ್ತೇವೆಂದು ಹೇಳಿದ್ದಾರಲ್ಲಾ?

ಶ್ರೀ ಜಗದೀಶ್ ಶೆಟ್ಟರ್ : public issues ಬಂದಾಗ ಎಲ್ಲಾ Party Leaders ಅನ್ನು ಕರೆದು discussion ಮಾಡುವಂಥದ್ದು, ಕಾನೂನುಗಳ ಸೂಕ್ಷ್ಮತೆಗಳು ಇವೆ ಸುಪ್ರೀಂ ಕೋರ್ಟ್ direction ಇದೆ. ನಾವು 25ನೇ ತಾರೀಖಿನೊಳಗೆ ಕೊಡಬೇಕಾಗಿದೆಯೆಂದು discussion ಮಾಡಬಹುದಾಗಿತ್ತು, ಅಡಿಕೆ ಬೆಳೆಗಾರರ ಸಂಘ-ಸಂಸ್ಥೆಗಳ ಪ್ರತಿನಿಧಿಗಳನ್ನು ಕರೆಯುವಂಥದ್ದು ಮಾಡಬೇಕಾಗಿತ್ತು. ಇವರು ಹಿಂದೆ ನಾನು ಮುಖ್ಯಮಂತ್ರಿಯಾಗಿದ್ದಾಗ ನನ್ನನ್ನು ಭೇಟಿಯಾಗಿದ್ದರು.

ಅಧ್ಯಕ್ಷರು : ಆಯಿತು, ಮಾನ್ಯ ಮಂತ್ರಿಯವರು ಉತ್ತರ ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಅವರು ಹಿಂದಿನ ಮುಖ್ಯಮಂತ್ರಿಯವರನ್ನೂ ಭೇಟಿಯಾಗಿದ್ದರು. ಮಾನ್ಯ ಅಧ್ಯಕ್ಷರೆ, ಈ ರೀತಿ ಇರುವ ಸಂದರ್ಭದಲ್ಲಿ ದಯಮಾಡಿ, ತಾವು ಅವಸರ ಮಾಡಬೇಡಿ. ನಾನು ಇನ್ನೂ ಒಂದೆರಡು ಸಮಸ್ಯೆಗಳನ್ನು ಹೇಳಬೇಕಾಗಿದೆ. ಇಲ್ಲಿ ಮಾನ್ಯ ಆರೋಗ್ಯ ಮಂತ್ರಿಯವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಗುಟ್ಕಾದಿಂದಲೇ ಕ್ಯಾನ್ಸರ್ ಆಗಲಿ, ಇತರೇ ಎಲ್ಲಾ ರೋಗಗಳು ಬರುತ್ತಿದೆಯೆಂಬುದನ್ನು ಹೇಳಿದರು. ಸಿಗರೇಟ್, ಮದ್ಯಪಾನ, ಮತ್ತೊಂದು ಬೇಕಾದಷ್ಟು ರೋಗಗಳು ಬಂದಿವೆ, ಕ್ಯಾನ್ಸರ್ ರೋಗ ಬಂದಿದೆ ಇವತ್ತು ಆಸ್ಪತ್ರೆಗಳಲ್ಲಿ treatment ತೆಗೆದುಕೊಳ್ಳುತ್ತಿದ್ದಾರೆ. ಆದರೆ ಗುಟ್ಕಾದಿಂದಲೇ ಎಂದು ಅಲ್ಲ, ಅದನ್ನು ಬ್ಯಾನ್ ಮಾಡಿ, ಆ ಪ್ರಶ್ನೆ ಇಲ್ಲ. ಆದರೆ ಇವತ್ತು ಮಾನ್ಯ ಆರೋಗ್ಯ ಮಂತ್ರಿಯವರು ಆರೋಗ್ಯ ದೃಷ್ಟಿಯಿಂದ ಹೇಳಿದರು. ಆದರೆ ಇವತ್ತು ನಮ್ಮ ಎಲ್ಲಾ ಶಾಸಕ ಮಿತ್ರರು ಹೇಳಿರುವಂಥದ್ದು ಅಡಿಕೆ ಬೆಳೆಗಾರರ ರಕ್ಷಣೆಗೆ ಏನು ಮಾಡುತ್ತೀರಿ? ಈಗ ಆಡಳಿತ ಪಕ್ಷದ ಸದಸ್ಯರಾದ ಮಾನ್ಯ ವಡ್ನಾಳ್ ರಾಜಣ್ಣನವರೇ maximum 60%, 50% ಅಡಿಕೆ ಬಳಕೆಯಾಗುವುದು ಗುಟ್ಕಾಕ್ಕೆ ಎಂದು ಹೇಳಿದರು. ಈ ರೀತಿ ಇದ್ದಂಥ ಸಂದರ್ಭದಲ್ಲಿ ಅಡಿಕೆ ಬೆಲೆ 2,000 ರೂ.ಗಳು ಕಡಿಮೆಯಾಗಿದೆಯೆಂದು ಎ.ಪಿ.ಎಂ.ಸಿ.ಯ ಬಗ್ಗೆ ಹೇಳಿದರು. ಇವತ್ತು ಇದರ ಮೇಲೆ ನಿಷೇಧ ಹೇರಿದ ಮೇಲೆ practical ಆಗಿ market ನಲ್ಲಿ 2,000 ರೂ.ಗಳು ಅಡಿಕೆ ಬೆಲೆ ಕಡಿಮೆಯಾಗಿದೆ. ಇದು ನಿಷೇಧ ಹೇರಿದ ಪರಿಣಾಮದಿಂದ ಆಗಿದೆ. ಇದರ ಬಗ್ಗೆ

ನಿಜವಾಗಿಯೂ ಸರ್ಕಾರ ಆಲೋಚನೆ ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಆರೋಗ್ಯ ಮಂತ್ರಿಯವರು ಉತ್ತರ ಕೊಟ್ಟರು. ಆದರೆ ಮಾನ್ಯ ಮುಖ್ಯಮಂತ್ರಿಯವರನ್ನು ನಾನು ಬೆಳಗಿನಿಂದಲೂ ನೋಡುತ್ತಿದ್ದೇನೆ. ಈ ವಿಚಾರವಾಗಿ ಚಕಾರ ಶಬ್ದವಿಲ್ಲ. ಮಾನ್ಯ ದತ್ತರವರು ಹೇಳಿದರು. ಅದಕ್ಕೂ ಚಕಾರ ಶಬ್ದವಿಲ್ಲ. ಇವರಿಗೆ ಅಡಿಕೆ ಬೆಳೆಗಾರರ ಕಷ್ಟ ಅರ್ಥವಾಗುತ್ತಿದೆಯೋ ಇಲ್ಲವೋ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ಸದನಕ್ಕೆ assurance ಕೊಡಬೇಕಾಗಿತ್ತು.

ಅಧ್ಯಕ್ಷರು : ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಗುಟ್ಕಾ ನಿಷೇಧದ ಬಗ್ಗೆ ಸುಪ್ರೀಂ ಕೋರ್ಟ್ ನಿರ್ಣಯವಿದೆ. ಅದಕ್ಕೆ ನಾವು ಇದನ್ನು ನಿಷೇಧ ಮಾಡುತ್ತಿದ್ದೇವೆ, ಅಡಿಕೆ ಬೆಳೆಗಾರರಿಗೆ ಏನಾದರೂ ಸಮಸ್ಯೆ ಆದರೆ ನಾನು ಮುಖ್ಯಮಂತ್ರಿ ಇದ್ದೇನೆಮ ಹಣಕಾಸು ಮಂತ್ರಿ ಇದ್ದೇನೆ, ಅವರಿಗೆ ಬೆಂಬಲವಾಗಿ ನಿಲ್ಲುತ್ತೇನೆಂಬ ಮಾತನ್ನು ಅವರು ಹೇಳಬೇಕಾಗಿತ್ತು. ಇಲ್ಲಿಯವರೆಗೂ ಅಡಿಕೆ ಬೆಳೆಗಾರರ ಬಗ್ಗೆ ಒಂದೂ ಶಬ್ದ ಹೊರಗೆ ಬಂದಿಲ್ಲವೆಂದರೆ ಅಡಿಕೆ ಬೆಳೆಗಾರರ ಬಗ್ಗೆ ಗಂಭೀರತೆ ಇಲ್ಲವೇನೋ ಎಂದು ಕಾಣುತ್ತಿದೆ. ಅವರನ್ನು neglect ಮಾಡಿದ್ದಾರೆ.

ಅಧ್ಯಕ್ಷರು : ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿ ನನ್ನ ಒಂದೇ ಒಂದು ಬೇಡಿಕೆ ಏನೆಂದರೆ, ದಯವಿಟ್ಟು 30ನೇ ತಾರೀಖು ಇರುವಂಥದ್ದನ್ನು ಒಂದೆರಡು ದಿವಸಗಳು held up ಮಾಡಿ. ಆಮೇಲೆ ಇವತ್ತು ಎಲ್ಲಾ ಶಾಸಕರುಗಳನ್ನು, ಜನಪ್ರತಿನಿಧಿಗಳನ್ನು ಮತ್ತು ಅಡಿಕೆ ಬೆಳೆಗಾರರ ಸಂಘ–ಸಂಸ್ಥೆಗಳ ಪ್ರತಿನಿಧಿಗಳನ್ನು ಕರೆದು ಮಾತನಾಡಿ. ಅವರಿಗೆ assurance ಕೊಡಿ. ಈ ರೀತಿ ಅಡಿಕೆ ಬೆಳೆಗಾರರಿಗೆ ತೊಂದರೆಯಾಗದ ರೀತಿಯಲ್ಲಿ ಯಾವುದೇ ರೀತಿಯ ಸಮಸ್ಯೆ ಬಂದರೂ ಅದನ್ನು ಬಗೆಹರಿಸುತ್ತೇವೆನ್ನುವ assurance ಸರ್ಕಾರದಿಂದ ಬರಲಿ, ಆಗ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆ ರೀತಿ ಸನ್ಮಾನ್ಯ ಮುಖ್ಯಮಂತ್ರಿಯವರಿಂದ assurance ಬರಲಿ ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರು : ಆಯಿತು.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ.

ಅಧ್ಯಕ್ಷರು : clarification ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ : ಮಾನ್ಯ ಅಧ್ಯಕ್ಷರೆ, clarification ಕೇಳುತ್ತೇನೆ. ಮೊದಲನೆಯದಾಗಿ, ರಾಜ್ಯ ಸರ್ಕಾರ ಮುಂದಾಗಬೇಕು. ರಾಜ್ಯ ಸರ್ಕಾರ ಏಕೆ ಮುಂದಾಗಬೇಕೆಂದರೆ, ಕರ್ನಾಟಕದಲ್ಲಿ ಶೇ.60ರಷ್ಟು ಅಡಿಕೆ ಬೆಳೆಗಾರರು ಇದ್ದಾರೆ. ಬೇರೆ ರಾಜ್ಯಗಳೆಲ್ಲಾ ಮಾಡಿದ್ದಾರೆಂದರೆ, ಆ ರಾಜ್ಯಗಳಲ್ಲಿ ಅಡಿಕೆ ಬೆಳೆಗಾರರೇ ಇಲ್ಲ.

ಅಧ್ಯಕ್ಷರು : ತಾವು clarification ಏನು ಇದೆ, ಅದನ್ನು ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾನು clarification ಅನ್ನೇ ಕೇಳುತ್ತಿದ್ದೇನೆ. ಶೇ.60ರಷ್ಟು ಅಡಿಕೆ ಬೆಳೆಗಾರರು ಇರುವಂಥ ಕರ್ನಾಟಕ ರಾಜ್ಯದಲ್ಲಿ ಅಡಿಕೆ ಬೆಳೆಗಾರರ ಹಿತ ರಕ್ಷಣೆ ದೃಷ್ಟಿಯಿಂದ ಮೊದಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರದೊಂದಿಗೆ ಮಾತನಾಡಿ ಆಹಾರ ಸಂರಕ್ಷಣೆ ಮತ್ತು ಗುಣಮಟ್ಟ ಕಾಯಿದೆ ಇದೆ, ಗುಟ್ಕಾ food listನಲ್ಲಿದೆ. ಇದನ್ನು ಅದರಿಂದ ಹೊರಗೆ ತರುವಂಥ ಪ್ರಯತ್ನವನ್ನು ಹಿಂದೆ ನಮ್ಮ ಸರ್ಕಾರದಲ್ಲಿ ಮಾಡಿದ್ದೆವು. ಅದನ್ನು ಮಾನ್ಯ ಮುಖ್ಯಮಂತ್ರಿಯವರು ಮೊದಲು ಮಾಡಬೇಕು. ಇದನ್ನು ಮೊದಲನೆಯದಾಗಿ ಮಾಡಬೇಕಾದಂಥ ವಿಷಯವಿದೆ. ಎರಡನೆಯದಾಗಿ, ನಾನು ಈಗಾಗಲೇ ಹೇಳಿದ ಹಾಗೆ ಇದರೊಳಗೆ ಇರುವಂಥ ನಿಕೋಟಿನ್ ಮತ್ತು ತಂಬಾಕು ಹೊರತುಪಡಿಸಿಯೂ ಸಹ ಗುಟ್ಕಾವನ್ನು ಬೇರೆ ಬೇರೆ ರೀತಿಯಲ್ಲಿ ಮಾಡುವುದಕ್ಕೆ ಸಾಕಷ್ಟು ಅವಕಾಶಗಳಿವೆ. ಅದಕ್ಕೆ ಸಂಬಂಧಪಟ್ಟ ಸಂಘ-ಸಂಸ್ಥೆಗಳು CAMPCO ದಂಥಹ ಸಂಸ್ಥೆಗಳು ಇವೆ, ಬೇರೆ ಬೇರೆಯವರು ಇದ್ದಾರೆ. ಅವರೆಲ್ಲರ ಜೊತೆಯಲ್ಲಿ ಮಾತುಕತೆಯಾಗಬೇಕು, ನಮ್ಮ ಜನ ಪ್ರತಿನಿಧಿಗಳ ಜೊತೆಯಲ್ಲಿ ಮಾತುಕತೆಯಾಗಬೇಕು. ಅದುವರೆಗೂ ಈ notification ಅನ್ನು held up ಮಾಡಬೇಕು. ಮಾನ್ಯ ಮುಖ್ಯಮಂತ್ರಿಯವರು ಏಕೆ ತರಾತುರಿ ಮಾಡಿದರು?

ಅಧ್ಯಕ್ಷರು : ಆಯಿತು, ಮುಂದೆ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಸದನ ನಡೆಯುತ್ತಿದೆ. ಸದನ ನಡೆಯುತ್ತಿರುವಾಗ ಗಲ್ಲಿಗೆ ಹಾಕಿ ಬಿಡುತ್ತಾರೆನ್ನುವ ರೀತಿಯಲ್ಲಿ ಅರ್ಜೆಂಟ್ ಮಾಡುವಂಥದ್ದು ಏನು ಇತ್ತು? ಎಲ್ಲರ ಜೊತೆಯಲ್ಲಿ ಮಾತುಕತೆ ಮಾಡಿ, ನಿರ್ಣಯ ಮಾಡಬೇಕಾಗಿತ್ತು, ಇದ್ದಕ್ಕಿದ್ದ ಹಾಗೆ 30ನೇ ತಾರೀಖಿನಂದು ಇಷ್ಟು ತುರ್ತಾಗಿ notification ಮಾಡುವಂಥ urgent ಏನು ಇತ್ತು?

ಅಧ್ಯಕ್ಷರು : ಹೇಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ : ಈ notification ಅನ್ನು held up ಮಾಡಬೇಕು. ಅಡಿಕೆ ಬೆಳೆಗಾರರ ಪ್ರತಿನಿಧಿಗಳ ಮತ್ತು ಅಡಿಕೆಗೆ ಸಂಬಂಧಪಟ್ಟ ಶಾಸಕರ ಸಭೆಯನ್ನು ಕರೆಯಬೇಕು. ಅದು ಆದ ನಂತರವೇ ಮುಂದಿನ ಅನೇಕ ವಿಷಯಗಳ ಬಗ್ಗೆ ಚಿಂತನೆ ಮಾಡಬೇಕು. ಹಾಗಾಗಿ ಮಾನ್ಯ ಮುಖ್ಯಮಂತ್ರಿಯವರು ಇದನ್ನು withdraw ಮಾಡಿದ್ದೇನೆ, ಇಂಥ ದಿವಸ ಸಭೆಯನ್ನು ಕರೆಯುತ್ತಿದ್ದೇನೆಂದು ಈ ಸದನದಲ್ಲಿ ಘೋಷಿಸಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯರನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಸಮಗ್ರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇದರಲ್ಲಿ decision ತೆಗೆದುಕೊಳ್ಳುವಾಗ ಸ್ವಲ್ಪ ತಾರತಮ್ಯ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಇದರಲ್ಲಿ ನಿಕೋಟಿನ್ ಇದೆ, ತಂಬಾಕು ಇದೆ, ಅದಕ್ಕೋಸ್ಕರ ಇದನ್ನು ಬ್ಯಾನ್ ಮಾಡುತ್ತಿದ್ದೇವೆಂದು ಹೇಳಿದರು. ಇದು ಸ್ವಾಗತಾರ್ಹ, ಇದನ್ನು ಯಾರೂ ವಿರೋಧ ಮಾಡುವ ಪ್ರಶ್ನೆ ಇಲ್ಲ. ಆದರೆ ಇಲ್ಲಿ ಅಡಿಕೆ ಬೆಳೆಗಾರರಿಗೆ ರಕ್ಷಣೆ ಕೊಡಿಯೆಂದು ಚರ್ಚೆ ನಡೆಯುತ್ತಿರುವುದು. ಅದೇ ರೀತಿ ನಿಕೋಟಿನ್ ಯುಕ್ತ junk foodಗಳಿವೆ. ಮಾನ್ಯ ಕೃಷ್ಣ ಬೈರೇಗೌಡರು ಆ ಕಡೆ ಸಾಲಿನಲ್ಲಿ ಕುಳಿತ್ತಿದ್ದಾರೆ. ಅವರು ಹಿಂದೆ ಈ ಕಡೆಯಿಂದ ನನಗೆ ಇದೇ ಪ್ರಶ್ನೆಯನ್ನು ಕೇಳಿದ್ದರು. ಮಾನ್ಯ ಯು.ಟಿ.ಖಾದರ್‌ರವರೂ ನನಗೆ ಈ ಪ್ರಶ್ನೆ ಕೇಳಿದ್ದರು. ಆದ್ದರಿಂದ ನಿಕೋಟಿನ್‌ಯುಕ್ತ ಜಂಕ್ ಘುಡ್‌ಗಳನ್ನು ಯಾವಾಗ ಬ್ಯಾನ್ ಮಾಡುತ್ತೀರಿ? 30–5–2013ರಿಂದ ಗುಟ್ಕಾ ಮಾತ್ರ ಬ್ಯಾನ್ ಆಗಿದೆ. ಅದರಲ್ಲೇ ಇವುಗಳನ್ನೂ ಇನ್‌ಕ್ಲೂಡ್ ಮಾಡುವಿರಾ? ಅಥವಾ ಅದಕ್ಕೆ ಬೇರೆ ನೋಟಿಫಿಕೇಷನ್ ಮಾಡಿ ನಾಳೆ ಮಾನ್ಯ ಮುಖ್ಯ ಮಂತ್ರಿಗಳು ಪ್ರಕಟ ಮಾಡಿದರೆ ಬಹಳ ಸಂತೋಷ. ಏಕೆಂದರೆ ಮಕ್ಕಳ ಆರೋಗ್ಯದ ಬಗ್ಗೆ, ಯುವಕರ ಆರೋಗ್ಯದ ಬಗ್ಗೆ ಆರೋಗ್ಯ ಸಚಿವರಾದ ಖಾದರ್‌ರವರಿಗೆ ಕಾಳಜಿಯಿದೆ. ಅದನ್ನು ನಾನೂ ಕೂಡ ಅಪ್ರಿಷಿಯೇಟ್ ಮಾಡುತ್ತೇನೆ. ಚಿಕ್ಕಮಕ್ಕಳು ಜಂಕ್ ಘುಡ್‌ಗೆ ಬಲಿಯಾಗುತ್ತಿದ್ದಾರೆ. ಅದರಲ್ಲೂ ಸಹ ನಿಕೋಟಿನ್ ಇರುವಂಥ ಅನೇಕ ವಸ್ತುಗಳಿವೆ. ರೆಡಿಮೇಡ್ ಘುಡ್‌ಗಳಂತೂ ತಿನ್ನುವ ಸ್ಥಿತಿಯಲ್ಲಿಲ್ಲ. ಅನೇಕ ಸ್ವೀಟ್‌ಗಳಲ್ಲೂ ಇವತ್ತು ಆ ರೀತಿಯ ವಸ್ತುಗಳನ್ನು ಬಳಸುತ್ತಿದ್ದಾರೆ. ಆದ್ದರಿಂದ ಅವುಗಳನ್ನು ಯಾವಾಗ ಬ್ಯಾನ್ ಮಾಡುತ್ತಾರೆ ಎಂದು ಈ ಸದನದಲ್ಲಿ ಪ್ರಕಟಿಸಬೇಕು ಎಂದು ತಮ್ಮ ಮುಖಾಂತರ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ಖಾದರ್‌ರವರು ತುಂಬ ಚೆನ್ನಾಗಿ ಪ್ರೆಸೆಂಟೇಷನ್ ಮಾಡಿದ್ದಾರೆ. ಅವರು ವಿರೋಧ ಪಕ್ಷದಲ್ಲಿದ್ದಾಗಲೂ ಒಳ್ಳೆಯ ಭಾಷಣ ಮಾಡುತ್ತಿದ್ದರು. ಅದೇ ರೀತಿಯಲ್ಲೇ ಈಗಲೂ ಚಂದವಾದ ಭಾಷಣ ಮಾಡಿದ್ದಾರೆ. ಅವರ ಕಳಕಳಿಯನ್ನು ಎಲ್ಲರೂ ಮೆಚ್ಚಿದ್ದೇವೆ. ಖಾದರ್‌ರವರು ಎಷ್ಟು ಚೆನ್ನಾಗಿ ಉತ್ತರ ಕೊಟ್ಟರು, ನಮ್ಮನ್ನೆಲ್ಲ ಒಪ್ಪಿಸುವ ರೀತಿ ಉತ್ತರ ಕೊಟ್ಟರು ಎಂದು ನಾವೆಲ್ಲ ಖುಷಿ ಪಟ್ಟೆವು. ಅದಕ್ಕೆ ಅವರಿಗೆ ಅಭಿನಂದನೆ. ಅವರ ಉತ್ತರದ ಪ್ರಕಾರ ಇನ್ನು ಮುಂದೆ ಕ್ಯಾನ್ಸರ್ ಪೇಷೆಂಟ್‌ಗಳೇ ಇರುವುದಿಲ್ಲ, ಏಕೆಂದರೆ ಗುಟ್ಕಾ ಬ್ಯಾನ್ ಆಯಿತಲ್ಲ.

ಅಧ್ಯಕ್ಷರು : ಹಾಗೇನೂ ಇಲ್ಲ.

ಶ್ರೀ ಡಿ.ಎನ್.ಜೀವರಾಜ್ : ಮುಂದೆಯೂ ಗುಟ್ಕಾ ಪೇಷೆಂಟ್‌ಗಳು ಇರುತ್ತಾರಲ್ಲವೇ? ಹಾಗಿದ್ದ ಮೇಲೆ ಅವರು ಕೇವಲ ಗುಟ್ಕಾದಿಂದ ಮಾತ್ರ ನನ್ನ ಅಕ್ಕ-ತಂಗಿಯರು, ಅಣ್ಣ-ತಮ್ಮಂದಿರು ಮತ್ತು ಮಕ್ಕಳುಗಳಿಗೆ ಕ್ಯಾನ್ಸರ್ ಬರುತ್ತದೆ ಎಂದು ಹೇಳಿಬಿಟ್ಟರಲ್ಲ? ಆ ರೀತಿ ಆಗುವುದಿಲ್ಲ.

ಅಧ್ಯಕ್ಷರು : ನೀವು ಕ್ಲಾರಿಫಿಕೇಷನ್ ಕೇಳಿ, Assumptionಗಳೆಲ್ಲಾ ಬೇಡ.

ಶ್ರೀ ಡಿ.ಎನ್.ಜೀವರಾಜ್ : ನಾನು ಮೊನ್ನೆ ಎಲ್.ಹೆಚ್.ಎಂಟ್ರೆನ್ಸ್‌ನಲ್ಲಿ ಹೋಗುತ್ತಿರುವಾಗ ನೋಡಿದೆ, ಏನೋ ಒಂದು ವಸ್ತುವನ್ನು ಹಲ್ಲಿಗೆ ಉಜ್ಜುತ್ತಿದ್ದರು. ಅದನ್ನೂ ಬ್ಯಾನ್ ಮಾಡುವಿರಾ?

ಅಧ್ಯಕ್ಷರು : ಅದೆಲ್ಲವನ್ನೂ ಹೇಳುವ ಹಾಗಿಲ್ಲ, ಕ್ಲಾರಿಫಿಕೇಷನ್ ಮಾತ್ರ ಕೇಳಿ. ದಯವಿಟ್ಟು ಹಾಗೆಲ್ಲ ಹೋಗಬೇಡಿ. ಅವರ ಉತ್ತರ ನಿಮಗೆ ಯಾವ ಕಾರಣಕ್ಕಾಗಿ ಸಮಾಧಾನವಾಗಿಲ್ಲ ಎಂದು ಕೇಳಿ.

ಶ್ರೀ ಡಿ.ಎನ್.ಜೀವರಾಜ್ : ಅವರು ಗುಟ್ಕಾವನ್ನು ಮಾತ್ರ ನಿಷೇಧ ಮಾಡುವ ಬದಲು ಸಿಗರೇಟು, ಸಾರಾಯಿ ಎಲ್ಲವನ್ನೂ ನಿಷೇಧ ಮಾಡಲಿ ಎಂದು ತಮ್ಮ ಮೂಲಕ ಹೇಳುತ್ತೇನೆ. ಅವರು ಯೋಗೀಶ್ ಭಟ್‌ರವರ ವರದಿಯನ್ನು ಉಲ್ಲೇಖ ಮಾಡುತ್ತಾ, ಅವರ ವರದಿಯಲ್ಲಿ ಹೇಳಿದ್ದರು, ಅದಕ್ಕಾಗಿ ನಿಷೇಧ ಮಾಡಿದೆವು ಎಂದು ಹೇಳಿದರು. ಆದರೆ ಯೋಗೀಶ್ ಭಟ್‌ರವರ ವರದಿಯಲ್ಲಿ ತಂಬಾಕು ಉತ್ಪನ್ನಗಳು ಎಂದು ಹೇಳಲಾಗಿದೆ. ಸಿಗರೇಟು, ಬೀಡಿ ಇತ್ಯಾದಿಗಳೆಲ್ಲವೂ ತಂಬಾಕು ಉತ್ಪನ್ನಗಳಲ್ಲಿ ಸೇರುತ್ತವೆ. ಇವುಗಳೆಲ್ಲವನ್ನೂ ಯಾವಾಗ್ ಬ್ಯಾನ್ ಮಾಡುತ್ತಾರೆ ಎಂದು ಕೇಳುತ್ತೇನೆ. ಜನರ, ಅಕ್ಕ-ತಂಗಿಯರ, ಅಣ್ಣ-ತಮ್ಮಂದಿರ ಜೀವ ಉಳಿಸುವ ಕಾಳಜಿಯನ್ನು ಆರೋಗ್ಯ ಸಚಿವರು ಬಹಳ ಬೇಗ ಮಾಡಲಿ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಎಲ್ಲರೊಂದಿಗೆ

ಮಾತನಾಡಿ ತೀರ್ಮಾನ ತೆಗೆದುಕೊಳ್ಳುವವರೆಗೆ ಈ ನೋಟಿಫಿಕೇಷನ್‌ಅನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಅವರಿಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಮತ್ತು ಇತರ ಎಲ್ಲ ಮಾನ್ಯ ಸದಸ್ಯರು ಇವತ್ತು ಬಹಳ ಪ್ರಮುಖವಾದಂಥ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಗುಟ್ಕಾ ನಿಷೇಧ ಮಾಡಿರುವುದರಿಂದ ಅಡಿಕೆ ಬೆಳೆಗಾರರಿಗೆ ಬಹಳ ದೊಡ್ಡ ಅನ್ಯಾಯವಾಗುತ್ತದೆ, ಅಡಿಕೆ ಬೆಳೆಗಾರರು ಆ ಕಸುಬನ್ನೇ ಬಿಡಬೇಕಾಗುತ್ತದೆ ಎನ್ನುವ ಆತಂಕವನ್ನು ವ್ಯಕ್ತ ಮಾಡಿದ್ದಾರೆ. ಮಾನ್ಯ ಆರೋಗ್ಯ ಸಚಿವರಾದ ನಮ್ಮ ಸಹೋದ್ಯೋಗಿ ಖಾದರ್‌ರವರು ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಅವರು ಎತ್ತಿದಂಥ ಎಲ್ಲ ಪ್ರಶ್ನೆಗಳಿಗೂ ಕೂಡ ಬಹಳ ಸಮರ್ಥವಾಗಿ, ಸಮಾಧಾನವಾಗುವ ರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ. ಬಹುಶಃ ವಿರೋಧ ಪಕ್ಷದವರೂ ಕೂಡ ಮನಸ್ಸಿನಲ್ಲಿ ಅವರ ಉತ್ತರವನ್ನು ಮೆಚ್ಚಿಕೊಂಡಿದ್ದಾರೆ. ಬಹಳ ಜನ ಅವರ ಉತ್ತರವನ್ನು ಮೆಚ್ಚಿಕೊಂಡು ಅವರಿಗೆ ಅಭಿನಂದನೆಗಳನ್ನೂ ಹೇಳಿದ್ದಾರೆ. ಅವರು ಮಂತ್ರಿಯಾಗಿ ಹೊಸಬರಾದರೂ ಕೂಡ ಬಹಳ ಪಳಗಿದವರ ರೀತಿಯಲ್ಲಿ ವಿಷಯವನ್ನು ಚೆನ್ನಾಗಿ ತಿಳಿದುಕೊಂಡು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ತಯಾರಾಗಿ, ಬಹಳ ಸಮರ್ಥವಾದ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನೂ ಕೂಡ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಲು ಬಯಸುತ್ತೇನೆ. ಮಾನ್ಯ ಸದಸ್ಯರ ಆತಂಕ, ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ನಾವು ಈಗಾಗಲೇ ಪ್ರಸ್ತಾಪ ಮಾಡಿದಂತೆ ಬಹಳ ತರಾತುರಿಯಲ್ಲೇನು ಗುಟ್ಕಾ ನಿಷೇಧ ಮಾಡಿದುದಲ್ಲ. ದಿನಾಂಕ 03-05-2013ರಂದು ಸುಪ್ರೀಂ ಕೋರ್ಟ್‌ನವರು ಒಂದು ಆದೇಶವನ್ನು ಮಾಡಿದ್ದಾರೆ. ನಾಲ್ಕು ವಾರಗಳೊಳಗೆ ಆ ಆದೇಶವನ್ನು ಜಾರಿ ಮಾಡಬೇಕೆಂದು ಎಂದು ಅದರಲ್ಲಿದೆ. ಆ ಆದೇಶವನ್ನು ಪಾಲನೆ ಮಾಡಬೇಕಾಗಿರುವುದು ನಮ್ಮ ಜವಾಬ್ದಾರಿ ಮತ್ತು ಕರ್ತವ್ಯ. ಸುಪ್ರೀಂ ಕೋರ್ಟ್‌ನ ಆದೇಶದ ಹಿನ್ನೆಲೆಯಲ್ಲಿ ನಮಗೆ ಬೇರೆ ಯಾವುದೇ ದಾರಿ ಇರಲಿಲ್ಲ.

(ಈ ಹಂತದಲ್ಲಿ ಆರೋಗ್ಯ ಸಚಿವರಾದ ಶ್ರೀ ಯು.ಟಿ.ಖಾದರ್‌ರವರು ಮೇಲ್ಮನೆಯಲ್ಲಿ ಇದೇ ವಿಷಯ ವಿರುವುದರಿಂದ ಮಾನ್ಯ ಸಭಾಧ್ಯಕ್ಷರ ಅನುಮತಿ ಪಡೆದು ಸದನದಿಂದ ನಿರ್ಗಮಿಸಿದರು.)

ಶ್ರೀ ಸಿದ್ದರಾಮಯ್ಯ : ಅಲ್ಲೂ ಕೂಡ ಇದರ ಬಗ್ಗೆ ಅವರು ಉತ್ತರ ಕೊಡಬೇಕಾಗಿದೆ.

ಅಧ್ಯಕ್ಷರು : ನೀವು ಹೋಗಿ.

ಶ್ರೀ ಸಿದ್ದರಾಮಯ್ಯ : ಸುಪ್ರೀಂ ಕೋರ್ಟ್ ಆದೇಶವಾಗಿರುವುದರಿಂದ ನಾವು ಅದನ್ನು ಪಾಲನೆ ಮಾಡಲೇಬೇಕು. ಸುಪ್ರೀಂ ಕೋರ್ಟಿಗೆ ಒಂದು ಅಫಿಡವಿಟ್ ಹಾಕಬೇಕು, ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ಜೂನ್ 25ರೊಳಗೆ ಸುಪ್ರೀಂ ಕೋರ್ಟಿಗೆ ತಿಳಿಸಬೇಕು ಎಂದು ಆದೇಶದಲ್ಲಿ ಇದೆ. ಆದ್ದರಿಂದ ನಾವು ಇದನ್ನು ತರಾತುರಿಯಲ್ಲಿ ಮಾಡಿರುವುದೇನೂ ಇಲ್ಲ. ಇದು ಪಾಲಿಸಿ ಡಿಸಿಷನ್ ಅಲ್ಲ. ಸುಪ್ರೀಂ ಕೋರ್ಟ್‌ನ ಆದೇಶವನ್ನು ಪಾಲನೆ ಮಾಡಿರುವುದಷ್ಟೇ. ಹಾಗಾಗಿ ನಾವು ಕಳೆದ 30ನೇ ತಾರೀಖು ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ, ಅನಂತರ ಆದೇಶವನ್ನು ಹೊರಡಿಸಿದ್ದೇವೆ. ಎಲ್ಲರ ಕಳಕಳಿ ಇರುವುದೇನೆಂದರೆ, ಗುಟ್ಕಾ ನಿಷೇಧ ಮಾಡಿದ ಮೇಲೆ, ಈ ಆದೇಶವನ್ನು ಹೊರಡಿಸಿದ ಮೇಲೆ ಅಡಿಕೆ ಬೆಲೆ ಕುಸಿದು ಹೋಗಿದೆ ಎನ್ನುವುದಾಗಿದೆ.

ಅಧ್ಯಕ್ಷರು : ಸದನ ಸೇರುವುದು ಗೊತ್ತಿದ್ದೂ ಮೊದಲೇ ಏಕೆ ಇದನ್ನು ಮಾಡಿದರು ಎಂದು ಜಗದೀಶ್ ಶೆಟ್ಟರ್‌ರವರು ಕೇಳಿದರು.

ಶ್ರೀ ಸಿದ್ದರಾಮಯ್ಯ : ಇದು ಸುಪ್ರೀಂ ಕೋರ್ಟ್‌ನ ಡಿಸಿಷನ್‌ರ ಆಗಿರುವುದರಿಂದ ಅದನ್ನು ಪಾಲನೆ ಮಾಡಬೇಕಾಗಿರುವುದರಿಂದ ಮಾಡಿದ್ದೇವೆ.

ಅಧ್ಯಕ್ಷರು : ಸಮಯಕ್ಕೆ ಸರಿಯಾಗಿ ಉತ್ತರ ಹೇಳಬೇಕಾಗಿತ್ತು.

ಶ್ರೀ ಸಿದ್ದರಾಮಯ್ಯ : ಹೌದು. ಇದೇನು ಪಾಲಿಸಿ ಡಿಸಿಷನ್ ಏನಲ್ಲಾ. ಪಾಲಿಸಿ ಡಿಸಿಷನ್ ಮಾಡುವಾಗ, ಬಹಳ ಮಹತ್ತರವಾದ ನಿರ್ಣಯಗಳನ್ನು ಮಾಡುವಾಗ ಸದನದಲ್ಲಿ ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಅಧಿವೇಶನ ನಡೆಯುತ್ತದೆ, ನಾಳೆಯೇ ಸುಪ್ರೀಂ ಕೋರ್ಟಿಗೆ ಸಬ್ಮಿಟ್ ಮಾಡಬೇಕೆಂದಿದ್ದರೆ ಅವರು ಮಾಡಿರುವುದು ಸರಿ. ಆದರೆ ಸಮಯಾವಕಾಶವಿತ್ತು ಅಧಿವೇಶನ ನಡೆಯುತ್ತದೆ ಎನ್ನುವುದು ಅವರಿಗೆ ಗೊತ್ತಿತ್ತು.

ಅಧ್ಯಕ್ಷರು : ಸುಪ್ರೀಂ ಕೋರ್ಟ್‌ನವರು ಟೈಂ ಲಿಮಿಟ್ ಕೊಟ್ಟಿದ್ದರು.

ಶ್ರೀ ಸಿದ್ದರಾಮಯ್ಯ : ಅಫಿಡೆವಿಟ್ ಹಾಕಲು ನಾವು ನಾಲ್ಕು ವಾರಗಳಲ್ಲಿ ಮಾಡಬೇಕಾಗಿತ್ತು.

ಶ್ರೀ ಜಗದೀಶ್ ಶೆಟ್ಟರ್ : ಜೂನ್ 25ರೊಳಗೆ ಕಂಪ್ಲೈ ಮಾಡಬೇಕಿತ್ತು ಎಂದು ನಿಮ್ಮ ಉತ್ತರದಲ್ಲೇ ಇದೆ.

ಶ್ರೀ ಸಿದ್ದರಾಮಯ್ಯ : ಅದು ಕಂಪ್ಲೈ ಅಲ್ಲ. ಜಗದೀಶ್ ಶೆಟ್ಟರ್‌ರವರೇ, ನೀವು ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ಹಾಗೆಂದು ನಿಮ್ಮ ಉತ್ತರದಲ್ಲೇ ಇದೆ.

ಶ್ರೀ ಸಿದ್ದರಾಮಯ್ಯ : ಅದನ್ನು ಅವರಿಗೆ ಓದಿ ಹೇಳಿ.

ಶ್ರೀ ಟಿ.ಬಿ.ಜಯಚಂದ್ರ : ಸುಪ್ರೀಂ ಕೋರ್ಟ್ ಆದೇಶ ಏನಿತ್ತು ಎಂದರೆ, "We also direct the Secretaries, Health Department of all 23 States and 5 Union Territories to file their Affidavit within four weeks on the issue of total compliance on ban imposed on manufacture and sale of Gutka and paan Masala with Tobacco and Nicotine and put up on 03-05-2013. "

ಶ್ರೀ ಜಗದೀಶ್ ಶೆಟ್ಟರ್ : ಹಾಗಾದರೆ ನಿಮ್ಮ ಉತ್ತರ ತಪ್ಪಾಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ : ಕೇಳಿ, 03–05–2013ಕ್ಕೆ ಸರ್ಕಾರ ಎಲ್ಲಿತ್ತು?

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಉತ್ತರದ last but one para ಓದಿ.

ಶ್ರೀ ಟಿ.ಬಿ.ಜಯಚಂದ್ರ : It is very technical aspect. 03–05–2013ಕ್ಕೆ ಯಾರು ಮುಖ್ಯಮಂತ್ರಿಗಳಾಗಿದ್ದರು?

ಶ್ರೀ ಜಗದೀಶ್ ಶೆಟ್ಟರ್ : ತಮ್ಮ ಉತ್ತರದಲ್ಲಿ 03–05–2013ರ ಆದೇಶದಲ್ಲಿ ಗುಟ್ಕಾ ಮತ್ತು ಪಾನ್ ಮಸಾಲವನ್ನು ತಯಾರಿಸುವುದು ಮತ್ತು ಮಾರಾಟ ಮಾಡುವುದನ್ನು ನಿಷೇಧಗೊಳಿಸುವ ಕುರಿತು ರಾಜ್ಯ ಸರ್ಕಾರವು ಆದೇಶ ಹೊರಡಿಸಿ ದಿನಾಂಕ 25–6–2013ರೊಳಗಾಗಿ ಆದೇಶದ ಪ್ರತಿಯನ್ನು ಒದಗಿಸುವಂತೆ ನಿರ್ದೇಶನ ನೀಡಿರುತ್ತದೆ" ಎಂದು ಹೇಳಿದ್ದಾರೆ. ಅಂದರೆ ಜೂನ್ ಎಂದು ಅವರೇ ಉತ್ತರದಲ್ಲಿ ಹೇಳಿದ್ದಾರೆ. ಇದರಲ್ಲಿ ಹೇಳಿರುವುದನ್ನು ಇಲ್ಲವೆಂದು ಹೇಳಿಬಿಡಿ, ಉತ್ತರ ಕೊಟ್ಟಿರುವುದು ತಪ್ಪು ಎಂದು ಹೇಳಿಬಿಡಿ, ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಇದನ್ನು ಮಾಡಬೇಕಾಗಿದ್ದವರು ನೀವು. ಹಾಗಾಗಿ ನೀವು ಮಾಡಿರುವುದೂ ತಪ್ಪು ಎಂದು ನೀವೂ ಒಪ್ಪಿಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ಉತ್ತರ ತಪ್ಪು ಎಂದು ನೀವು ಹೇಳಬಿಡಿ.

ಶ್ರೀ ಸಿದ್ದರಾಮಯ್ಯ : ಅದು ತಪ್ಪಿಲ್ಲ, ಕರೆಕ್ಟಾಗಿದೆ. 25–06–2013 ಎನ್ನುವುದು ಕರೆಕ್ಟಾಗಿದೆ. ಅಷ್ಟರೊಳಗಾಗಿ ನಾವು ಅಫಿಡವಿಟ್ ಮತ್ತು ಆದೇಶದ ಕಾಪಿಯನ್ನು ಸುಪ್ರೀಂ ಕೋರ್ಟಿಗೆ ಕೊಡಬೇಕು. ಆದರೆ ಆದೇಶವನ್ನು ನಾಲ್ಕು ವಾರಗಳೊಳಗಾಗಿ ಮಾಡಬೇಕು ಎಂದು ಹೇಳಿದ್ದಾರೆ. ಆದ್ದರಿಂದ ಅದು ಬೇರೆ, ಇದು ಬೇರೆ. ಆದ್ದರಿಂದ ಅದರಲ್ಲಿ ಹೇಳಿರುವ ತಾರೀಖು ಕರೆಕ್ಟಾಗಿದೆ. ರೈತರು ಮತ್ತು ಅಡಿಕೆ ಬೆಳೆಗಾರರ ಬಗ್ಗೆ. ಆವತ್ತು ಆದೇಶವನ್ನು ಹೊರಡಿಸಿದ ದಿನದಂದು

ಸಹ ಹೇಳಿದ್ದೇನೆ. ಅಡಿಕೆ ಬೆಳೆಗಾರರು ಯಾವ ಕಾರಣಕ್ಕೂ ಕೂಡ ಆತಂಕಕ್ಕೆ ಒಳಗಾಗಬೇಕಾದಂತಹ ಅಗತ್ಯವಿಲ್ಲ. ನಾವು ಸುಪ್ರೀಂ ಕೋರ್ಟಿನ ಆದೇಶದನ್ವಯ ಗುಟ್ಕಾ ಮತ್ತು ಪಾನ್ ಮಸಾಲ ಬ್ಯಾನ್ ಮಾಡಿದ್ದೇವೆ. ಇದು ಅಡಿಕೆಯನ್ನು ಬ್ಯಾನ್ ಮಾಡುವಂತಹ ಕೆಲಸವಲ್ಲ. ಅದರಿಂದ ಅಡಿಕೆಯ ಬೆಲೆಯು ಕುಸಿದು ಹೋಗುತ್ತದೆ, ತೊಂದರೆಯಾಗುತ್ತದೆ ಎಂದು ಅಲ್ಲ. ಮಾನ್ಯ ಸದಸ್ಯರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತನಾಡುತ್ತಾ ಇಲ್ಲಿ ಯಾವುದೋ ಒಂದು lobby work ಮಾಡುತ್ತಿದೆ, ಆ ಲಾಬಿಗೆ ಸರ್ಕಾರ ಒಳಗಾಗಿರಬಹುದೇನೋ ಎಂದು ಹೇಳುತ್ತಿದ್ದರು. ಸುಪ್ರೀ ಕೋರ್ಟು ವಿಚಾರದಲ್ಲಿ ಲಾಬಿ ವರ್ಕ್ ಮಾಡುತ್ತದೆಯೇ? ಇದು ಸುಪ್ರೀಂ ಕೋರ್ಟಿನ ಆದೇಶ. ಗುಟ್ಕಾ ತಯಾರು ಮಾಡುವವರ ಲಾಬಿ ಇದರಲ್ಲಿ ಇರುವುದು. ಇವತ್ತು ನಾವು ಇದನ್ನು ತಡೆಹಿಡಿದರೆ ಇದರಿಂದ ಗುಟ್ಕಾ ಮಾಡುವವರಿಗೆ ಅನುಕೂಲವಾಗುತ್ತದೆ. ಅವರ ಬಳಿ ಇರುವುದೆಲ್ಲವನ್ನೂ ಮಾರಿಕೊಳ್ಳುತ್ತಾರೆ. ಇದರಿಂದ ಇನ್ನೂ ಸ್ವಲ್ಪ ಜನರಿಗೆ ತೊಂದರೆಯಾಗುತ್ತದೆ. ಅವರ ಹತ್ತಿರ stock ಇದೆಯಲ್ಲಾ ನಾವು ಇದನ್ನು ತಡೆಹಿಡಿದ ತಕ್ಷಣವೇ ಅವರು ಇದನ್ನು ಬೀದಿಗೆ ತೆಗೆದುಕೊಂಡು ಬಂದು ಎಲ್ಲಾ ಮಾರಾಟವನ್ನು ಮಾಡಿಕೊಳ್ಳುತ್ತಾರೆ. ಇದರಿಂದ ಗುಟ್ಕಾ ಮಾಡುವವರಿಗೆ ಅನುಕೂಲವಾಗುತ್ತದೆ. ಇದನ್ನು ತಡೆಹಿಡಿಯಬೇಕಾದಂತಹ ಅಗತ್ಯವಿಲ್ಲ. ನಾವು ಸುಪ್ರೀಂ ಕೋರ್ಟಿನ ಆದೇಶವನ್ನು ಪಾಲನೆ ಮಾಡಿದ್ದೇವೆ. ಇದನ್ನು ನಾವು ಸಾರ್ವಜನಿಕರ ಹಾಗೂ ರಾಜ್ಯದ ಹಿತದೃಷ್ಟಿಯಿಂದ ಮಾಡಿದ್ದೇವೆನ್ನು-ವಂತಹದ್ದನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಇದರಲ್ಲಿ ಸುಪ್ರೀಂ ಕೋರ್ಟಿನವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈ ಗುಟ್ಕಾ ದಿಂದ ಅನೇಕ ಜನರು ಕ್ಯಾನ್ಸರ್ ಕಾಯಿಲೆ ಬಂದು ಸಾಯುತ್ತಿದ್ದಾರೆ. ಅನೇಕ ಜನ ಯುವಕರು ಇದಕ್ಕೆ ತುತ್ತಾಗಿ ಬಲಿಯಾಗುತ್ತಿದ್ದಾರೆನ್ನುವಂತಹ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಸದಸ್ಯರಾದ ಮಾನ್ಯ ಸಿ.ಟಿ.ರವಿಯವರು ಸಹ ಹಿಂದೆ ಮಂತ್ರಿಯಾಗಿದ್ದವರು. ಅವರು ಬೇರೆಯದನ್ನು ಬ್ಯಾನ್ ಮಾಡಿಬಿಡಿ ಎಂದು ಹೇಳುತ್ತಿದ್ದರು. ನೀವು ಅಧಿಕಾರದಲ್ಲಿದ್ದಾಗ ಏತಕ್ಕಾಗಿ ಇದನ್ನು ಬ್ಯಾನ್ ಮಾಡಲಿಲ್ಲ? ಬೇರೆಯದನ್ನು ಏತಕ್ಕಾಗಿ ಬ್ಯಾನ್ ಮಾಡಲಿಲ್ಲ? ಸಿಗರೇಟ್, ಬೀಡಿ, ವಿಸ್ಕಿ ಕುಡಿಯುವುದು, ಇವುಗಳು ಈಗಲೂ ಇದೆಯಲ್ಲಾ? ಇವೆಲ್ಲವೂ ಆಗಲೂ ಇತ್ತಲ್ಲಾ? ಇದು ಎಷ್ಟೋ ವರ್ಷಗಳಿಂದ ಇದೆಯಲ್ಲಾ?

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ.....

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) : ಮಾನ್ಯ ರವಿಯವರೆ, ನೀವು ಆಗಲೇ ಹೇಳಿ ಆಗಿದೆ ತಾವು ಕುಳಿತುಕೊಳ್ಳಿ. Mr.Ravi ಕುಳಿತುಕೊಳ್ಳಿ, please. ನಾನು yield ಆಗುವುದಿಲ್ಲ.

ಶ್ರೀ ಸಿ.ಟಿ.ರವಿ : ಸ್ವಾತಂತ್ರ್ಯ ಬಂದ ತಕ್ಷಣದಿಂದಲೇ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದಿತು.

ಅಧ್ಯಕ್ಷರು : ಆಯಿತು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇಲ್ಲಿ ತಾವು 5 ವರ್ಷಗಳ ಕಾಲ ಅಧಿಕಾರದಲ್ಲಿದ್ದಾಗ ಬುದ್ಧಿವಾದವನ್ನು ಹೇಳಿದ್ದೀರಲ್ಲಾ?

ಅಧ್ಯಕ್ಷರು : ಆಯಿತು. Proceed....

ಶ್ರೀ ಸಿದ್ದರಾಮಯ್ಯ : ಅಲ್ಲಿ ವಿರೋಧ ಪಕ್ಷದ ಜಾಗಕ್ಕೆ ಹೋದ ತಕ್ಷಣವೇ ಇದ್ದಕಿದ್ದ ಹಾಗೇ ಪವಿತ್ರತೆ ಬಂದು ಬಿಡುತ್ತದೆಯೇ? ಆದ್ದರಿಂದ ನಾನು ಹೆಚ್ಚು ಲಂಬಿಸುವುದಕ್ಕೆ ಹೋಗುವುದಿಲ್ಲ. ನಾವು ಇಷ್ಟು ಮಾತ್ರ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಈ ಬಗ್ಗೆ ಮಾನ್ಯ ಆರೋಗ್ಯ ಸಚಿವರಾದ ಶ್ರೀ ಯು.ಟಿ.ಖಾದರ್‌ರವರು ಹೇಳಿದ್ದಾರೆ. ಈ ಅಡಿಕೆ ಬೆಲೆಯು ಬಹಳ ಕುಸಿದುಹೋಗಿದೆಯೇ ಎಂಬ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ನೋಡಿದ್ದೇನೆ. Red variety arecanut 27ನೇ ತಾರೀಖು minimum rate ಇರುವುದು 20,069 ರೂಗಳು. Maximum rate ಇದ್ದದ್ದು ರೂ.26,826.00. 28ನೇ ತಾರೀಖು ರೂ.26,800.00, 29ನೇ ತಾರೀಖು, ರೂ.26,860.00, 30ನೇ ತಾರೀಖು ರೂ.26,909.00,ಆಮೇಲೆ 31ನೇ ತಾರೀಖಿಗೆ ರೂ.26,692.00, 3ನೇ ತಾರೀಖಿಗೆ ಅಂದರೆ ನಿನ್ನೆ ದಿವಸ ಮಿನಿಮಮ್ ರೂ.2019.00, ಮ್ಯಾಕ್ಸಿಮಮ್ ರೂ.25,976.00 ಅವತ್ತಿಗೂ ಮತ್ತು ಇವತ್ತಿಗೂ ರೂ.50.00 ಮಾತ್ರ ಕಡಿಮೆಯಾಗಿದೆ. ರೂ.50 ರಿಂದ 200ರವರೆಗೆ fluctuation ಇರುತ್ತದೆ. ಬೆಲೆ ಏರಬೇಕಾದರೂ ಕೂಡ ಅಲ್ಲಿ import duty ಇತ್ತಲ್ಲಾ ಅದು ಕಡಿಮೆಯಾಯಿತು. ಹಾಗಾಗಿ ನಮ್ಮ ಪದಾರ್ಥಗಳಿಗೆ ಬೆಲೆ ಜಾಸ್ತಿಯಾಯಿತು. ನಾವು ಇದನ್ನೂ ಸಹ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಬೆಲೆ ಏನೋ ಯದ್ವಾತದ್ವಾ ಬಿದ್ದುಹೋಗಿಬಿಟ್ಟಿದೆ, ನಮ್ಮ ರೈತರಿಗೆ ದೊಡ್ಡ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದೀರಿ. ಇಷ್ಟೇಲ್ಲಾ ಆದರೂ ಕೂಡ ನಮ್ಮ ಸರ್ಕಾರವು ರೈತರ ಹಿತವನ್ನು ಕಾಪಾಡುವುದಕ್ಕೆ ಬದ್ಧವಾಗಿದೆ. ಈ ಬಗ್ಗೆ ನಾವು ಬಹಳ ಸ್ಪಷ್ಟವಾಗಿ ಹೇಳುತ್ತೇವೆ. ರೈತರಿಗೆ ನ್ಯಾಯಯುತವಾದ ಬೆಲೆಯು

ಸಿಗಬೇಕು. ಈ ಬಗ್ಗೆ ಎರಡನೇ ಮಾತಿಲ್ಲ. ಒಂದು ವೇಳೆ ಬೆಲೆ ಬಿದ್ದು ಹೋದರೆ ನಾನು ಅಡಿಕೆ ಬೆಳೆಗಾರರನ್ನು ಮತ್ತು ಯಾರ್‍ಯಾರು ಅಡಿಕೆ ಬೆಳೆಗಾರರ ಪ್ರದೇಶದಿಂದ ಬರುವಂತಹ ಶಾಸಕರಿದ್ದೀರಿ ಅವರನ್ನೂ ಕರೆದು ಈ ಬಗ್ಗೆ ಚರ್ಚೆ ಮಾಡೋಣ. ರೈತರಿಗೆ ಏನು protection ಕೊಡಬೇಕೋ ಅವೆಲ್ಲವನ್ನೂ ಕೊಡೋಣ. ಅಡಿಕೆ ಬೆಳೆಗಾರರಿಗೆ ಏನೇನು ರಕ್ಷಣೆಯನ್ನು ಕೊಡಬೇಕೋ ಅದನ್ನು ಕೊಡೋಣ. ಗೋರಖ್‌ಸಿಂಗ್ ಸಮಿತಿಯ ವರದಿ ಏನು ಇದೆ, ಕೇಂದ್ರ ಸರ್ಕಾರವು ಅದು ಜಾರಿಯಾಗಬೇಕು ಎಂದು ಇದೆ. ಆ ಬಗ್ಗೆ ನಾವು ನಿಯೋಗವನ್ನು ಕರೆದುಕೊಂಡು ಹೋಗಿ ಇನ್ನೊಮ್ಮೆ ಒತ್ತಾಯವನ್ನು ಮಾಡೋಣ. ಅಡಿಕೆ ಬೆಳೆಗಾರರಿಗೆ ಏನೇನು ಸಹಾಯಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಅವೆಲ್ಲವನ್ನೂ ಮಾಡುವುದಕ್ಕೆ ನಮ್ಮ ಸರ್ಕಾರವು ಬದ್ಧವಾಗಿದೆ ಎನ್ನುವಂತಹ ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಇದರಲ್ಲಿ ಯಾವುದೇ ಎರಡು ಮಾತಿಲ್ಲ, ನಮ್ಮ ಸರ್ಕಾರವು ರೈತರ ಹಾಗೂ ಅಡಿಕೆ ಬೆಳೆಗಾರರ ಪರವಾಗಿದೆ. ಇಲ್ಲಿ ಮಾನ್ಯ ಸದಸ್ಯರುಗಳು ಏನು ಆತಂಕವನ್ನು ಇಟ್ಟುಕೊಂಡಿದ್ದಾರೆ ಈ ಬಗ್ಗೆ ಆತಂಕವನ್ನು ಇಟ್ಟುಕೊಳ್ಳಬೇಕಾದಂತಹ ಅಗತ್ಯವಿಲ್ಲ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರೆ, ಚಿಕ್ಕಮಗಳೂರು ಲೋಕಸಭಾ ಚುನಾವಣೆಯಾದಾಗ ನಾನು ಕೂಡ ಅಲ್ಲಿ ಇದ್ದೆ. ಅದಕ್ಕಾಗಿ ಮಾನ್ಯ ಕೃಷಿ ಸಚಿವರು ಸದನದಲ್ಲಿಯೇ ಇದ್ದಾರೆ. ಗೋರಖ್‌ಸಿಂಗ್ ಸಮಿತಿಯ ವಿಚಾರದಲ್ಲಿ ಬೇಗ ಒಂದು ತೀರ್ಮಾನಕ್ಕೆ ಬಂದರೆ ಒಳ್ಳೆಯದು.

ಶ್ರೀ ಸಿದ್ದರಾಮಯ್ಯ : ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಇನ್ನೊಂದು ಸಾರಿ ಚರ್ಚೆ ಮಾಡಿ ಇದರಿಂದ ಏನು ರೈತರಿಗೆ ಮಾಡುವುದಕ್ಕೆ ಆಗುತ್ತದೆ ಅದನ್ನು ಮಾಡುವುದಕ್ಕೆ ಹೋಗೋಣ. ನಾನು ಈ ಸದನದ ಮೂಲಕ ಎಲ್ಲಾ ಅಡಿಕೆ ಬೆಳೆಗಾರರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದರಿಂದ ಆತಂಕಕ್ಕೆ ಒಳಗಾಗುವುದು ಬೇಕಾಗಿಲ್ಲ. ನಿಮ್ಮ ಸಹಾಯಕ್ಕೆ ನಾವು ಇರುತ್ತೇವೆನ್ನುವಂತಹ ಮಾತುಗಳನ್ನು ಈ ಸದನದ ಮೂಲಕ ಅವರಿಗೆ ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಯಾವಾಗ ಚರ್ಚೆ ಮಾಡುತ್ತೇವೆ, ಏನು ಮಾಡುತ್ತೇವೆನ್ನುವ ಬಗ್ಗೆ ಇಲ್ಲಿ ಯಾವ assurance ಕೊಟ್ಟಿಲ್ಲ. ಇಲ್ಲಿ ಅವರು ಯಾವುದನ್ನೂ specific ಆಗಿ ಹೇಳಿಲ್ಲ. ಇಲ್ಲಿ ಪರ್ಯಾಯವಾಗಿ ಏನು ವ್ಯವಸ್ಥೆ ಮಾಡುತ್ತೇವೆಂದು ಸಹ ಹೇಳಿರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವಂತಹ ಉತ್ತರ ಸಮರ್ಪಕವಾಗಿರುವುದಿಲ್ಲ ಸಮಾಧಾನಕರವಾಗಿರುವುದಿಲ್ಲ. ಸುಮ್ಮನೇ ತೋರು–

ವಿಕೆಗಾಗಿ ಹೇಳುತ್ತಿದ್ದಾರೆ. ಒಂದು ಬೆಂಬಲ ಬೆಲೆಯನ್ನು ಕೊಡುತ್ತೇವೆಂದು, ಯಾವುದನ್ನೂ ಸಹ ಹೇಳಲಿಲ್ಲ. ಅವರು minimum ಮತ್ತು maximum price ಬಗ್ಗೆ ಹೇಳಿದರು. ಯಾವಾಗಲೂ fluctuation ಆಗುತ್ತದೆ ಎನ್ನುವ ಮಾತನ್ನೂ ಸಹ ಹೇಳಿದರು. ಹಾಗಾಗಿ ಅಡಿಕೆ ಬೆಳೆಗಾರರ ಮೇಲೆ ಬಹಳ ದುಷ್ಪರಿಣಾಮವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವಂತಹ ಉತ್ತರದಿಂದ ನಮಗೆ ಸಮಾಧಾನ ಬಂದಿಲ್ಲ. ಹಾಗಾಗಿ ಈ ಅಡಿಕೆ ಬೆಳೆಗಾರರಿಗೆ ದ್ರೋಹವನ್ನು ಮಾಡುತ್ತಿದ್ದಾರೆ.

ಶ್ರೀ ಆರ್.ಅಶೋಕ್ : ಇದು ರೈತ ವಿರೋಧಿಯಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕಾಗಿ ನಾವು ಇದನ್ನು ಪ್ರತಿಭಟಿಸಿ ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಬಿಜೆಪಿ ಪಕ್ಷದವರು ಸಭಾತ್ಯಾಗವನ್ನು ಮಾಡಿದರು)

ಅಧ್ಯಕ್ಷರು : ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುತ್ತದೆ.

(ಸದನವು 4 ಗಂಟೆ 47 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ: 5.6.2013ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)